ಆಗಸ್ಟ್ 2017 ಸಂಚಿಕೆ – 1 ಸಂಪುಟ – 33

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in

## ಈ ಸಂಚಿಕೆಯಲ್ಲಿ ...........


ಸಂಪಾದಕೀಯ ........ 2

"21ನೇ ಶತಮಾನದ ಭಾರತ' ರಾಷ್ಟ್ರಪತಿಗಳ ಆಶಯ ........ 3
*** ಕೃಪೆ : ಪಿಐಬಿ**

ಜಿಎಸ್‌ಟಿ ಚಾಲನೆ – ಮೇಕ್ ಇನ್ ಇಂಡಿಯಾ ಬಲವರ್ಧನೆ.. 6
*** ಅರುಣ್ ಗೋಯಲ್**

ಏಕೀಕೃತ ತೆರಿಗೆ ವ್ಯವಸ್ಥೆ ಪರ್ವ ........ 10
*** ಟಿ ಎನ್ ಅಶೋಕ್**

ಗ್ರಾಹಕರಿಗೆ ಲಾಭ ವರ್ಗಾವಣೆ – ಜಿಎಸ್‌ಟಿ ಜಾರಿ ಸವಾಲು.... 15
* ಗಿರೀಶ್ ಚಂದ್ರ ಪ್ರಸಾದ್

ಸದೃಢ ಐಟಿ – ಜಿಎಸ್‌ಟಿ ಬೆನ್ನೆಲುಬು ........ 18
*** ಪ್ರಕಾಶ್ ಕುಮಾರ್**

ಜಿಎಸ್‌ಟಿ ಹಾಗೂ ವ್ಯಾಪಾರ ವಹಿವಾಟು ........ 21
*** ಡ್ಯಾನಿಷ್ ಎ. ಹಶೀಮ್ ಮತ್ತು ವರ್ಷಾ ಕುಮಾರಿ**

ನುಡಿ ನಮನ ........ 26

ಒಕ್ಕೂಟ ಆರ್ಥಿಕ ಸಂಬಂಧಗಳ ಸಮತೋಲನ ........ 30
*** ಜಯಂತ್ ರಾಯ್ ಚೌಧುರಿ**

ಜಿಎಸ್‌ಟಿ – ನವ ಯುಗದ ಉದಯ ........ 32
*** ಸಿ ಎ ಉಪೇಂದ್ರ ಗುಪ್ತಾ**

ಸರಕು ಸೇವಾ ತೆರಿಗೆ–ವಿಪುಲ ಸಾಮರ್ಥ್ಯದ ಅದ್ಭುತ ನಡಿಗೆ...... 36
*** ದೇವರಾಜ ರೆಡ್ಡಿ**

ಗ್ರಾಹಕರಿಗೆ ಆಗುವ ಪ್ರಯೋಜನ ........ 41
*** ಸೂರಜ್ ಜೈಸ್ವಾಲ್**

ಮನ್ ಕೀ ಬಾತ್ ........ 45
*** ಕೃಪೆ : ಆಕಾಶವಾಣಿ, ಬೆಂಗಳೂರು**

ನಿಮಗಿದು ತಿಳಿದಿದೆಯೇ? ........ 51

ವಾರ್ತಾ ವಿಶೇಷ ........ 52


ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

Log on to
http://publicationsdivision.nic.in/, in collaboration with bharatkosh.gov.in

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಸಂಪಾದಕೀಯ




ಭಾರತದ ಆರ್ಥಿಕ ಇತಿಹಾಸದಲ್ಲಿ 2017 ಅತ್ಯಂತ ಮಹತ್ತರ ವರ್ಷ. 2017ರ ಜುಲೈ ಒಂದರಿಂದ ಸರಕು ಮತ್ತು ಸೇವಾ ತೆರಿಗೆ ಕಾರ್ಯರೂಪಕ್ಕೆ ಬಂದಿದೆ. ಈ ಹೊಸ ತೆರಿಗೆ ವ್ಯವಸ್ಥೆ ಭಾರತದ ತೆರಿಗೆ ಇತಿಹಾಸದಲ್ಲೆ ಅತ್ಯಂತ ಕ್ರಾಂತಿಕಾರಿ ಹೆಜ್ಜೆ ಎಂದು ಪರಿಗಣಿಸಲ್ಪಟ್ಟಿದೆ.

ಸದೃಢ ತೆರಿಗೆ ನೀತಿಗಳು ಯಾವುದೇ ದೇಶದ ಬಲಿಷ್ಠ ಆಡಳಿತ ಮತ್ತು ಸುಸ್ಥಿರ ಅಭಿವೃದ್ಧಿಯ ದ್ಯೋತಕಗಳಾಗಿವೆ. ಇದು ಅನುಭವ ವೇದ್ಯ ಮಾತು. ಇತಿಹಾಸದ ಪುಟಗಳನ್ನು ತೆರೆದಾಗ ಮೌರ್ಯರು, ಗುಪ್ತರು, ಇಲ್ತುತಮಿಷ್, ಅಕ್ಬರ್ ಹೀಗೆ ಅತ್ಯಂತ ಸಮರ್ಥ ಆಡಳಿತ ನಡೆಸಿದವರೆಲ್ಲ ಅತ್ಯುತ್ತಮ ತೆರಿಗೆ ಸಂಗ್ರಹಣೆ ವಿಧಾನ ರೂಪಿಸಿದ್ದರು. ಕೇವಲ ರಾಜಕೀಯ ಕಾರಣಗಳಿಗಾಗಿಯೇ ಅಲ್ಲದೆ ಅವರು ಅನುಸರಿಸಿದ ಅಚ್ಚುಕಟ್ಟಾದ ತೆರಿಗೆ ವಿಧಾನ, ತುಂಬಿದ ಬೊಕ್ಕಸ ಅವರ ದಕ್ಷ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ.


ತೆರಿಗೆ, ಆದಾಯದ ಮೂಲ ಹಾಗೂ ಅಭಿವೃದ್ಧಿಗೂ ಅವಶ್ಯಕ. ಇದರೊಂದಿಗೆ ಸರ್ಕಾರ ತೆರಿಗೆ ಪಾವತಿದಾರರಿಗೆ ಉತ್ತರದಾಯಿತ್ವ ಹೊಂದಿರುತ್ತದೆ. ಪರಿಣಾಮಕಾರಿಯಾದ ತೆರಿಗೆ ಪದ್ಧತಿ ದೀರ್ಘಾವಧಿಯಲ್ಲಿ ಸಾರ್ವಜನಿಕ ಹಣ, ಸಾಮಾಜಿಕ ಉದ್ದೇಶಗಳಿಗೆ ಸುಸ್ಥಿರವಾಗಿ ದೊರಕುವಂತೆ ಮಾಡುತ್ತದೆ ಹಾಗೂ ಆರ್ಥಿಕ ಅಭಿವೃದ್ಧಿ ಪ್ರೋತ್ಸಾಹಿಸುತ್ತದೆ. ತೆರಿಗೆ ಜಗತ್ತಿನಲ್ಲಿ ಭಾರತದ ಸಂಕೀರ್ಣಮಯ ತೆರಿಗೆ ಪದ್ಧತಿ ಸಾಕಷ್ಟು ಚಿಂತನೆಗೆ ಅವಕಾಶ ಕಲ್ಪಿಸಿತ್ತು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಎಲ್ಲವೂ ತೆರಿಗೆ ವಿಧಿಸುತ್ತಿದ್ದು, ಜನಸಾಮಾನ್ಯನಿಂದ ಹಿಡಿದು, ಸರಕು ತಯಾರಕರು, ವ್ಯಾಪಾರಿಗಳು, ಬಹುಮುಖ ತೆರಿಗೆ ಭಾರ ಅನುಭವಿಸುತ್ತಿದ್ದರು. ಈ ಎಲ್ಲಾ ವರ್ಷಗಳಲ್ಲಿ ಸರಕಿನ ತಯಾರಿಕಾ ಹಂತದಿಂದ ಕೊನೆಯವರೆಗೂ ವಿವಿಧ ಹಂತಗಳಲ್ಲಿ ತೆರಿಗೆ ಆಕರಿಸಲಾಗುತ್ತಿತ್ತು. ಅಂದರೆ ಒಂದೇ ಸರಕು ಮತ್ತು ಸೇವೆ ವಿವಿಧ ಹಂತದ ತೆರಿಗೆಗೆ ಒಳಪಡುತ್ತಿದ್ದವು. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸರಕು ಸಾಗಿಸುವಾಗ ಗಡಿಗಳಲ್ಲಿ ತಾಸುಗಟ್ಟಲೇ ನಿಲ್ಲಿಸಿಕೊಂಡು ವಿವಿಧ ರೀತಿಯ ತೆರಿಗೆಗಳನ್ನು ಪಾವತಿಸಬೇಕಾದ ಪರಿಸ್ಥಿತಿ ಇತ್ತು. ಇವುಗಳಲ್ಲಿ ವ್ಯರ್ಥ ಕಾಲಹರಣದ ಜೊತೆಗೆ ಉತ್ಪನ್ನಗಳು ಕೆಟ್ಟುಹೋಗುವ, ಆತಂಕವಿರುತ್ತಿತ್ತು. ಸಾರಿಗೆ ವೆಚ್ಚವೂ ಜೇಬಿಗೆ ಭಾರವಾಗುತ್ತಿದ್ದವು.

ಹೊಸ ತೆರಿಗೆ ಪದ್ಧತಿಯಲ್ಲಿ ದೇಶಾದ್ಯಂತ ಸರಕು ಮತ್ತು ಸೇವಾ ತೆರಿಗೆ ಒಂದೇ ತೆರಿಗೆ ಅಳವಡಿಸುವ ಮೂಲಕ ರಾಷ್ಟ್ರದ ತೆರಿಗೆ ಸಂಸ್ಕೃತಿಗೆ ಒಂದು ಚೌಕಟ್ಟು ಒದಗಿಸಲಾಗಿದೆ. ಆದರ್ಶ ತೆರಿಗೆ ವ್ಯವಸ್ಥೆ ಎಂದೇ ಪರಿಗಣಿತವಾಗಿರುವ, ಈ ಪದ್ಧತಿಯಲ್ಲಿ ಸರಕು ಮತ್ತು ಸೇವೆಗಳಿಗೆ ಸ್ವೀಕೃತಿಯ ಘಟ್ಟದಲ್ಲಿ ತೆರಿಗೆ ಸಂಗ್ರಹಿಸಲಾಗುತ್ತದೆ. ಉದಾಹರಣೆಗೆ ಬಟ್ಟೆ. ಇದಕ್ಕೆ ಬಟ್ಟೆ ಮಾರಾಟವಾಗುವ ಹಂತದಲ್ಲಿ ತೆರಿಗೆ ವಿಧಿಸಲಾಗುತ್ತದೆ. ಆದರೆ ಈ ಹಿಂದೆ, ಬಟ್ಟೆ ತಯಾರಿಸುವಾಗ, ಸಾಗಾಟ ಮಾಡುವಾಗ, ಕೊನೆಗೆ ಮಾರಾಟ ಮಾಡುವಾಗ ಹೀಗೆ ಎಲ್ಲ ಹಂತಗಳಲ್ಲಿ ತೆರಿಗೆಗೆ ಹಾಕಲಾಗುತ್ತಿತ್ತು. ಇದರರ್ಥ ಗ್ರಾಹಕರಿಗೆ ಅರಿವಿಲ್ಲದಂತೆ, ಅವರು ವಿವಿಧ ಹಂತದ ತೆರಿಗೆಗೆ ಒಳಪಡುತ್ತಿದ್ದರು. ಒಂದೇ ತೆರಿಗೆ ವ್ಯವಸ್ಥೆಯಿಂದ ಬಹುವಿಧ ತೆರಿಗೆ ಇಲ್ಲದಂತಾಗಿ ಸರಕು ಸೇವೆಗಳ ಬೆಲೆಯೂ ಕಡಿಮೆಯಾಗುತ್ತದೆ. ಜಿಎಸ್‌ಟಿ, ಪಾರದರ್ಶಕ ವ್ಯವಸ್ಥೆಯಾಗಿದ್ದು ಜಾರಿಗೊಳಿಸಲು ಸುಲಭ. ಇದು ಮೇಕ್ ಇನ್ ಇಂಡಿಯಾ ಹಾಗೂ ಇನ್ನಿತರ ವ್ಯಾಪಾರ ವಹಿವಾಟುಗಳಿಗೆ ಪ್ರೇರಕ ಶಕ್ತಿಯಾಗಲಿದೆ. ಇದು ವಿಶ್ವದ ಆರ್ಥಿಕತೆಯಲ್ಲೂ ಮಹತ್ವದ ಪಾತ್ರ ವಹಿಸಲಿದೆ. ಇದು ಭಾರತೀಯ ಉತ್ಪನ್ನಗಳಿಗೆ ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕತೆ ಒದಗಿಸುವ ಜೊತೆಗೆ ಒಟ್ಟಾರೆ ರಫ್ತು ಹೆಚ್ಚಾಗಿ, ಆರ್ಥಿಕತೆಗೆ ಆಯಾಮ ಒದಗಿಸುವ ಭರವಸೆ ಇದೆ.

ಸರಕು ಮತ್ತು ಸೇವಾ ತೆರಿಗೆಯಂತಹ ಬೃಹದಾಕಾರದ ಪದ್ಧತಿ ಜಾರಿಗೆ ಸದೃಢವಾದ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಅತ್ಯಾವಶ್ಯಕ. ಸರಕು ಮತ್ತು ಸೇವಾ ತೆರಿಗೆ ಜಾಲ (ಜಿಎಸ್‌ಟಿಎನ್) ವನ್ನು ಇದೇ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಸಮರ್ಥವಾಗಿರುವ ಈ ಜಾಲ, ನೂತನ ಸುಧಾರಣೆ ಕ್ರಮವನ್ನು ಅತ್ಯಂತ ಯಶಸ್ವಿಯಾಗಿಸುವುದೆಂದು ನಿರೀಕ್ಷಿಸಲಾಗಿದೆ. ಅನುಷ್ಠಾನ, ವ್ಯವಸ್ಥಿತವಾಗಿ ಪೂರ್ಣಗೊಂಡಾಗ ಈ ಅದ್ವಿತೀಯ ತೆರಿಗೆ ಪದ್ಧತಿ, ಭಾರತೀಯ ಆರ್ಥಿಕತೆಯ ಸುಸ್ಥಿರ ಬೆಳವಣಿಗೆ ಖಾತರಿಪಡಿಸುತ್ತದೆ.

ಇದು ಸಮರೂಪದ ರಾಷ್ಟ್ರೀಯ ಮಾರುಕಟ್ಟೆ ಒದಗಿಸುವ ಮೂಲಕ "ಒಂದು ದೇಶ, ಒಂದು ತೆರಿಗೆ, ಒಂದು ಮಾರುಕಟ್ಟೆ" ಕನಸನ್ನು ನನಸಾಗಿಸಲಿದೆ. ❑

# ‘21ನೇ ಶತಮಾನದ ಭಾರತ’ ರಾಷ್ಟ್ರಪತಿಗಳ ಆಶಯ




**ವ್ಯಕ್ತಿ ಚಿತ್ರಣ**
**ಭಾರತ 14ನೇ ರಾಷ್ಟ್ರಪತಿ**

| | | |
|---|---|---|
| ಪೂರ್ಣ ಹೆಸರು | : | ಶ್ರೀ ರಾಮ್ ನಾಥ್ ಕೋವಿಂದ |
| ಜನನ | : | ಅಕ್ಟೋಬರ್ 1, 1945 |
| ಸ್ಥಳ | : | ಪರೌಂಕ (ಕಾನ್ಪುರ ಬಳಿ) ಉತ್ತರ ಪ್ರದೇಶ |
| ತಂದೆ, ತಾಯಿ | : | ಶ್ರೀ ಮೈಕುಲಾಲ್ ಮತ್ತು ಶ್ರೀಮತಿ ಕಲಾವತಿ |
| ಪತ್ನಿ | : | ಶ್ರೀಮತಿ ಸವಿತ |
| ಶೈಕ್ಷಣಿಕ ಹಿನ್ನೆಲೆ | : | ಬಿ.ಕಾಂ., ಎಲ್‌ಎಲ್‌ಬಿ., ಕಾನ್ಪುರ ವಿಶ್ವವಿದ್ಯಾಲಯ |
| 1977 – 1979 | : | ದೆಹಲಿ ಹೈಕೋರ್ಟ್‌ನಲ್ಲಿ ಕೇಂದ್ರ ಸರ್ಕಾರದ ನ್ಯಾಯವಾದಿ |
| 1978 | : | ಅಡ್ವೋಕೇಟ್ ಆನ್ ರೆಕಾರ್ಡ್ ಸುಪ್ರಿಂ ಕೋರ್ಟ್ |
| 1980 – 1993 | : | ಸುಪ್ರೀಂ ಕೋರ್ಟಿನಲ್ಲಿ ಕೇಂದ್ರ ಸರ್ಕಾರದ ಸ್ಥಾಯಿ ಸಲಹಾಕಾರರು. 1993ರ ವರೆಗೆ 16 ವರ್ಷಗಳ ಕಾಲ ದೆಹಲಿ ಹೈಕೋರ್ಟ್ – ಸುಪ್ರೀಂಕೋರ್ಟ್‌ಗಳಲ್ಲಿ ನ್ಯಾಯವಾದಿಗಳಾಗಿ ಸೇವೆ |
| ರಾಷ್ಟ್ರಪತಿಗಳಾಗಿ ಅಧಿಕಾರ ಸ್ವೀಕಾರ | : | ಜುಲೈ 25, 2017 |
| ಇದಕ್ಕೂ ಮುನ್ನ... | | |
| 2015–17 | : | ರಾಜ್ಯಪಾಲರು, ಬಿಹಾರ |
| 1994–2006 | : | ರಾಜ್ಯಸಭಾ ಸದಸ್ಯರು |
| ಸಂಸದೀಯ ಅನುಭವ | : | ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗಗಳ ಕಲ್ಯಾಣ ಸಮಿತಿ, ಗೃಹ ಖಾತೆ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ, ಕಾನೂನು ಮತ್ತು ನ್ಯಾಯ. – ಹೀಗೆ ವಿವಿಧ ಸಂಸದೀಯ ಸಮಿತಿಗಳಲ್ಲಿ ಸೇವೆ. ರಾಜ್ಯಸಭಾದ ಸದನ ಸಮಿತಿಯ ಅಧ್ಯಕ್ಷರೂ ಆಗಿದ್ದರು. 2002ರ ಅಕ್ಟೋಬರ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತೀಯ ನಿಯೋಗದವರಾಗಿ ಮಾತನಾಡಿದ ಅನುಭವ. |

**ದೇಶದ 14ನೇ ರಾಷ್ಟ್ರಪತಿ ಶ್ರೀ ರಾಮ್ ನಾಥ್ ಕೋವಿಂದ ಅವರು ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮಾಡಿದ ಭಾಷಣದ ಪೂರ್ಣ ಪಾಠ**

ಗೌರವಾನ್ವಿತ ಶ್ರೀ ಪ್ರಣಬ್ ಮುಖರ್ಜಿಯವರೆ, ಶ್ರೀ ಹಮೀದ್ ಅನ್ಸಾರಿಯವರೆ, ಶ್ರೀ ನರೇಂದ್ರ ಮೋದಿಯವರೆ, ಶ್ರೀಮತಿ ಸುಮಿತ್ರಾ ಮಹಾಜನ್ ಅವರೇ, ನ್ಯಾಯಮೂರ್ತಿಗಳಾದ ಶ್ರೀ ಜೆ.ಎಸ್. ಖೇಹರ್ ಅವರೇ, ಘನತೆವೆತ್ತವರೆ, ಗೌರವಾನ್ವಿತ ಸಂಸದರೆ, ಮಹಿಳೆಯರೆ ಮತ್ತು ಮಹನೀಯರೆ ಹಾಗೂ ನನ್ನ ಸಹನಾಗರಿಕರೆ, ನನ್ನನ್ನು ಭಾರತದ ರಾಷ್ಟ್ರಪತಿಯನ್ನಾಗಿ ಚುನಾಯಿಸಿದ ನಿಮಗೆ ಧನ್ಯವಾದಗಳು. ನಾನು, ಸಂಸತ್ತಿನ ಈ ಸೆಂಟ್ರಲ್ ಹಾಲ್‌ಗೆ ಅತ್ಯಂತ ವಿನಯದಿಂದ ಹೆಜ್ಜೆ ಇಡುತ್ತಿದ್ದೇನೆ. ಈ ಸೆಂಟ್ರಲ್ ಹಾಲ್ ನನಗೆ ಹಲವು ನೆನಪುಗಳನ್ನು ತರುತ್ತಿದೆ. ಸಂಸತ್ ಸದಸ್ಯನಾಗಿದ್ದ ನಾನು, ಈ ಸಭಾಂಗಣದಲ್ಲೇ ನಿಮ್ಮಲ್ಲಿ ಹಲವರೊಂದಿಗೆ ಚರ್ಚೆಗಳನ್ನು ನಡೆಸಿದ್ದೇನೆ. ಹೆಚ್ಚಿನ ವಿಷಯಗಳಲ್ಲಿ ಪರಸ್ಪರ ಸಮ್ಮತಿಸುತ್ತಿದ್ದ ನಾವು, ಕೆಲವು ವಿಷಯಗಳನ್ನು ಒಪ್ಪದೆ ಇದ್ದುದೂ ಉಂಟು. ಆದರೆ, ನಾವಿಲ್ಲಿ ಒಬ್ಬರನ್ನೊಬ್ಬರು ಗೌರವಿಸುವುದನ್ನು ಕಲಿತಿದ್ದೇವೆ. ಇದೇ ಪ್ರಜಾಪ್ರಭುತ್ವದ ನಿಜವಾದ ಚೆಲುವು.

ನಾನು ಒಂದು ಸಣ್ಣ ಹಳ್ಳಿಯಲ್ಲಿ, ಮಣ್ಣಿನ ಗೋಡೆಗಳಿದ್ದ ಮನೆಯಲ್ಲಿ ಬೆಳೆದವನು. ಇದುವರೆಗಿನ ನನ್ನ ಪಯಣ ತುಂಬಾ ದೀರ್ಘವಾಗಿದೆ. ಆದರೂ, ಇದು ಕೇವಲ ನನ್ನೊಬ್ಬನ ಪಯಣ ಮಾತ್ರವೇ ಅಲ್ಲ. ಈ ಪಯಣವು ನಮ್ಮ ರಾಷ್ಟ್ರ ಮತ್ತು ಸಮಾಜದ ಬಗ್ಗೆ ಕೂಡ ಸಾಕಷ್ಟನ್ನು

ಹೇಳುತ್ತದೆ. ಅಂದಂತೆ ನಮ್ಮ ಸಮಾಜವು ತನಗೆದುರಾದ ಸಮಸ್ಯೆಗಳಿಗೆಲ್ಲ ಸಂವಿಧಾನದ ಪೀಠಿಕೆಯ ಭಾಗದಲ್ಲಿ ಹೇಳಿರುವ ನ್ಯಾಯ ವಿತರಣೆಯ ಭರವಸೆ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳನ್ನೇ ಪರಿಹಾರದ ಮಂತ್ರಗಳನ್ನಾಗಿ ಭಾವಿಸಿ, ಅದೇ ಹಾದಿಯಲ್ಲಿ ಸಾಗಿಬಂದಿದೆ. ನಾನು ಕೂಡ ಸದಾ ಈ ಮೂಲಮಂತ್ರಗಳನ್ನೇ ಅನುಸರಿಸುತ್ತೇನೆ.

ನಾನು ಈ ದೇಶದ 125 ಕೋಟಿ ಜನರಿಗೆ ತಲೆಬಾಗುತ್ತೇನೆ. ಅಷ್ಟೇ ಅಲ್ಲ, ಅವರೆಲ್ಲರೂ ನನ್ನ ಮೇಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುತ್ತೇನೆ ಎಂಬ ಭರವಸೆಯನ್ನೂ ಕೊಡುತ್ತೇನೆ. ಡಾ.ಬಾಬು ರಾಜೇಂದ್ರಪ್ರಸಾದ್, ಡಾ.ಎಸ್. ರಾಧಾಕೃಷ್ಣನ್, ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಮತ್ತು ನನ್ನ ಅತ್ಯಂತ ನಿಕಟಪೂರ್ವ ರಾಷ್ಟ್ರಪತಿಗಳಾದ, ನಾವೆಲ್ಲರೂ ಪ್ರೀತಿಯಿಂದ 'ಪ್ರಣಬ್ ದಾ' ಎಂದು ಕರೆಯುವ ಶ್ರೀ ಪ್ರಣಬ್ ಮುಖರ್ಜಿ ಅವರಂಥ ದಿಗ್ಗಜರ ಹಾದಿಯನ್ನು ಅನುಸರಿಸುತ್ತಿದ್ದೇನೆ ಎನ್ನುವುದು ನನಗೆ ತಿಳಿದಿದೆ.

ನಾವು ಗಳಿಸಿರುವ ಸ್ವಾತಂತ್ರ್ಯವು ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಸಾವಿರಾರು ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರರು ನಡೆಸಿದ ಹೋರಾಟದ ಫಲವಾಗಿದೆ. ನಂತರ, ಸರ್ದಾರ್ ವಲ್ಲಭಭಾಯಿ ಪಟೇಲರು ಈ ದೇಶವನ್ನು ಒಂದುಗೂಡಿಸಿದರು. ಸಂವಿಧಾನದ ಪ್ರಧಾನ ಶಿಲ್ಪಿಗಳಾದ ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಅವರು ನಮ್ಮಲ್ಲಿ ಮಾನವ ಘನತೆ ಮತ್ತು ಗಣರಾಜ್ಯದ ಮೌಲ್ಯಗಳನ್ನು ಬಿತ್ತಿದರು. ಈ ನಾಯಕರೆಲ್ಲರೂ ಕೇವಲ ರಾಜಕೀಯ ಸ್ವಾತಂತ್ರ್ಯದಲ್ಲಿ ಮಾತ್ರ ನಂಬಿಕೆಯನ್ನು ಇಟ್ಟುಕೊಂಡಿರಲಿಲ್ಲ. ಬದಲಿಗೆ, ಈ ದೇಶದ ಕೋಟ್ಯಂತರ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳು ಕೂಡ ಅತ್ಯಂತ ನಿರ್ಣಾಯಕ ಎಂದು ಅವರು ತಿಳಿದುಕೊಂಡಿದ್ದರು. ನಮಗೆ ಸ್ವಾತಂತ್ರ್ಯ ಬಂದು ಸದ್ಯದಲ್ಲೇ 70 ವರ್ಷಗಳಾಗುತ್ತಿವೆ. ಹಾಗೆಯೇ, 21ನೇ ಶತಮಾನದ ಎರಡನೇ ದಶಕಕ್ಕೂ ಕಾಲಿಟ್ಟಿದ್ದೇವೆ. ನಮ್ಮಲ್ಲಿ ಅನೇಕರು ಇದನ್ನು 'ಭಾರತದ ಶತಮಾನ' ಎಂದು ದೃಢವಾಗಿ ನಂಬಿದ್ದು, ಈ ಶತಮಾನವು ಭಾರತ ಮತ್ತು ಅದರ ಸಾಧನೆಗಳಿಂದ ಮಾರ್ಗದರ್ಶನ ಪಡೆಯಲಿದೆ ಎಂದುಕೊಂಡಿದ್ದಾರೆ. ನಾವು ಆರ್ಥಿಕವಾಗಿ ಮುಂಚೂಣಿಯಲ್ಲಿರುವಂಥ ಭಾರತವನ್ನಷ್ಟೆ ಅಲ್ಲ, ಅದರ ಜತೆಜತೆಯಲ್ಲೇ ನೈತಿಕವಾಗಿ ಶಕ್ತಿಶಾಲಿಯಾಗಿರುವ ಭಾರತವನ್ನೂ ನಿರ್ಮಿಸಬೇಕಾಗಿದೆ. ನಮಗಂತೂ ಇವೆರಡೂ ಮೈಲುಗಲ್ಲುಗಳು ಬೇರೆಬೇರೆಯಲ್ಲ. ಬದಲಿಗೆ, ಆರ್ಥಿಕಶಕ್ತಿ ಮತ್ತು ನೈತಿಕ ಶಕ್ತಿ ಎರಡೂ ಸದಾ ಜತೆಗೂಡಿಕೊಂಡೇ ಇರಬೇಕು.

ಭಾರತದ ಯಶಸ್ಸಿಗೆ ನಮ್ಮಲ್ಲಿರುವ ವೈವಿಧ್ಯವೇ ಮೂಲಕಾರಣ. ನಮ್ಮನ್ನು ಅನನ್ಯರನ್ನಾಗಿಸಿರುವ ತತ್ವ ಯಾವುದೆಂದರೆ, ಈ ವೈವಿಧ್ಯವೇ. ನಮ್ಮ ಈ ನಾಡಿನಲ್ಲಿ ನಾವು ಹತ್ತಾರು ರಾಜ್ಯಗಳು, ಪ್ರಾಂತ್ಯಗಳು, ಧರ್ಮಗಳು, ಭಾಷೆಗಳು, ಸಂಸ್ಕೃತಿಗಳು, ಜೀವನಶೈಲಿಗಳು ಮತ್ತು ಇನ್ನೂ ಇಂಥ ಹತ್ತಾರು ಸಂಗತಿಗಳನ್ನು ಕಾಣಬಹುದು. ನಾವು ತುಂಬಾ ವಿಭಿನ್ನವಾಗಿದ್ದೇವೆ, ನಿಜ. ಆದರೆ, ಅದೇ ಸಮಯದಲ್ಲಿ ನಾವು ಸಮಾನರೂ ಏಕತೆಯುಳ್ಳವರೂ ಆಗಿದ್ದೇವೆ.

21ನೇ ಶತಮಾನದ ಭಾರತವು ಪುರಾತನ ಮೌಲ್ಯಗಳನ್ನೂ ಒಳಗೊಂಡಿದೆ; ಹಾಗೆಯೇ, ನಾಲ್ಕನೇ ಕೈಗಾರಿಕಾ ಕ್ರಾಂತಿಯ ಹಾದಿಯಲ್ಲೂ ನಡೆಯುತ್ತಿದೆ. ಇಲ್ಲಿ ಯಾವುದೇ ದ್ವಂದ್ವಗಳೂ ಇಲ್ಲ; ಆಯ್ಕೆಯ ಗೊಂದಲಗಳೂ ಇಲ್ಲ. ನಾವು ಸಂಪ್ರದಾಯ ಮತ್ತು ತಂತ್ರಜ್ಞಾನ ಎರಡನ್ನೂ ಬೆಸೆಯಬೇಕು, ಜತೆಗೆ, ಪುರಾತನ ಭಾರತದ ವಿವೇಕ ಮತ್ತು ಸಮಕಾಲೀನ ಇಂಡಿಯಾದ ವಿಜ್ಞಾನ ಎರಡರ ಜತೆಯಲ್ಲೂ ಸಾಗಬೇಕು.

ಒಂದೆಡೆಯಲ್ಲಿ, ದೇಶದ ಗ್ರಾಮ ಪಂಚಾಯಿತಿ ವ್ಯವಸ್ಥೆಯು ನಮ್ಮ ಜನಸಮುದಾಯದ ಸಮಸ್ಯೆಗಳನ್ನು ಪರಿಹರಿಸಬೇಕು; ಇನ್ನೊಂದೆಡೆಯಲ್ಲಿ ಅಂಕೀಕೃತ ಗಣತಂತ್ರ ಅಭಿವೃದ್ಧಿಯಲ್ಲಿ ದಾಪುಗಾಲುಗಳನ್ನಿಡಲು ನೆರವು ನೀಡಬೇಕು. ನಮ್ಮ ರಾಷ್ಟ್ರದ ಸಾಧನೆಗಳ ಸಾಹಸಗಾಥೆಯಲ್ಲಿ ಇವೆರಡೂ ಆಧಾರಸ್ತಂಭಗಳಾಗಿವೆ. ಕೇವಲ ಸರ್ಕಾರಗಳಷ್ಟೇ ಒಂದು ರಾಷ್ಟ್ರವನ್ನು ನಿರ್ಮಿಸಲು ಆಗುವುದಿಲ್ಲ. ಅಬ್ಬಬ್ಬಾ ಎಂದರೆ, ಸರ್ಕಾರವು ಈ ವಿಷಯದಲ್ಲಿ ಒಳ್ಳೆಯ ಮಧ್ಯವರ್ತಿಯಾಗಿ ಕೆಲಸ ಮಾಡಿ, ಒಂದು ಸಮಾಜದಲ್ಲಿರುವ ಉದ್ಯಮಶೀಲತೆ ಮತ್ತು ರಚನಾತ್ಮಕ ಶಕ್ತಿಯನ್ನು ಹುರಿದುಂಬಿಸಬಹುದಷ್ಟೆ. ರಾಷ್ಟ್ರನಿರ್ಮಾಣವು ಯಾವಾಗಲೂ ರಾಷ್ಟ್ರಾಭಿಮಾನವನ್ನು ಬಯಸುತ್ತದೆ.



- ಭಾರತದ ನೀರು ಮತ್ತು ನೆಲಗಳ ಬಗ್ಗೆ ನಮಗೆ ಅಭಿಮಾನವಿದೆ.
- ಭಾರತದ ವೈವಿಧ್ಯ, ಧಾರ್ಮಿಕ ಸೌಹಾರ್ದ ಮತ್ತು ಎಲ್ಲರನ್ನೂ ಒಳಗೊಳ್ಳುವಂಥ ಮೌಲ್ಯಗಳ ಬಗ್ಗೆ ನಮಗೆ ಹೆಮ್ಮೆ ಇದೆ.
- ಭಾರತದ ಸಂಸ್ಕೃತಿ, ಪರಂಪರೆ ಮತ್ತು ಆಧ್ಯಾತ್ಮಿಕತೆಯ ಬಗ್ಗೆ ನಮಗೆ ಅಭಿಮಾನವಿದೆ.
- ನಮ್ಮ ಸಹನಾಗರಿಕರ ಬಗ್ಗೆ ನಮಗೆ ಹೆಮ್ಮೆಯ ಭಾವನೆ ಇದೆ.
- ನಮ್ಮ ಕೆಲಸಗಳ ಬಗ್ಗೆ ನಮಗೆ ಅಭಿಮಾನವಿದೆ.
- ಇಷ್ಟೇ ಅಲ್ಲ, ದಿನನಿತ್ಯವೂ ನಾವು ಮಾಡುವ ಸಣ್ಣಪುಟ್ಟ ಸಂಗತಿಗಳ ಬಗ್ಗೆಯೂ ನಮಗೆ ಅಭಿಮಾನವಿದೆ.

ದೇಶದ ಪ್ರತಿಯೊಬ್ಬ ಪ್ರಜೆಯೂ ರಾಷ್ಟ್ರನಿರ್ಮಾಪಕರೇ ಆಗಿದ್ದಾರೆ. ಇಲ್ಲಿನ ಪ್ರತಿಯೊಬ್ಬರೂ ಕೂಡ ನಾವೆಲ್ಲರೂ ಮುಂದಿನ ತಲೆಮಾರುಗಳಿಗೆ ಹಸ್ತಾಂತರಿಸುವ ಭಾರತದ ಸಮೃದ್ಧಿ ಮತ್ತು ಪರಂಪರೆಗಳ ಕಾವಲುಗಾರರೇ ಆಗಿದ್ದಾರೆ.

- ನಮ್ಮ ಗಡಿಗಳನ್ನು ಕಾಯುತ್ತ, ನಾವೆಲ್ಲರೂ ಸುರಕ್ಷಿತವಾಗಿರಲು ಶ್ರಮಿಸುತ್ತಿರುವ ಸಶಸ್ತ್ರ ಪಡೆಗಳು ರಾಷ್ಟ್ರನಿರ್ಮಾಣ ಮಾಡುತ್ತಿವೆ.
- ಭಯೋತ್ಪಾದನೆ ಮತ್ತು ಅಪರಾಧಗಳ ವಿರುದ್ಧ ಹೋರಾಡುತ್ತಿರುವ ದೇಶದ ಅರೆಸೇನಾ ಪಡೆಗಳು ಮತ್ತು ಪೊಲೀಸ್ ವ್ಯವಸ್ಥೆ ಕೂಡ ದೇಶ ಕಟ್ಟುವ ಕಾಯಕವನ್ನೇ ಮಾಡುತ್ತಿವೆ.
- ಭಾರತದ ಅಂತರಿಕ್ಷ ನೌಕೆಯನ್ನು ಮಂಗಳ ಗ್ರಹಕ್ಕೆ ಕಳಿಸಲು, ಇಲ್ಲವೇ ಒಂದು ಲಸಿಕೆಯನ್ನು ಆವಿಷ್ಕರಿಸಲು ತಮ್ಮ ಪ್ರಯೋಗಾಲಯಗಳಲ್ಲಿ ದಿನದ ಇಪ್ಪತ್ನಾಲ್ಕು ಗಂಟೆಯೂ

ದಣಿವರಿಯದೆ ಕೆಲಸ ಮಾಡುತ್ತಿರುವ ವಿಜ್ಞಾನಿಗಳು ಕೂಡ ರಾಷ್ಟ್ರನಿರ್ಮಾಪಕರೇ ಆಗಿದ್ದಾರೆ.

* ಯಾವುದೊ ಒಂದು ದೂರದ ಕುಗ್ರಾಮದಲ್ಲಿ ಒಬ್ಬ ರೋಗಿಯನ್ನು ಉಪಚರಿಸುತ್ತಿರುವ ಶುಶ್ರೂಷಕಿ, ಇಲ್ಲವೇ ವೈದ್ಯರು ಕೂಡ ರಾಷ್ಟ್ರವನ್ನು ಕಟ್ಟುವ ಶಿಲ್ಪಿಗಳೇ ಆಗಿದ್ದಾರೆ.

* ಒಂದು ನವೋದ್ಯಮವನ್ನು ಸ್ಥಾಪಿಸಿ, ಉದ್ಯೋಗಗಳನ್ನು ಸೃಷ್ಟಿಸುವ ತರುಣನೂ ರಾಷ್ಟ್ರ ನಿರ್ಮಾಣವನ್ನೇ ಮಾಡುತ್ತಿರುತ್ತಾನೆ. ಇಂಥ ನವೋದ್ಯಮಗಳು ಒಂದು ಸಣ್ಣ ತೋಟದಲ್ಲಿ ಅರಳಬಹುದು, ಮಾವಿನ ಕಾಯಿಯನ್ನು ಉಪ್ಪಿನಕಾಯಿಯನ್ನಾಗಿ ಮಾಡುವುದೇ ಇರಬಹುದು ಅಥವಾ ಕಲಾವಿದನೊಬ್ಬ ಹಳ್ಳಿಯಲ್ಲಿರಬಹುದು ಅಥವಾ ದೈತ್ಯಪರದೆಗಳನ್ನು ಒಳಗೊಂಡಿರುವ ಪ್ರಯೋಗಾಲಯಗಳಲ್ಲಿ ಮೈದಾಳಬಹುದು.

* ನಮ್ಮ ಬುಡಕಟ್ಟು ಮತ್ತು ಸಾಮಾನ್ಯ ಜನರು ನಮ್ಮ ದೇಶದ ಕಾಡು ಮತ್ತು ಕಾಡುಪ್ರಾಣಿಗಳನ್ನು ಸಂರಕ್ಷಿಸುತ್ತಿದ್ದಾರೆ; ಇನ್ನು ಕೆಲವರು ಹವಾಮಾನ ಬದಲಾವಣೆಯನ್ನು ಹಿಮ್ಮೆಟ್ಟಿಸುತ್ತಿದ್ದಾರೆ. ಮತ್ತಷ್ಟು ಜನರು ಮರುಬಳಕೆ ಮಾಡಬಹುದಾದ ಇಂಧನ ಕ್ಷೇತ್ರದಲ್ಲಿ ಸುಧಾರಣೆಗಳನ್ನು ತರಲು ಶ್ರಮಿಸುತ್ತಿದ್ದಾರೆ. ಇವರೆಲ್ಲರೂ ರಾಷ್ಟ್ರನಿರ್ಮಾಪಕರೇ ಆಗಿದ್ದಾರೆ.

* ಕಚೇರಿಯಲ್ಲಿನ ತನ್ನ ಕರ್ತವ್ಯದಾಚೆಗೂ ಪ್ರವಾಹಪೀಡಿತ ರಸ್ತೆಯಲ್ಲೊ, ಸುಗಮ ಸಂಚಾರ ವ್ಯವಸ್ಥೆಗಾಗಿಯೊ, ಅಥವಾ ಪ್ರಶಾಂತವಾಗಿರುವ ಕೊಠಡಿಯಲ್ಲೋ, ರಾಶಿರಾಶಿಯಾಗಿ ಇರುವ ಕಡತಗಳ ಮಧ್ಯೆಯೋ ಬದ್ಧತೆಯಿಂದ ದುಡಿಯುವ ಸಾರ್ವಜನಿಕ ಸೇವಕ ಕೂಡ ರಾಷ್ಟ್ರನಿರ್ಮಾಣದ ಕಾಯಕದಲ್ಲೇ ತನ್ನನ್ನು ತಾನು ತೊಡಗಿಸಿಕೊಂಡಿರುತ್ತಾನೆ.

* ಚಿಕ್ಕಮಕ್ಕಳಿಗೆ ನಿಸ್ವಾರ್ಥವಾಗಿ ಪಾಠ ಮಾಡುತ್ತ, ಅವರ ವ್ಯಕ್ತಿತ್ವವನ್ನು ನಿರ್ಮಿಸುವ ಶಿಕ್ಷಕರು ಕೂಡ ಇದೇ ಕರ್ತವ್ಯದಲ್ಲಿ ತನ್ಮಯರಾಗಿರುತ್ತಾರೆ.




* ತಮಗಿರುವ ಹತ್ತಾರು ತರಹದ ಜವಾಬ್ದಾರಿಗಳೊಂದಿಗೆ ತಮ್ಮತಮ್ಮ ಕುಟುಂಬಗಳ ಯೋಗಕ್ಷೇಮವನ್ನೂ ನೋಡಿಕೊಳ್ಳುವ, ಮನೆಯಲ್ಲಷ್ಟೆ ಅಲ್ಲದೆ ಹೊರಗೂ ದುಡಿಯುವ, ಹೆತ್ತ ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸಲು ಜೋಪಾನವಾಗಿ ಬೆಳೆಸುವ ಅಸಂಖ್ಯಾತ ಮಹಿಳೆಯರು ಕೂಡ ರಾಷ್ಟ್ರಶಿಲ್ಪಿಗಳೇ ಆಗಿದ್ದಾರೆ.

ಗ್ರಾಮ ಪಂಚಾಯಿತಿಯಿಂದ ಹಿಡಿದು ಸಂಸತ್ತಿನವರೆಗೂ ಜನರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ, ಕಳುಹಿಸುತ್ತಾರೆ. ಈ ಮೂಲಕ ಅವರು ತಮ್ಮ ನಂಬಿಕೆಯನ್ನೆಲ್ಲ ಈ ಪ್ರತಿನಿಧಿಗಳಲ್ಲಿ ಇಟ್ಟಿರುತ್ತಾರೆ. ಇದಕ್ಕೆ ಪ್ರತಿಯಾಗಿ, ಜನಪ್ರತಿನಿಧಿಗಳು ಕೂಡ ರಾಷ್ಟ್ರಸೇವೆಗಾಗಿ ತಮ್ಮ ಬದುಕನ್ನು ವಿನಿಯೋಗಿಸುತ್ತಾರೆ. ಆದರೆ, ನಮ್ಮ ಈ ಸಾಹಸವು ಕೇವಲ ನಮಗೆ ಮಾತ್ರವೇ ಸೀಮಿತವಲ್ಲ. ಭಾರತವು ಶತಶತಮಾನಗಳಿಂದಲೂ 'ಇಡೀ ವಿಶ್ವವೇ ನಮ್ಮ ಕುಟುಂಬ' (ವಸುಧೈವ ಕುಟುಂಬಕಂ) ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟುಕೊಂಡು ಬಂದಿದೆ. ಬುದ್ಧನ ಈ ನಾಡು ಶಾಂತಿ, ನೆಮ್ಮದಿ ಮತ್ತು ಪರಿಸರ ಸಮತೋಲನಕ್ಕಾಗಿ ಹುಡುಕಾಡುತ್ತಿರುವ ಜಗತ್ತನ್ನು ಭಾರತವೇ ಮುನ್ನಡೆಸಬೇಕು ಎಂಬುದು ಸರಿಯಾಗಿಯೇ ಇದೆ. ಇಂದು ಜಗತ್ತಿನಲ್ಲಿ ಭಾರತದ ದನಿಗೆ ಬೆಲೆ ಇದೆ. ಇಡೀ ವಿಶ್ವವೇ ಇಂದು ಭಾರತೀಯ ಸಂಸ್ಕೃತಿ ಮತ್ತು ಸಾತ್ವಿಕ ಶಕ್ತಿಗಳತ್ತ ಆಕರ್ಷಿತವಾಗಿದೆ. ಭಯೋತ್ಪಾದನೆಯೇ ಇರಲಿ, ಹಣದ ಅಕ್ರಮ ವಹಿವಾಟೇ ಇರಲಿ, ಅಥವಾ ಹವಾಮಾನ ಬದಲಾವಣೆಯೇ ಇರಲಿ, ಒಟ್ಟಿನಲ್ಲಿ ಯಾವುದೇ ಅಂತಾರಾಷ್ಟ್ರೀಯ ಸ್ವರೂಪದ ಸಮಸ್ಯೆಗಳಿದ್ದರೂ ಸರಿಯೇ, ಜಗತ್ತು ಇಂದು ಪರಿಹಾರಕ್ಕಾಗಿ ನಮ್ಮತ್ತ ನೋಡುತ್ತಿದೆ. ಜಾಗತೀಕರಣಗೊಂಡಿರುವ ಇಂದಿನ ಜಗತ್ತಿನಲ್ಲಿ ನಮ್ಮ ಹೊಣೆಗಾರಿಕೆಗಳೂ ಕೂಡ ಜಾಗತಿಕ ಸ್ವರೂಪದವೇ ಆಗಿವೆ. ಇದು ನಮ್ಮನ್ನು ಇಡೀ ಜಗತ್ತಿನೊಂದಿಗೆ, ಜಾಗತಿಕ ಕುಟುಂಬದೊಂದಿಗೆ, ವಿದೇಶಗಳಲ್ಲೆಲ್ಲ ಇರುವ ನಮ್ಮವರೊಂದಿಗೆ ಬೆಸೆದಿದೆ. ಇವರೆಲ್ಲರೂ ಜಗತ್ತಿನಾದ್ಯಂತ ನಾನಾ ಬಗೆಗಳಲ್ಲಿ ತಮ್ಮ ಕೊಡುಗೆಯನ್ನು ನೀಡುತ್ತಿದ್ದಾರೆ.

ಒಂದು ದೇಶವಾಗಿ ನಾವು ಸಾಕಷ್ಟು ಸಾಧಿಸಿದ್ದೇವೆ, ನಿಜ. ಆದರೆ, ಇನ್ನೂ ಹೆಚ್ಚಿನ ಸಾಧನೆಗೆ, ಇನ್ನೂ ಉತ್ತಮವಾದ ವ್ಯವಸ್ಥೆಯ ನಿರ್ಮಾಣಕ್ಕೆ ಮತ್ತು ಇದನ್ನೆಲ್ಲ ಕ್ಷಿಪ್ರವಾಗಿ ಸಾಧಿಸಲು ನಿರಂತರ ಪ್ರಯತ್ನಗಳು ಅಗತ್ಯ. 2022ರಲ್ಲಿ ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವ ಹಿನ್ನೆಲೆಯಿಂದ ನೋಡಿದರೆ ಇದಕ್ಕೆ ಹೆಚ್ಚಿನ ಮಹತ್ವವಿದೆ. ಇದನ್ನು ಬಿಡಿಸಿ ಹೇಳುವುದಾದರೆ, ನಾವು ಅವಕಾಶಗಳಿಂದ ವಂಚಿತವಾಗಿರುವ ಕಟ್ಟಕಡೆಯ ಹಳ್ಳಿಯ ಕಟ್ಟಕಡೆಯ ವ್ಯಕ್ತಿಗೆ, ಅದರಲ್ಲೂ ಹೆಣ್ಣು ಮಗುವಿಗೆ ಎಲ್ಲ ಬಗೆಯ ಸೌಲಭ್ಯಗಳನ್ನೂ ಅವಕಾಶಗಳನ್ನೂ ತಲುಪಿಸಬೇಕು. ನಮ್ಮ ಈ ಸಾಮರ್ಥ್ಯದ ಬಗ್ಗೆ ನಾವು ಚಿಂತಿಸಬೇಕು. ಈ ಸೂತ್ರವು ಎಲ್ಲ ಬಗೆಯ ನ್ಯಾಯದ ವೇದಿಕೆಗಳಲ್ಲೂ ಕ್ಷಿಪ್ರ ಮತ್ತು ಕೈಗೆಟುಕುವಂಥ ನ್ಯಾಯದಾನ ಅನುಕೂಲವನ್ನೂ ಕಡ್ಡಾಯವಾಗಿ ಒಳಗೊಳ್ಳಬೇಕು. ಈ ದೇಶದ ಪ್ರಜೆಗಳೇ ನನ್ನ ಶಕ್ತಿಯ ನಿಜವಾದ ಮೂಲವಾಗಿದ್ದಾರೆ. ಈ ದೇಶಕ್ಕೆ ಸೇವೆ ಸಲ್ಲಿಸಲು ಅಗತ್ಯವಾಗಿರುವ ಶಕ್ತಿಯನ್ನು ಇವರು ಇನ್ನುಮುಂದೆಯೂ ನನಗೆ ನೀಡಲಿದ್ದಾರೆ ಎನ್ನುವ ವಿಶ್ವಾಸ ನನಗಿದೆ.

ಮಹಾತ್ಮಗಾಂಧಿ ಮತ್ತು ದೀನದಯಾಳ್ ಉಪಾಧ್ಯಾಯ ಅವರು ಕಲ್ಪಿಸಿಕೊಂಡಿದ್ದ ದೃಢ ಮತ್ತು ಹೆಚ್ಚಿನ ಬೆಳವಣಿಗೆಯ ದರವನ್ನುಳ್ಳ ಆರ್ಥಿಕತೆಯನ್ನೂ, ಶಿಕ್ಷಿತ ಮತ್ತು ಮೌಲ್ಯಯುತ, ಸಹಭಾಗಿತ್ವದ ಪ್ರಜ್ಞೆಇರುವ ಸಮುದಾಯ, ಮತ್ತು ಸಮಾನತೆಯಿಂದ ಕೂಡಿದ ಸಮಾಜವನ್ನು ನಾವು ಕಟ್ಟಬೇಕಾಗಿದೆ. ಇವೆಲ್ಲವೂ ನಮ್ಮ ಮಾನವಧರ್ಮದ ಅವಿಭಾಜ್ಯ ಅಂಗಗಳಾಗಿವೆ. ಇದೇ ನಮ್ಮ ಕನಸಿನ ಭಾರತ. ಇಂಥ ಭಾರತವು ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ಕಲ್ಪಿಸಲಿದೆ. ಇದೇ 21ನೇ ಶತಮಾನದ ಭಾರತ!

ಎಲ್ಲರಿಗೂ ಧನ್ಯವಾದಗಳು!


ಜೈ ಹಿಂದ್ ವಂದೇ ಮಾತರಂ

**(ಕೃಪೆ – ಪಿಐಬಿ)**

❑

# ಜಿಎಸ್‌ಟಿ ಚಾಲನೆ – ಮೇಕ್ ಇನ್ ಇಂಡಿಯಾ ಬಲವರ್ಧನೆ

* ಅರುಣ್ ಗೋಯಲ್




**ಹೊಸ ಜಿಎಸ್‌ಟಿ ಆಡಳಿತವು ಹೆಚ್ಚು ಮತ್ತು ಹೆಚ್ಚು ಉದ್ಯಮಗಳನ್ನು ಔಪಚಾರಿಕ ಆರ್ಥಿಕತೆಗೆ ತರಲಿದೆ. ಯಾವುದೇ ವಿಸ್ತಾರವಾದ ಆಮೂಲಾಗ್ರ ಬದಲಾವಣೆಯಂತೆ ಇದೂ ಅಲ್ಪ ಸ್ವಲ್ಪ ನೋವನ್ನು ತರಿಸಲಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿನ ಎರಡೂ ತೆರಿಗೆ ಆಡಳಿತಗಳು ಪರಿವರ್ತನೆಯನ್ನು ನಯವಾಗಿಯೇ ಮಾಡಲು ಶ್ರಮಿಸುತ್ತಿದ್ದಾರೆ. ಆದರೆ ಈ ಕ್ಷಣಿಕ ಭಾರತದ ಆರ್ಥಿಕತೆಗೆ ಹಲವು ಮತ್ತು ದೀರ್ಘ ಕಾಲದ ಗಳಿಕೆ ಸಿಗಲಿದೆ.**

ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಗೆ ಜುಲೈ ಒಂದರಂದು ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ರಾಷ್ಟ್ರಪತಿ ಹಾಗೂ ಪ್ರಧಾನಿಯವರು ಚಾಲನೆ ನೀಡಿದರು. ಅದು ನಿಜವಾಗಿಯೂ ಐತಿಹಾಸಿಕ ಸಂದರ್ಭ ಹಾಗೂ ಒಂದು ದೇಶ, ಒಂದು ತೆರಿಗೆ, ಒಂದು ಮಾರುಕಟ್ಟೆಯತ್ತ ಭಾರತದ ಒಂದು ಮಾದರಿ ಬದಲಾವಣೆಯಾಗಿತ್ತು. ಜಿಎಸ್‌ಟಿ ಜಾರಿಯು ಎಲ್ಲ ಷೇರುದಾರರಿಗೆ ಹಲವು ಪ್ರಯೋಜನಗಳನ್ನು ನೀಡುತ್ತದೆ ಎಂಬುದು ಜಾಗತಿಕವಾಗಿಯೂ ರುಜುವಾತಾಗಿದೆ. ಭಾರತೀಯ ಜಿಎಸ್‌ಟಿ ಆಡಳಿತದಲ್ಲಿ ತೆರಿಗೆಗಳು ತಳಮಟ್ಟಕ್ಕೆ ಇಳಿಯುವುದರಿಂದ ಮತ್ತು ದಕ್ಷತೆ ಹೆಚ್ಚುವ ಕಾರಣ ಬಳಕೆದಾರರು ಕಡಿಮೆ ದರಗಳಿಂದ ಲಾಭ ಪಡೆಯಲಿದ್ದಾರೆ. ದೇಶಾದ್ಯಂತ ಏಕರೂಪದ ಏಕ ಪರೋಕ್ಷ ತೆರಿಗೆ, ಒಳಸುರಿವು ತೆರಿಗೆಯ ತಡೆರಹಿತ ಹರಿವಿನ ಖಾತರಿ, ಅಂತಾರಾಜ್ಯ ಗಡಿಗಳಲ್ಲಿ ತೆರಿಗೆ ಸಂಬಂಧಿತ ಅಡೆತಡೆಗಳನ್ನು ತೆಗೆಯುವುದು, ಕಡಿತಗೊಳಿಸಿದ ಸಾಗಣೆ ವೆಚ್ಚಗಳು, ಒಂದು ಅಂತ್ಯದಿಂದ ಮತ್ತೊಂದು ಅಂತ್ಯದವರೆಗಿನ ಐಟಿ ಶಕ್ತ ವ್ಯವಸ್ಥೆ ಮತ್ತು ತೆರಿಗೆ ಅಧಿಕಾರಿಗಳೊಂದಿಗೆ ಕನಿಷ್ಠ ಸಂಪರ್ಕದ ಕಾರಣಗಳಿಂದ ವ್ಯಾಪಾರ ಮತ್ತು ಕೈಗಾರಿಕೆಗಳು ಪ್ರಯೋಜನ ಪಡೆಯಲಿವೆ. ಕಚ್ಚಾ ವಸ್ತುಗಳ ಮೂಲಗಳು, ಉತ್ಪಾದಿಸುವ ಪ್ರದೇಶ ಮತ್ತು ಗೋದಾಮು ಸೌಲಭ್ಯಗಳಿಗೆ ಸಂಬಂಧಿಸಿದಂತೆ ಉತ್ಪಾದಕರು ಹೆಚ್ಚು ತರ್ಕಬದ್ಧ ನಿರ್ಧಾರಗಳನ್ನು ಕೈಗೊಳ್ಳಬಲ್ಲವರಾಗುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆರಿಗೆ ಸಂಗ್ರಹಣೆಗೆ ಸಾಕ್ಷಿಯಾಗಲಿವೆ ಹಾಗೂ ತೆರಿಗೆ ಸಂಗ್ರಹ ವೆಚ್ಚಗಳು ನಿರ್ದಿಷ್ಟವಾಗಿ ಕಡಿಮೆಯಾಗಲಿವೆ. ಸರಕು ಮತ್ತು ಸೇವೆಗಳೊಂದಿಗೆ ಯಾವುದೇ ತೆರಿಗೆಗಳು ಲಗತ್ತಿಸಲಾಗುವುದಿಲ್ಲವಾದ ಕಾರಣ ರಫ್ತುಗಳು ಹೆಚ್ಚು ಸ್ಪರ್ಧಾತ್ಮಕವಾಗಲಿವೆ. ಉದ್ಯಮ ನಡೆಸುವುದು ಹೆಚ್ಚು ಸುಲಭವಾಗಲಿದೆ ಹಾಗೂ ಎಲ್ಲ ಆಮದುಗಳನ್ನು ಮೂಲ ಕಸ್ಟಮ್ಸ್ ತೆರಿಗೆಯ ಜೊತೆಗೆ ಜಿಎಸ್‌ಟಿಗೆ ಸಂಯೋಜಿಸಲಿರುವ ಕಾರಣ ಮೇಕ್ ಇನ್ ಇಂಡಿಯಾ ಕಾರ್ಯಕ್ರಮಕ್ಕೆ ಪ್ರಮುಖ ಉತ್ತೇಜನ ಸಿಗಲಿದೆ. ಈ ಎಲ್ಲ ಸೌಲಭ್ಯಗಳು ಭಾರತದ ಜಿಡಿಪಿ ಅಭಿವೃದ್ಧಿಗೆ ಮಧ್ಯಮ ಮತ್ತು ದೀರ್ಘಾವಧಿಯಲ್ಲಿ ಗಮನಾರ್ಹ ಸೇರ್ಪಡೆಯಾಗಲಿವೆ.

**ಸಾಂವೈಧಾನಿಕ ತಿದ್ದುಪಡಿ :** ಜಿಎಸ್‌ಟಿ ಪರಿಚಯಿಸಲ್ಪಟ್ಟ ದೇಶಗಳಲ್ಲಿ, ಅಪರೂಪದ ಉದಾಹರಣೆಗಳನ್ನು ಹೊರತುಪಡಿಸಿದರೆ, ಅದು ಏಕೀಕೃತ ರೂಪದಲ್ಲಿದೆ ಹಾಗೂ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳಿಂದ ವಿಧಿಸಲ್ಪಡುತ್ತವೆ. ಭಾರತದಲ್ಲಿ ಜಿಎಸ್‌ಟಿಯನ್ನು ಜಾರಿಗೊಳಿಸಲು ಸಾಂವೈಧಾನಿಕ ತಿದ್ದುಪಡಿ ಅಗತ್ಯವಾಗಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ಅಧಿಕಾರಗಳಿಗೆ ಸಂಬಂಧಿಸಿದಂತೆ ಕೇಂದ್ರ ಪಟ್ಟಿ ಮತ್ತು ರಾಜ್ಯ ಪಟ್ಟಿಗಳಲ್ಲಿ ಸಾಂವೈಧಾನಿಕ ತಿದ್ದುಪಡಿ ಅಗತ್ಯವಿತ್ತು. ಕೇಂದ್ರಕ್ಕೆ ವಸ್ತುಗಳ ಉತ್ಪಾದನೆ (ಮಾನವ ಬಳಕೆಗಾಗಿ ಆಲ್ಕೋಹಾಲುಯುಕ್ತ ಮದ್ಯ ಹೊರತುಪಡಿಸಿ, ಓಪಿಯಂ, ನಾರ್ಕೋಟಿಕ್ಸ್ ಇತ್ಯಾದಿ) ಮೇಲೆ ತೆರಿಗೆ ವಿಧಿಸಲು ಅಧಿಕಾರವಿತ್ತು. ಅಂತೆಯೇ ರಾಜ್ಯಗಳಿಗೂ ವಸ್ತುಗಳ ಮಾರಾಟದ

* ಹೆಚ್ಚುವರಿ ಕಾರ್ಯದರ್ಶಿ, ಜಿಎಸ್‌ಟಿ ಸಮಿತಿ. E-mail : arun59goyal@gmail.com, arun.goyal@nic.in

ಮೇಲೆ ತೆರಿಗೆ ವಿಧಿಸಲು ಅಧಿಕಾರವಿತ್ತು. ಅಂತಾರಾಜ್ಯ ಮಾರಾಟದ ಪ್ರಕರಣಗಳಲ್ಲಿ ಕೇಂದ್ರಕ್ಕೆ ತೆರಿಗೆ ವಿಧಿಸಲು (ಕೇಂದ್ರೀಯ ಮಾರಾಟ ತೆರಿಗೆ) ಅಧಿಕಾರವಿತ್ತು. ಆದರೆ, ರಾಜ್ಯಗಳು ತೆರಿಗೆಯನ್ನು ಸಂಪೂರ್ಣವಾಗಿ ಸಂಗ್ರಹಿಸುತ್ತಿದ್ದವು ಮತ್ತು ಇಟ್ಟುಕೊಳ್ಳುತ್ತಿದ್ದವು. ಸೇವೆಗಳಿಗಾಗಿ ಕೇಂದ್ರಕ್ಕೆ ಮಾತ್ರ ಸೇವಾ ತೆರಿಗೆ ವಿಧಿಸಲು ಅವಕಾಶವಿತ್ತು. ಸರ್ಕಾರದ ಎರಡೂ ಮಟ್ಟಗಳು ಕಾರ್ಯನಿರ್ವಹಿಸಲು ವಿಶಿಷ್ಟ ಜವಾಬ್ದಾರಿಗಳನ್ನು ಹೊಂದಿರುವಂತೆಯೇ, ಸಂವಿಧಾನದಲ್ಲಿ ಹೇಳಿರುವಂತೆ ರಾಜ್ಯಗಳು ಮತ್ತು ಕೇಂದ್ರಗಳೆರಡೂ ಅಧಿಕಾರಗಳ ವಿಭಜನೆಯ ಪ್ರಕಾರ ಅಗತ್ಯ ಸಂಪನ್ಮೂಲಗಳನ್ನು ಆಕರಿಸಬೇಕಾಗಿದೆ. ಆದ್ದರಿಂದ ಕೇಂದ್ರ ಹಾಗೂ ರಾಜ್ಯಗಳಿಗೆ ಏಕಕಾಲದಲ್ಲಿ ಜಿಎಸ್‌ಟಿ ವಿಧಿಸಲು ಮತ್ತು ಸಂಗ್ರಹಿಸಲು ಅಧಿಕಾರ ನೀಡಲು ಸಂವಿಧಾನದ ತಿದ್ದುಪಡಿ ಅಗತ್ಯವಾಗಿತ್ತು. ಆರ್ಥಿಕ ಒಕ್ಕೂಟದ ಸಾಂವಿಧಾನಿಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಭಾರತದಲ್ಲಿ ಉಭಯ ಜಿಎಸ್‌ಟಿ ಪರಿಚಯಿಸಲಾಗಿದೆ.

**ಜಿಎಸ್‌ಟಿ ಪ್ರಯಾಣ:** ಜಿಎಸ್‌ಟಿ ಅನ್ನು ಈಗಾಗಲೇ ಸುಮಾರು 160 ದೇಶಗಳಲ್ಲಿ ಪರಿಚಯಿಸಲಾಗಿದೆ ಹಾಗೂ ಫ್ರಾನ್ಸ್ ದೇಶವು 1954ರಲ್ಲಿಯೇ ಜಿಎಸ್‌ಟಿ ಜಾರಿಗೊಳಿಸಿದ್ದು, ಈ ತೆರಿಗೆ ಪದ್ಧತಿ ಜಾರಿಗೊಳಿಸಿದ ಪ್ರಥಮ ದೇಶ ಎನ್ನಿಸಿಕೊಂಡಿದೆ. ಆರ್ಥಿಕತೆಗೆ ಜಿಎಸ್‌ಟಿ ಹಲವು ಪ್ರಯೋಜನಗಳನ್ನು ನೀಡಲಿರುವ ಹಿನ್ನೆಲೆಯಲ್ಲಿ, ಕೆಲವು ಸಮಯದವರೆಗೆ ಜಿಎಸ್‌ಟಿ ಜಾರಿಯು ದೇಶದಲ್ಲಿ ರಾಜಕೀಯ ಕಾರ್ಯಸೂಚಿ ಆಗಿತ್ತು. ಭಾರತದಲ್ಲಿ ಜಿಎಸ್‌ಟಿ ಜಾರಿಗೊಳಿಸಲು ನಡೆಸಿದ ಪ್ರಯಾಣವು ಅತ್ಯಂತ ದೀರ್ಘವಾಗಿತ್ತು ಹಾಗೂ ಅನೇಕ ರಾಜಕೀಯ ನಾಯಕರು, ಆರ್ಥಿಕ ಚಿಂತಕರು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಿಗಳು ಶ್ರಮಿಸಿದ್ದಾರೆ. ಜಿಎಸ್‌ಟಿ ಕಲ್ಪನೆಯು 2000ನೇ ವರ್ಷದಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೊದಲ ಬಾರಿಗೆ ಚರ್ಚಿಸಲ್ಪಟ್ಟಿತ್ತು ಹಾಗೂ ಜಿಎಸ್‌ಟಿ ಮಾದರಿಯನ್ನು ರೂಪಿಸಲು ಆಗಿನ ಪಶ್ಚಿಮ ಬಂಗಾಳದ ವಿತ್ತ ಸಚಿವ ಶ್ರೀ ಅಸೀಂ ದಾಸ್‌ಗುಪ್ತಾ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು. 2003ರಲ್ಲಿ ವಾಜಪೇಯಿ ಸರ್ಕಾರವು ತೆರಿಗೆ ಸುಧಾರಣೆಗಳನ್ನು ಶಿಫಾರಸ್ಸು ಮಾಡಲು ಶ್ರೀ ವಿಜಯ ಕೇಳ್ಕರ್ ನೇತೃತ್ವದಲ್ಲಿ ಮತ್ತೊಂದು ಕಾರ್ಯಪಡೆಯನ್ನು ಸ್ಥಾಪಿಸಿತು. ಜಿಎಸ್‌ಟಿ 2010ರ ಏಪ್ರಿಲ್ 1ರಿಂದ ಜಾರಿಗೊಳಿಸಬಹುದು ಎಂದು 2006ರ ಫೆಬ್ರವರಿ 28ರಂದು ಆಗಿನ ಕೇಂದ್ರ ವಿತ್ತ ಸಚಿವರು 2006–07ನೇ ಸಾಲಿನ ತಮ್ಮ ಮುಂಗಡಪತ್ರದಲ್ಲಿ ಪ್ರಸ್ತಾವನೆ ಮಂಡಿಸಿದರು. ರಾಜ್ಯ ವ್ಯಾಟ್ ರೂಪಿಸಿದ್ದ ರಾಜ್ಯ ವಿತ್ತ ಸಚಿವರ (ಇಸಿ) ಅಧಿಕೃತ ಸಮಿತಿಗೆ ಜಿಎಸ್‌ಟಿಗಾಗಿ ಮಾರ್ಗದರ್ಶನ ಮತ್ತು ರಚನೆಯನ್ನು ರೂಪಿಸುವಂತೆ ಕೋರಲಾಯಿತು. ಜಿಎಸ್‌ಟಿಯ ವಿವಿಧ ಅಂಶಗಳನ್ನು ಪರಿಶೀಲಿಸಲು ಹಾಗೂ ನಿರ್ದಿಷ್ಟವಾಗಿ ವಿನಾಯಿತಿಗಳು, ಮಿತಿಗಳು, ಸೇವೆಗಳ ತೆರಿಗೆ ಮತ್ತು ಅಂತಾರಾಜ್ಯ ಪೂರೈಕೆಗಳ ತೆರಿಗೆಯ ಮೇಲೆ ವರದಿಗಳನ್ನು ತಯಾರಿಸಲು, ರಾಜ್ಯಗಳು ಹಾಗೂ ಕೇಂದ್ರದ ಪ್ರತಿನಿಧಿಗಳನ್ನು ಹೊಂದಿದ ಅಧಿಕಾರಿಗಳ ಜಂಟಿ ಕಾರ್ಯಕಾರಿ ಗುಂಪುಗಳನ್ನು ರಚಿಸಲಾಯಿತು. ವಿವರವಾದ ಚರ್ಚೆಗಳನ್ನು ಆಧರಿಸಿ, ಜಿಎಸ್‌ಟಿ ಮೇಲಿನ ತನ್ನ ಮೊದಲ ಚರ್ಚಾ ಪತ್ರವನ್ನು ಗುಂಪು 2009ರ ನವೆಂಬರ್‌ನಲ್ಲಿ ಬಿಡುಗಡೆ ಮಾಡಿತು. ಪ್ರಸ್ತಾವಿತ ಜಿಎಸ್‌ಟಿಯ ಗುಣಲಕ್ಷಣಗಳನ್ನು ಎಫ್‌ಡಿಪಿ ನಿರೂಪಿಸಿತು ಹಾಗೂ ಪ್ರಸಕ್ತ ಜಿಎಸ್‌ಟಿ ಆಡಳಿತಕ್ಕಾಗಿ ಮೂಲತತ್ವವನ್ನು ರಚಿಸಿತು.

ಜಿಎಸ್‌ಟಿಯ ಪೀಠಿಕೆಗೆ ಸಾಂವೈಧಾನಿಕ ತಿದ್ದುಪಡಿ ಅಗತ್ಯವಾಗಿರುವಂತೆಯೇ, ರಾಜಕೀಯ ಒಮ್ಮತವನ್ನು ದೀರ್ಘಕಾಲದವರೆಗೆ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಪ್ರಸಕ್ತ ಸರ್ಕಾರ ರಚನೆಯಾದ ನಂತರ ಭಾರತದಲ್ಲಿ ಜಿಎಸ್‌ಟಿ ಅನ್ನು ಪರಿಚಯಿಸುವ ಪ್ರಕ್ರಿಯೆಯು ವೇಗ ಪಡೆದುಕೊಂಡಿತು. ಸಾಂವೈಧಾನಿಕ (122ನೇ ತಿದ್ದುಪಡಿ) ಮಸೂದೆ, 2014 ಅನ್ನು ಲೋಕಸಭೆಯಲ್ಲಿ 2014ರ ಡಿಸೆಂಬರ್ 19ನೇ ದಿನಾಂಕದಂದು ಮಂಡಿಸಲಾಯಿತು ಹಾಗೂ 2015ರ ಮೇ ತಿಂಗಳಿನಲ್ಲಿ ಲೋಕಸಭೆಯಲ್ಲಿ ಅನುಮೋದಿಸಲ್ಪಟ್ಟಿತು. ಮಸೂದೆಯನ್ನು ರಾಜ್ಯಸಭೆಗೆ ಕಳಿಸಲಾಯಿತು. ನಂತರ ಅದನ್ನು ರಾಜ್ಯ ಸಭೆ ಮತ್ತು ಲೋಕಸಭೆಗಳ ಜಂಟಿ ಆಯ್ಕೆ ಸಮಿತಿಗೆ ಪರಾಮರ್ಶೆಗಾಗಿ 2015ರ ಮೇ 14ರಂದು ಸಲ್ಲಿಸಲಾಯಿತು. ಸಮಿತಿಯು ತನ್ನ ವರದಿಯನ್ನು 2015ರ ಜುಲೈ 22ರಂದು ಸಲ್ಲಿಸಿತು. ಅದರ ನಂತರ ಪ್ರಗತಿಯು ಅತ್ಯಂತ ವೇಗ ಪಡೆದುಕೊಂಡಿತು. ಒಮ್ಮತವನ್ನು



ಆಧರಿಸಿ ಪರಿಷ್ಕೃತ ಸಾಂವೈಧಾನಿಕ ತಿದ್ದುಪಡಿ ಮಸೂದೆ 2016ರ ಆಗಸ್ಟ್ 1ರಂದು ಪ್ರಸ್ತಾಪಿತವಾಯಿತು. ಮಸೂದೆಯು ರಾಜ್ಯಸಭೆಯಲ್ಲಿ 2016ರ ಆಗಸ್ಟ್ 3ರಂದು ಹಾಗೂ ಲೋಕಸಭೆಯಲ್ಲಿ 2016ರ ಆಗಸ್ಟ್ 8ರಂದು ಅನುಮೋದಿಸಲ್ಪಟ್ಟಿತು. ಅಗತ್ಯ ಸಂಖ್ಯೆಯ ರಾಜ್ಯ ಶಾಸಕಾಂಗಗಳ ಸಮ್ಮತಿ ಮತ್ತು ರಾಷ್ಟ್ರಪತಿಗಳ ಅಂಗೀಕಾರದ ಬಳಿಕ ಸಾಂವೈಧಾನಿಕ ತಿದ್ದುಪಡಿಯು 2016ರ ಸೆಪ್ಟೆಂಬರ್ 8ರಂದು ಸಾಂವೈಧಾನಿಕ (101ರ ತಿದ್ದುಪಡಿ) ಕಾಯ್ದೆ 2016 ಎಂದು ಸೂಚಿಸಲ್ಪಟ್ಟಿತು. ಭಾರತದಲ್ಲಿ ಸರಕುಗಳು ಮತ್ತು ಸೇವೆಗಳ ತೆರಿಗೆಯನ್ನು ಪರಿಚಯಿಸಲು ಸಾಂವಿಧಾನಿಕ ತಿದ್ದುಪಡಿಯು ದಾರಿ ಮಾಡಿಕೊಟ್ಟಿತು.

**ಸಂವಿಧಾನ (101ನೇ ತಿದ್ದುಪಡಿ) ಕಾಯ್ದೆ 2016:** ಸಾಂವೈಧಾನಿಕ ತಿದ್ದುಪಡಿಯು ಕೇಂದ್ರ ಮತ್ತು ರಾಜ್ಯಗಳಿಗೆ ಸರಕುಗಳು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ವಿಧಿಸಲು ಮತ್ತು ಸಂಗ್ರಹಿಸಲು ಅಧಿಕಾರ ನೀಡುತ್ತದೆ. ಸರಕುಗಳು ಅಥವಾ ಸೇವೆಗಳು ಅಥವಾ ಎರಡನ್ನೂ ಪೂರೈಸುವುದರ ಮೇಲಿನ ತೆರಿಗೆ ಎಂದು ಜಿಎಸ್‌ಟಿ ಅನ್ನು ವ್ಯಾಖ್ಯಾನಿಸಲಾಗಿದೆ. ಮಾನವ ಸೇವನೆಗಾಗಿ ಆಲ್ಕೋಹಾಲು ಭರಿತ ಮದ್ಯವನ್ನು ಇದರಿಂದ ಹೊರತುಪಡಿಸಲಾಗಿದೆ. ಮತ್ತೊಂದೆಡೆ ಐದು ಪೆಟ್ರೋಲಿಯಂ ಉತ್ಪನ್ನಗಳು ಅಂದರೆ, ಕಚ್ಚಾ ಪೆಟ್ರೋಲಿಯಂ, ಮೋಟಾರ್ ಸ್ಪಿರಿಟ್ (ಪೆಟ್ರೋಲ್), ಅತಿ ವೇಗದ ಡೀಸೆಲ್, ನೈಸರ್ಗಿಕ ಅನಿಲ ಹಾಗೂ ವಾಯುಯಾನ ಟರ್ಬೈನ್ ಇಂಧನವನ್ನು ತಾತ್ಕಾಲಿಕವಾಗಿ ಹೊರಗಿಡಲಾಗಿದೆ ಮತ್ತು ಅವನ್ನು ಯಾವ ದಿನಾಂಕದಿಂದ ಜಿಎಸ್‌ಟಿಗೆ ಸೇರಿಸಬಹುದೆಂದು ಜಿಎಸ್‌ಟಿ ಸಮಿತಿಯು ನಿರ್ಧರಿಸಬಲ್ಲದಾಗಿದೆ. ಸರಕುಗಳು ಮತ್ತು ಸೇವೆಗಳ ಅಂತರ್ ರಾಜ್ಯ ಪೂರೈಕೆಯ ಮೇಲೆ, ಒಂದು ಏಕೀಕೃತ ಜಿಎಸ್‌ಟಿ (ಐಜಿಎಸ್‌ಟಿ) ಅನ್ನು ಕೇಂದ್ರವು ವಿಧಿಸಬಹುದು ಹಾಗೂ ಸಂಗ್ರಹಿಸಬಹುದು. ಜಿಎಸ್‌ಟಿ ನಿಜವಾಗಿಯೂ ಗಮ್ಯಸ್ಥಾನ ಆಧರಿತ

ಬಳಿಕೆ ತೆರಿಗೆ ಆಗಿದೆ ಹಾಗೂ ಸರಕುಗಳನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಾಗಿಸುತ್ತಿದ್ದರೂ, ಅದರಲ್ಲಿ ಒಳಹರಿವು ತೆರಿಗೆ ಕ್ರೆಡಿಟ್‌ನ ತಡೆರಹಿತ ಹರಿವಿದೆ.

**ಜಿಎಸ್‌ಟಿ ಸಮಿತಿ (ಕೌನ್ಸಿಲ್ / ಮಂಡಳಿ / ಪರಿಷತ್) :** ಸಾಂವೈಧಾನಿಕ ತಿದ್ದುಪಡಿಯ ಗಮನಾರ್ಹ ಗುಣಲಕ್ಷಣವೆಂದರೆ ಜಿಎಸ್‌ಟಿ ಸಮಿತಿಯು ಸಂವೈಧಾನಕ್ಕೆ ಸಂಬಂಧಪಟ್ಟ ಅವಕಾಶವಾಗಿದೆ. ಈ ಸಮಿತಿಯು ಕೇಂದ್ರ ವಿತ್ತ ಸಚಿವರು (ಸಮಿತಿ ಅಧ್ಯಕ್ಷ), ಕೇಂದ್ರ ಸರ್ಕಾರದ ರಾಜ್ಯ ಸಚಿವ (ಕಂದಾಯ) ಹಾಗೂ 29 ರಾಜ್ಯಗಳು ಮತ್ತು ಶಾಸಕಾಂಗ ಹೊಂದಿದ ಎರಡು (ದೆಹಲಿ ಮತ್ತು ಪುದುಚೇರಿ) ಕೇಂದ್ರಾಡಳಿತ ಪ್ರದೇಶಗಳ ರಾಜ್ಯ ಹಣಕಾಸು / ತೆರಿಗೆ ಸಚಿವರನ್ನು ಹೊಂದಿರುತ್ತದೆ. ಜಿಎಸ್‌ಟಿ ಸಮಿತಿಯ ಮಾರ್ಗದರ್ಶಿ ತತ್ವವೆಂದರೆ ಕೇಂದ್ರ ಮತ್ತು ರಾಜ್ಯದ ಮಧ್ಯೆ ಅಂತೆಯೇ, ರಾಜ್ಯಗಳ ಮಧ್ಯೆ ಜಿಎಸ್‌ಟಿ ವಿಭಿನ್ನ ಅಂಶಗಳು ಸಮನ್ವಯಗೊಳ್ಳುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಭಾರತದೊಳಗೆ ಸರಕುಗಳು ಮತ್ತು ಸೇವೆಗಳಿಗೆ ಸಮನ್ವಯಗೊಂಡ ರಾಷ್ಟ್ರೀಯ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವುದು ಉದ್ದೇಶವಾಗಿದೆ. ಈ ಸಮಿತಿಯು ಕೇಂದ್ರ ಮತ್ತು ರಾಜ್ಯಗಳಿಗೆ ಈ ಮುಂದಿನ ಅಂಶಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡುವ ಕರ್ತವ್ಯ ಹೊಂದಿದೆ:

(ಅ) ಜಿಎಸ್‌ಟಿ ಅಡಿ ಸೇರ್ಪಡೆಗೊಳ್ಳಬಹುದಾದ ಕೇಂದ್ರ, ರಾಜ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳು ವಿಧಿಸಿದ ತೆರಿಗೆಗಳು, ಸೆಸ್‌ಗಳು ಮತ್ತು ಸರ್‌ಚಾರ್ಜ್‌ಗಳು; (ಆ) ಜಿಎಸ್‌ಟಿಗೆ ಒಳಪಡುವ ಅಥವಾ ಹೊರತುಪಡಿಸಿದ ಸರಕುಗಳು ಮತ್ತು ಸೇವೆಗಳು; (ಇ) ಕಚ್ಚಾ ಪೆಟ್ರೋಲ್, ಅತಿ ವೇಗದ ಡೀಸೆಲ್, ಮೋಟಾರ್ ಸ್ಪಿರಿಟ್ (ಸಾಮಾನ್ಯವಾಗಿ ಪೆಟ್ರೋಲ್ ಎನ್ನಲಾಗುತ್ತದೆ), ನೈಸರ್ಗಿಕ ಅನಿಲ ಹಾಗೂ ವಾಯುಯಾನ ಟರ್ಬೈನ್ ಇಂಧನದ ಮೇಲೆ ಜಿಎಸ್‌ಟಿ ವಿಧಿಸಬಹುದಾದ ದಿನಾಂಕ; (ಈ) ಮಾದರಿ ಜಿಎಸ್‌ಟಿ ಕಾನೂನುಗಳು, ವಿಧಿಸುವಿಕೆಯ ತತ್ವಗಳು, ಐಜಿಎಸ್‌ಟಿ ಅನುದಾನ ಹಾಗೂ ಪೂರೈಕೆಯ ಸ್ಥಳವನ್ನು ನಿಯಂತ್ರಿಸುವ ತತ್ವಗಳು; (ಉ) ಜಿಎಸ್‌ಟಿಯಿಂದ ಹೊರತುಪಡಿಸಬಹುದಾದ ಸರಕುಗಳು ಮತ್ತು ಸೇವೆಗಳ ವಹಿವಾಟಿನ ಮಿತಿಯ ಕೆಳಮಟ್ಟ; (ಊ) ಜಿಎಸ್‌ಟಿ ತೆರಿಗೆ



ಹಂತಗಳಿಗೆ ಸಂಬಂಧಿಸಿದಂತೆ ವಾಸ್ತವ ದರ; (ಋ) ಯಾವುದೇ ನೈಸರ್ಗಿಕ ವಿಪತ್ತಿನ ಸಂದರ್ಭದಲ್ಲಿ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸಲು ನಿರ್ದಿಷ್ಟಪಡಿಸಿದ ಅವಧಿಗಾಗಿ ಯಾವುದೇ ವಿಶೇಷ ದರ ಅಥವಾ ದರಗಳು; (ಎ) ಈಶಾನ್ಯ ರಾಜ್ಯಗಳು, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡಕ್ಕೆ ವಿಶೇಷ ಅವಕಾಶ; ಮತ್ತು (ಏ) ಸಮಿತಿ ನಿರ್ಧರಿಸಿದಂತೆ ಜಿಎಸ್‌ಟಿಗೆ ಸಂಬಂಧಪಟ್ಟ ಯಾವುದೇ ಇತರ ವಿಷಯಗಳು. ಸಾಂವೈಧಾನಿಕ ತಿದ್ದುಪಡಿಯು ಜಿಎಸ್‌ಟಿ ಸಮಿತಿಯ ಪ್ರತಿ ನಿರ್ಧಾರವನ್ನು ಸಭೆಯಲ್ಲಿ ಹಾಜರಿರುವ ಸದಸ್ಯರ ಮತ್ತು ಚಲಾಯಿಸಿದ ಮೌಲ್ಯದ ಮತಗಳಲ್ಲಿ 3/4 ಮೌಲ್ಯಕ್ಕೆ ಕಡಿಮೆ ಇಲ್ಲದ ಬಹುಮತದೊಂದಿಗೆ ಸ್ವೀಕರಿಸಬಹುದು. ಕೇಂದ್ರ ಸರ್ಕಾರದ ಮತವು ಚಲಾವಣೆಯಾದ ಒಟ್ಟು ಮತಗಳ 1/3 ಭಾಗದಷ್ಟು ಮೌಲ್ಯ ಹೊಂದಿರುತ್ತದೆ ಹಾಗೂ ರಾಜ್ಯ ಸರ್ಕಾರಗಳ ಮತಗಳನ್ನು ಒಟ್ಟಿಗೆ ತೆಗೆದುಕೊಂಡರೆ ಸಭೆಯಲ್ಲಿ ಚಲಾವಣೆಯಾದ ಮತಗಳ 2/3 ರಷ್ಟು ಮೌಲ್ಯ ಹೊಂದಿರುತ್ತದೆ. ಜಿಎಸ್‌ಟಿ ಸಮಿತಿಯ ಒಟ್ಟು ಸದಸ್ಯರಲ್ಲಿ ಅರ್ಧದಷ್ಟು ಸದಸ್ಯರು ಆ ಸಭೆಗಳ ಕೋರಂ ನಿರ್ಮಿಸುತ್ತಾರೆ. ಕೇಂದ್ರ ಅಥವಾ ರಾಜ್ಯಗಳು ಏಕಪಕ್ಷೀಯವಾಗಿ ನಿರ್ಧಾರ ತಳೆಯಲಾಗದಂತೆ ಮತ ಚಲಾವಣೆಯ ಮೌಲ್ಯವನ್ನು ನಿರ್ಧರಿಸಲಾಗಿದೆ. ಕೇಂದ್ರವು 33% ಪ್ರಮಾಣದಷ್ಟು ಮತಗಳನ್ನು ಮಾತ್ರ ಹೊಂದಿರುವುದರಿಂದ, ಬಹುಸಂಖ್ಯೆಯ ರಾಜ್ಯಗಳ ಬೆಂಬಲ ಕೂಡ ಸಮಿತಿಯು ಯಾವುದೇ ನಿರ್ಧಾರ ಪಡೆಯಲು ಅಗತ್ಯವಾಗಿದೆ. ಏನೇ ಆದರೂ, ಇದುವರೆಗೂ ಸಮಿತಿಯಲ್ಲಿ ಎಲ್ಲ ನಿರ್ಧಾರಗಳನ್ನು ಒಮ್ಮತದಿಂದ ತೆಗೆದುಕೊಳ್ಳಲಾಗಿದೆ ಮತ್ತು ಮತದಾನದ ಯಾವುದೇ ಅಗತ್ಯ ಕಂಡುಬಂದಿಲ್ಲ.

**ಜಿಎಸ್‌ಟಿ ಸಮಿತಿ ಕಾರ್ಯ :** 2017ರ ಜುಲೈ 1ರಂದು ಜಿಎಸ್‌ಟಿ ಜಾರಿಗೆ ಬರುವುದಕ್ಕಿಂತ ಮೊದಲು ಜಿಎಸ್‌ಟಿ ಸಮಿತಿಯು ಈ ಹಿಂದೆ ನಡೆಸಿರುವ ತನ್ನ 18 ಸಭೆಗಳಲ್ಲಿ, ಒಂದೇ ಬಾರಿಗೆ ಬಗೆಹರಿಸಲಾಗದ ಸಮಸ್ಯೆಗಳ ಮೇಲೆಯೂ ಒಮ್ಮತವನ್ನು ಪಡೆಯುವುದರಲ್ಲಿ ಶ್ಲಾಘನೀಯ ಕೆಲಸ ಮಾಡಿದೆ. ಕೇಂದ್ರೀಯ ಜಿಎಸ್‌ಟಿ, ರಾಜ್ಯ ಜಿಎಸ್‌ಟಿ, ಕೇಂದ್ರಾಡಳಿತ ಪ್ರದೇಶದ ಜಿಎಸ್‌ಟಿ, ಏಕೀಕೃತ ಜಿಎಸ್‌ಟಿ ಹಾಗೂ ರಾಜ್ಯಗಳಿಗೆ ಪರಿಹಾರ ಮತ್ತು ಜಿಎಸ್‌ಟಿಗೆ ಸಂಬಂಧಿತ ಹಲವು ನಿಯಮಗಳಿಗೆ ಸಂಬಂಧಿಸಿದ ಕರಡು ಶಾಸನಗಳನ್ನು ಕೆಲವು ಸಭೆಗಳ ಅವಧಿಯಲ್ಲಿಯೇ ಶಿಫಾರಸ್ಸು ಮಾಡಲು ಸಮಿತಿಯು ಸಮರ್ಥವಾಗಿತ್ತು. ರಾಜ್ಯ ಮತ್ತು ಕೇಂದ್ರದ ಮಧ್ಯೆ ಇದ್ದ ಕ್ರಾಸ್ ಎಂಪವರ್‌ಮೆಂಟ್ ಮತ್ತು ತೆರಿಗೆ ಪಾವತಿದಾರರ ಆಡಳಿತ ವಿಭಾಗದ ವಿವಾದವನ್ನು ಕೊಡುವ ಮತ್ತು ತೆಗೆದುಕೊಳ್ಳುವ ನೈಜ ಸಾಮರ್ಥ್ಯದ ಮೇಲೆ ಬಗೆಹರಿಸಲಾಗಿತ್ತು. ಬೇರೆ ಬೇರೆ ರಾಜ್ಯಗಳಲ್ಲಿ ಸರಕುಗಳ ಮೇಲಿನ ವ್ಯಾಟ್ ತೆರಿಗೆಯು ವಿಭಿನ್ನವಾಗಿದ್ದರೂ ಎಲ್ಲ ಸರಕುಗಳು ಮತ್ತು ಸೇವೆಗಳನ್ನು ವಿಭಿನ್ನ ಶ್ರೇಣಿಗಳಲ್ಲಿ ನಯವಾಗಿ ಅಳವಡಿಸಲಾಗಿದೆ. ಇಲ್ಲಿ ಕೇಂದ್ರ ಮತ್ತು ರಾಜ್ಯಗಳು ತಮ್ಮ ಸಾರ್ವಭೌಮತ್ವದಲ್ಲಿ ಹಂಚಿಕೊಳ್ಳಲು ಮತ್ತು ಹೊಂದಿಕೊಳ್ಳಲು ಮತ್ತು ಒಬ್ಬರಿಗೊಬ್ಬರು ಆರ್ಥಿಕತೆಯ ಅವಕಾಶ ನೀಡಲು ಇಚ್ಛಿಸುತ್ತಿವೆ. ಈ ಮೂಲಕ ಹೊಸದಾಗಿ ರಚಿಸಿದ ಸಾಂವೈಧಾನಿಕ ಮಂಡಳಿಯಾದ ಜಿಎಸ್‌ಟಿ ಸಮಿತಿಯು ಸಹಕಾರದ ಆಡಳಿತ ವ್ಯವಸ್ಥೆಗೆ ಒಂದು ಹೊಸ ಮಾದರಿಯಾಗಿ ಹೊರಹೊಮ್ಮಿದೆ. ಸಮಿತಿಯು ನಂಬಲಸಾಧ್ಯವಾದ ಆರ್ಥಿಕ ಮತ್ತು ತೆರಿಗೆ ಸಂಬಂಧಿತ ನಿರ್ಧಾರಗಳನ್ನು ಒಮ್ಮತದೊಂದಿಗೆ ತೆಗೆದುಕೊಂಡಿದೆ ಹಾಗೂ ಕೇಂದ್ರ ಮತ್ತು ರಾಜ್ಯಗಳ ನಡುವೆ ಇತರ ಸಹಕಾರ ಕಾರ್ಯಕ್ಷೇತ್ರದಲ್ಲಿ ಅನುಸರಿಸಬಹುದಾದ ಉದಾಹರಣೆಯಂತೆ ಕಂಡುಬಂದಿದೆ.

**ರಾಜ್ಯಗಳಿಗೆ ಪರಿಹಾರ:** ಜಿಎಸ್‌ಟಿ ಒಂದು ಗಮ್ಯಸ್ಥಾನ ಆಧರಿತ ತೆರಿಗೆ ಆಗಿರುವಂತೆಯೇ, ನಿರ್ದಿಷ್ಟವಾಗಿ ಉತ್ಪಾದನಾ ರಾಜ್ಯಗಳಲ್ಲಿ ಜಿಎಸ್‌ಟಿ ಜಾರಿಯಿಂದ ಅವರಿಗೆ ಕಂದಾಯ ನಷ್ಟವಾಗಬಹುದು ಎಂಬ ಕೆಲವು ಆತಂಕಗಳಿವೆ. ಆದ್ದರಿಂದ ಸಂವಿಧಾನ (ನೂರ ಒಂದನೇ ತಿದ್ದುಪಡಿ) ಕಾಯ್ದೆ, 2016 ಪ್ರಕಾರ ಸರಕುಗಳು ಮತ್ತು ಸೇವೆಗಳ ತೆರಿಗೆ ಜಾರಿಯಾದ ನಂತರ ಐದು ವರ್ಷಗಳ ಕಾಲ ರಾಜ್ಯಗಳಿಗೆ ಪರಿಹಾರವನ್ನು ನೀಡಲಾಗುತ್ತದೆ. ಜಿಎಸ್‌ಟಿ ಸಮಿತಿ ನೀಡಿದ

ಶಿಫಾರಸ್ಸನ್ನು ಆಧರಿಸಿ, ಸರಕುಗಳು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ಪರಿಹಾರ), ಕಾಯ್ದೆ 2017 ಅನ್ನು ಜಾರಿಗೆ ತರಲಾಗಿದೆ. ಪರಿಹಾರ ಕಾಯ್ದೆಯು 2015–16ನೇ ಸಾಲಿನ ಕಂದಾಯಗಳನ್ನು ಆಧಾರ ವರ್ಷದ ಕಂದಾಯಗಳಂತೆ ನಿರ್ಧರಿಸಿದೆ ಹಾಗೂ 14% ರಷ್ಟು ವಾರ್ಷಿಕ ಬೆಳವಣಿಗೆಯ ಅತ್ಯಲ್ಪ ದರವನ್ನು ನೀಡಲಾಗಿದೆ. ಈ ಕಾಯ್ದೆಯು ಒಂದು ವೇಳೆ ರಾಜ್ಯಗಳಿಗೆ ಕಂದಾಯ ನಷ್ಟ ಉಂಟಾದರೆ, ಪರಿಹಾರವಾಗಿ ಅವುಗಳಿಗೆ ಸೆಸ್ ವಿಧಿಸಲು ಅವಕಾಶ ನೀಡುತ್ತದೆ. ಈ ಸೆಸ್ ಅನ್ನು ಐಷಾರಾಮಿ ವಸ್ತುಗಳು ಮತ್ತು ಪಾಪದ ವಸ್ತುಗಳ ಮೇಲೆ ವಿಧಿಸಬಹುದಾಗಿದೆ.

**ತೆರಿಗೆ ದರಗಳ ನಿರ್ಧಾರ:** ತೆರಿಗೆ ಶ್ರೇಣಿಗಳನ್ನು ನಿರ್ಧರಿಸುವಾಗ ಮೂರು ವಿಷಯಗಳನ್ನು ಸಮತೋಲನ ಮಾಡುವ ಕಷ್ಟಕರ ಕೆಲಸ ಎದುರಾಗಿತ್ತು. ಮೊದಲನೆಯದಾಗಿ, ಸಮಾಜದ ಬಡವರು ಮತ್ತು ದುರ್ಬಲ ವರ್ಗದವರ ಹಿತಾಸಕ್ತಿಯ ರಕ್ಷಣೆ ಮತ್ತು ಸಾಮೂಹಿಕ ಬಳಕೆ, ಅತ್ಯಗತ್ಯ ಸರಕುಗಳು ಭರಿಸಲು ಸಾಧ್ಯವಾದ ಮಟ್ಟದಲ್ಲಿಯೇ ಇದೆ ಎಂಬುದನ್ನು ದೃಢಪಡಿಸಿಕೊಳ್ಳುವುದು. ಎರಡನೆಯದಾಗಿ, ರಾಜ್ಯಗಳು ಮತ್ತು ಕೇಂದ್ರದ ಒಟ್ಟು ಕಂದಾಯಗಳು ಸಂರಕ್ಷಿಸಲ್ಪಟ್ಟಿವೆ. ಮೂರನೆಯದಾಗಿ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ವ್ಯಾಪ್ತಿಯು ಪ್ರಸಕ್ತ ತೆರಿಗೆ ವ್ಯಾಪ್ತಿಯನ್ನು ಗಣನೀಯವಾಗಿ ಹೆಚ್ಚಿಸಿಲ್ಲ ಮತ್ತು ಕಡಿತಗೊಳಿಸಿಲ್ಲ ಎಂಬುದನ್ನು ಗಮನಿಸುವುದು. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಹಾಗೂ ಸುದೀರ್ಘ ಚರ್ಚೆಗಳ ನಂತರ, ಸಮಿತಿಯು ಜಾಗ್ರತಿಯಿಂದ 5%, 12% 18% ಹಾಗೂ 28% ಶ್ರೇಣಿಗಳ ನಾಲ್ಕು ತೆರಿಗೆ ದರಗಳನ್ನು ನಿರ್ಧರಿಸಿತು. ಹೆಚ್ಚುವರಿಯಾಗಿ, ಅಲ್ಲೊಂದು ವಿನಾಯಿತಿ ವರ್ಗವೂ ಇದೆ.

**ಮಧ್ಯಮ ಮತ್ತು ಸಣ್ಣ ಉದ್ಯಮಗಳನ್ನು ಬೆಂಬಲಿಸುವುದು:** ಜಿಎಸ್‌ಟಿ ಆಳ್ವಿಕೆಯು ಮಧ್ಯಮ ಮತ್ತು ಸಣ್ಣ ಉದ್ಯಮಗಳನ್ನು ವ್ಯಾಖ್ಯಾನಿಸುವ ಹಲವು ಅವಕಾಶಗಳನ್ನು ಹೊಂದಿದೆ. ಕಾನೂನು ಒಂದು ವಿನಾಯಿತಿ ಮಿತಿಯನ್ನು ನೀಡುತ್ತಿದ್ದು, ಒಂದು ಆರ್ಥಿಕ ವರ್ಷದಲ್ಲಿ ಒಟ್ಟು ವಹಿವಾಟು 20 ಲಕ್ಷ ರೂ. (ವಿಶೇಷ ವರ್ಗದ ರಾಜ್ಯಗಳಿಗೆ 10 ಲಕ್ಷ ರೂ.)ಗಿಂತ ಕಡಿಮೆ ಇರುವ



ಉದ್ಯಮಕ್ಕೆ ನೊಂದಣಿಯು ಕಡ್ಡಾಯವಲ್ಲ. ಇಂತಹ ಸಣ್ಣ ಉದ್ಯಮಗಳು ಜಿಎಸ್‌ಟಿ ಪಾವತಿಸುವುದರಿಂದ ವಿನಾಯಿತಿ ಪಡೆಯಬಹುದು. ಹೆಚ್ಚುವರಿಯಾಗಿ, ಒಂದು ಸಂಯೋಜನೆ ಯೋಜನೆಯನ್ನು ಹೊಂದಿದೆ. ಇದರಡಿ ಆರ್ಥಿಕ ವರ್ಷದಲ್ಲಿ ಒಟ್ಟು ವಹಿವಾಟು 75 ಲಕ್ಷ ರೂ.ಗಳನ್ನು ಮೀರದ ಅರ್ಹ ನೊಂದಾಯಿತ ವ್ಯಕ್ತಿಯು ತ್ರೈಮಾಸಿಕ ಆಧಾರದಲ್ಲಿ ಸಂಕ್ಷಿಪ್ತ ರಿಟರ್ನ್ಸ್ ಸಲ್ಲಿಸಹುದು. ಸರಕುಗಳಲ್ಲಿ (ವ್ಯಾಪಾರಿಗಳು ಮತ್ತು ಉತ್ಪಾದಕರು ಇಬ್ಬರೂ) ವ್ಯವಹರಿಸುತ್ತಿರುವವರು ಹಾಗೂ ಹೊಟೆಲ್ ವಲಯದ ತೆರಿಗೆ ಪಾವತಿದಾರರು ಕೇವಲ ಸಂಯೋಜನೆ ಯೋಜನೆಯನ್ನು ಮಾತ್ರ ಆರಿಸಿಕೊಳ್ಳಬಹುದು. ಸಂಯೋಜನೆ ಯೋಜನೆ ಅಡಿ, ಉತ್ಪಾದಕರು ತೆರಿಗೆಯನ್ನು 1% ದರದಲ್ಲಿ; ಹೋಟೆಲ್ ವಲಯ 2.5% ದರದಲ್ಲಿ ಹಾಗೂ ವ್ಯಾಪಾರಿಗಳು ವಹಿವಾಟಿನ 0.5% ದರವನ್ನು ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ಕಾಯ್ದೆ ಅಡಿ ತೆರಿಗೆಯನ್ನು ಪಾವತಿಸುತ್ತಾರೆ. ಏನೇ ಆದರೂ, ಅಂತಾರಾಜ್ಯ ಪೂರೈಕೆ ಮಾಡುವವರು ಅಥವಾ ಇ–ವಾಣಿಜ್ಯ ನಿರ್ವಹಣೆ ಮೂಲಕ ಪೂರೈಕೆ ಮಾಡುವ ಸೇವೆ ಪೂರೈಕೆದಾರರು ಹಾಗೂ ತೆರಿಗೆ ಪಾವತಿದಾರರು ಸಂಯೋಜನೆ ಯೋಜನೆಗೆ ಅರ್ಹರಲ್ಲ.


**ಸೋರಿಕೆ ಮತ್ತು ಭ್ರಷ್ಟಾಚಾರ ಪತ್ತೆ :** ಭಾರತೀಯ ಜಿಎಸ್‌ಟಿ ಇನ್‌ವೈಸ್ (ಸರಕು ಪಟ್ಟಿ)ಗಳನ್ನು ಹೊಂದಿಸುವ ಯಾಂತ್ರಿಕ ವ್ಯವಸ್ಥೆಯನ್ನು ಹೊಂದಲಿದೆ. ಖರೀದಿದಾರ ಸ್ವೀಕರಿಸಿದ ತೆರಿಗೆ ವಿಧಿಸಬಹುದಾದ ಪೂರೈಕೆಗಳು ಪೂರೈಕೆದಾರ ಸ್ವೀಕರಿಸಿದ ತೆರಿಗೆ ವಿಧಿಸಬಹುದಾದ ಪೂರೈಕೆಗಳ ಎದುರು ಹೊಂದಾಣಿಕೆಯಾದರೆ ಮಾತ್ರ ಖರೀದಿಸಿದ ಸರಕುಗಳು ಮತ್ತು ಸೇವೆಗಳ ಒಳಸುರಿವು ತೆರಿಗೆ ಕ್ರೆಡಿಟ್ ಲಭ್ಯವಿರುತ್ತದೆ. ಐಟಿ ಬೆನ್ನೆಲುಬಿಗೆ ಜವಾಬ್ದಾರವಾದ ಸರಕುಗಳು ಮತ್ತು ಸೇವೆಗಳ ತೆರಿಗೆ ಜಾಲವು ತಿಂಗಳಿಗೆ ಮೂರು ಶತಕೋಟಿಗಿಂತ ಹೆಚ್ಚು ಸರಕುಪಟ್ಟಿಗಳನ್ನು ಹೊಂದಿಸಲು ಸಜ್ಜಾಗಿದೆ. ಇದೊಂದು ಸ್ವ–ನಿಯಂತ್ರಿತ ಯಾಂತ್ರಿಕ ವ್ಯವಸ್ಥೆಯಾಗಬಹುದು. ಇದು ಕೇವಲ ತೆರಿಗೆ ಅಪರಾಧಗಳು ಮತ್ತು ತೆರಿಗೆ ತಪ್ಪಿಸಿಕೊಳ್ಳುವಿಕೆಯನ್ನು ಮಾತ್ರ ಪತ್ತೆಹಚ್ಚುವುದಿಲ್ಲ, ಜೊತೆಗೆ, ಔಪಚಾರಿಕ ಆರ್ಥಿಕತೆಗೆ ಹೆಚ್ಚು ಹೆಚ್ಚು ಉದ್ಯಮಗಳನ್ನು ತರುತ್ತದೆ. ಹೊಸ ಜಿಎಸ್‌ಟಿ ಆಡಳಿತದಲ್ಲಿ, ತೆರಿಗೆ ಪಾವತಿದಾರನು ಅಂತರ್ಜಾಲದಲ್ಲಿ ಒಂದೇ ಪೋರ್ಟಲ್‌ನಲ್ಲಿ ನೊಂದಾಯಿಸಬಹುದು, ವಾಪಸಾತಿಗಾಗಿ ಫೈಲ್ ಮಾಡಬಹುದು ಮತ್ತು ತೆರಿಗೆಗಳನ್ನು ಪಾವತಿಸಬಹುದು. ಅಪರೂಪದ ಪ್ರಕರಣದಲ್ಲಿಯೂ, ಒಂದು ವೇಳೆ ತೆರಿಗೆ–ಪಾವತಿದಾರ ತೆರಿಗೆ ಅಧಿಕಾರಿಗಳೊಂದಿಗೆ ಸಂವಹನ ಹೊಂದಬೇಕಾದರೆ, ಆತ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಯಾವುದೇ ಓರ್ವ ತೆರಿಗೆ ಅಧಿಕಾರಿಯೊಂದಿಗೆ ಮಾತ್ರ ವ್ಯವಹರಿಸಬೇಕಾಗುತ್ತದೆ. ಏಕೆಂದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ತೆರಿಗೆ ಅಧಿಕಾರಿಗಳು ಒಬ್ಬರಿಗೊಬ್ಬರ ಕಾನೂನಿನಲ್ಲಿ ಕ್ರಮ ಕೈಗೊಳ್ಳಲು ಅಧಿಕಾರ (ಕ್ರಾಸ್ ಎಂಪವರ್) ಹೊಂದಿರುತ್ತಾರೆ. ತೆರಿಗೆ ಪಾವತಿದಾರ ತೆರಿಗೆ ಅಧಿಕಾರಿಗಳೊಂದಿಗೆ ಕನಿಷ್ಠ ವ್ಯವಹಾರ ಮಾತ್ರ ನಡೆಸುವುದರಿಂದ ತೆರಿಗೆಯಿಂದ ತಪ್ಪಿಸಿಕೊಳ್ಳುವುದು ಹೆಚ್ಚು ಕಷ್ಟಕರವಾಗಲಿದ್ದು, ಭ್ರಷ್ಟಾಚಾರವನ್ನು ದೊಡ್ಡ ಮಟ್ಟದಲ್ಲಿ ಪರಿಶೀಲಿಸಬಹುದು.

**ಕೊನೆಯ ಮಾತು:** ಭಾರತದಲ್ಲಿ 2017ರ ಜುಲೈ 1ರಿಂದ ಜಿಎಸ್‌ಟಿ ಜಾರಿಗೊಳಿಸಿರುವುದು ಒಂದು ಪರಿವರ್ತನೆಯ ಸುಧಾರಣೆಯಾಗಿದೆ ಹಾಗೂ ಭಾರತದಲ್ಲಿ ಉದ್ಯಮ ನಡೆಸುವ ಮಾರ್ಗವನ್ನೇ ಬದಲಾಯಿಸಲಿದೆ. ಎಲ್ಲ ಷೇರುದಾರರು ಈ ಸುಧಾರಣೆಯನ್ನು ಸ್ವಾಗತಿಸಿದ್ದಾರೆ. ಹೊಸ ಜಿಎಸ್‌ಟಿ ಆಡಳಿತವು ಹೆಚ್ಚು ಮತ್ತು ಹೆಚ್ಚು ಉದ್ಯಮಗಳನ್ನು ಔಪಚಾರಿಕ ಆರ್ಥಿಕತೆಗೆ ತರಲಿದೆ. ಯಾವುದೇ ವಿಸ್ತಾರವಾದ ಆಮೂಲಾಗ್ರ ಬದಲಾವಣೆಯಂತೆ ಇದೂ ಅಲ್ಪ ಸ್ವಲ್ಪ ನೋವನ್ನು ತರಿಸಲಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿನ ಎರಡೂ ತೆರಿಗೆ ಆಡಳಿತಗಳು ಪರಿವರ್ತನೆಯನ್ನು ನಯವಾಗಿಯೇ ಮಾಡಲು ಶ್ರಮಿಸುತ್ತಿದ್ದಾರೆ. ಆದರೆ ಈ ಕ್ಷಣಿಕ ಭಾರತದ ಆರ್ಥಿಕತೆಗೆ ಹಲವು ಮತ್ತು ದೀರ್ಘ ಕಾಲದ ಗಳಿಕೆ ಸಿಗಲಿದೆ. ❑

ಸುಸ್ಥಿರ

# ಏಕೀಕೃತ ತೆರಿಗೆ ವ್ಯವಸ್ಥೆ ಪರ್ವ

* ಟಿ ಎನ್ ಅಶೋಕ್



ಜಿಎಸ್‌ಟಿ ವ್ಯವಸ್ಥೆ ಬಹುತೇಕ ವ್ಯಾಪಾರಿಗಳನ್ನು ತೆರಿಗೆ ಜಾಲಕ್ಕೆ ತಂದು ನಿಲ್ಲಿಸಿದೆ. ಸರಕು ಸಾಮಗ್ರಿಗಳು ದೇಶಾದ್ಯಂತ ಸರಾಗವಾಗಿ ಸಾಗಣೆಯಾಗುವಂತೆ ಮಾಡಿದೆ. ನಾಗರಿಕರು ಹೆಚ್ಚಿನ ಬೆಲೆ ತೆರಬೇಕಾದ ಸನ್ನಿವೇಶವಿದ್ದಾಗ್ಯೂ ಸಹ ಏಕರೂಪದ ತೆರಿಗೆ ಮತ್ತು ಮಾರುಕಟ್ಟೆ ವ್ಯವಸ್ಥೆಯ ಫಲವಾಗಿ ವಿದೇಶಿ ಹೂಡಿಕೆದಾರರನ್ನು ಸೆಳೆಯುತ್ತಿದೆ.

ಜೂನ್ 30 – ಜುಲೈ 01, 2017ರ ಮಧ್ಯರಾತ್ರಿಯು ಹೊಸ ಇತಿಹಾಸವೊಂದರ ಸೃಷ್ಟಿಗೆ ಸಾಕ್ಷಿಯಾಯಿತು. ಸ್ವಾತಂತ್ರ್ಯ ಸಂಭ್ರಮದ 1947ರ ಮಧ್ಯರಾತ್ರಿ ಮತ್ತು 2017ರ ಮಧ್ಯರಾತ್ರಿಗಳನ್ನು ಹೋಲಿಕೆ ಮಾಡಲು ಸಾಧ್ಯವಿಲ್ಲವಾದರೂ, ಸಂಸತ್ ಭವನದ ಕೇಂದ್ರೀಯ ಹಾಲ್‌ನಲ್ಲಿ ರಾಷ್ಟ್ರಪತಿಗಳ ಹಾಗೂ ಪ್ರಧಾನ ಮಂತ್ರಿಗಳ ಉಪಸ್ಥಿತಿ, ಅಲ್ಲಿ ಕಂಡು ಬಂದ ವಾತಾವಣವು ಅಕ್ಷರಶಃ ಇತಿಹಾಸವನ್ನು ನೆನಪಿಸುತ್ತಿತ್ತು. ಆದರೆ, ಆಗ ರಾಜಕೀಯ ಸ್ವಾತಂತ್ರ್ಯವಾದರೆ, ಈ ಬಾರಿ ಅಲ್ಲಿ ನೆನಪಾಗಿದ್ದು ಆರ್ಥಿಕ ಸ್ವಾತಂತ್ರ್ಯ.

ಭಾರತ ಸರ್ಕಾರವು, 'ಒಂದು ದೇಶ ಮತ್ತು ಒಂದು ತೆರಿಗೆ' ನೀತಿ ಅಡಿಯಲ್ಲಿ ದೇಶಾದ್ಯಂತ ಸರಕುಗಳನ್ನು ಮುಕ್ತವಾಗಿ ಚಲಿಸಲು ಮತ್ತು ತಯಾರಕರಿಗೆ, ಉತ್ಪಾದಕರಿಗೆ ಮತ್ತು ಹೂಡಿಕೆದಾರರ ಜೀವನವನ್ನು ಸುಲಭಮಾಡುವ ನಿಟ್ಟಿನಲ್ಲಿ ಏಕೀಕೃತ ಮಾರುಕಟ್ಟೆ ನಿರ್ಮಿಸಲು ಬಯಸುತ್ತಿದೆ. ಜಿಎಸ್‌ಟಿ ಜಾಗತಿಕ ಗುಣಮಟ್ಟಕ್ಕೆ ಅನುಗುಣವಾಗಿ ಭಾರತೀಯ ತೆರಿಗೆ ನೀತಿಯನ್ನು ಸರಿದೂಗಿಸಲು ಬಯಸುತ್ತಿದೆ ಮತ್ತು ಮುಖ್ಯವಾಗಿ ಪ್ರಮುಖ ವ್ಯಾಪಾರ ಪಾಲುದಾರರೆನಿಸಿದ ಯೂರೋಪ್, ಅಮೆರಿಕದ ನೀತಿಗಳೊಂದಿಗೆ ಹೊಂದಾಣಿಕೆ ಕಲ್ಪಿಸಲು ಬಯಸುತ್ತಿದೆ. ತನ್ನ ನಾಲ್ಕು ಹಂತಗಳ ತೆರಿಗೆ ವ್ಯವಸ್ಥೆ ಮೂಲಕ ಇದು ಕೆಲವೊಂದು ಉತ್ಪನ್ನಗಳನ್ನು ದುಬಾರಿ ಮತ್ತು ಕೆಲ ಉತ್ಪನ್ನಗಳನ್ನು ಅಗ್ಗವಾಗಿಸುತ್ತದೆ.

ಸಾಮೂಹಿಕ ಬಳಕೆಯ ಉತ್ಪನ್ನಗಳು ಅಗ್ಗವಾಗಿವೆ. ಐಷಾರಾಮಿ ಸ್ವರೂಪದ ವಸ್ತುಗಳು ದುಬಾರಿಯಾಗಿವೆ. ಬೆಲೆಗಳು ಸ್ಥಿರವಾಗಿ ಏರಿಕೆ ಕಂಡಿವೆ. ಹೊಸ ತೆರಿಗೆ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು, ನಿತ್ಯೋಪಯೋಗಿ ಉತ್ಪನ್ನಗಳ ಮೇಲಿನ ಕಡಿಮೆ ತೆರಿಗೆ ಹಾಗೂ ನಿತ್ಯ ಉಪಯೋಗಿಸದ ವಸ್ತುಗಳ ಮೇಲಿನ ದುಬಾರಿ ತೆರಿಗೆ ನಡುವಿನ ಸಮತೋಲನವನ್ನು ಅರ್ಥಮಾಡಿಕೊಳ್ಳಲು ಜನರಿಗೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಈ ತೆರಿಗೆ ಪದ್ಧತಿ ಅನುಷ್ಠಾನದ ವಿಚಾರದಲ್ಲಿ ರಾಜಕೀಯ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಇದ್ದಾಗ್ಯೂ ಸಹ, ಸಾಧನೆಯನ್ನು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ನೀಡಲು ಸಾಧ್ಯವಿಲ್ಲ. ಹಿಂದಿನ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್, ಆರ್ಥಿಕತೆ ಸುಧಾರಣೆಯ ಶಿಲ್ಪಿ ಎಂದೇ ಖ್ಯಾತರಾದ ಅಂದಿನ ಪ್ರಧಾನ ಮಂತ್ರಿ ನರಸಿಂಹರಾವ್ ಅವರಿಗೂ ಸಹ ಜಿಎಸ್‌ಟಿ ಪರಿಕಲ್ಪನೆಯನ್ನು ಭಿತ್ತಿದ ಶ್ರೇಯ ಸಲ್ಲಬೇಕು. ಆದಾಗ್ಯೂ ಹಿಂದಿನ ಸರ್ಕಾರಗಳು ಹಾಗೂ ಈಗಿನ ಸರ್ಕಾರದ ನಡುವೆ ಜಿಎಸ್‌ಟಿಯ ಕೆಲವು ಅಂಶಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಈ ಕುರಿತು ಕೇಂದ್ರ ಹಣಕಾಸು ಸಚಿವರು ನೀಡಿದ ಹೇಳಿಕೆ ಏನೆಂದರೆ, 'ಎಲ್ಲಾ ಸರ್ಕಾರಗಳು ಜಿ.ಎಸ್.ಟಿ. ಜಾರಿಗೆ ತಮ್ಮದೇ ಆದ ಕೊಡುಗೆ ನೀಡಿವೆ. ಇದಕ್ಕಾಗಿ ಯಾರೂ ತಮ್ಮ ಬೆನ್ನು ತಟ್ಟಿಕೊಳ್ಳಬೇಕಾಗಿಲ್ಲ'.

### ಜಿಎಸ್‌ಟಿ ನಡೆದು ಬಂದ ಹಾದಿ

ಸರ್ಕಾರ, ಲೋಕಸಭೆಯಲ್ಲಿ ನಾಲ್ಕು ಶಾಸನಗಳನ್ನು ಅಂಗೀಕರಿಸಿ, ರಾಜ್ಯಸಭೆಯಿಂದಲೂ ಹಿಂಪಡೆದು (ಹಣಕಾಸು ಮಸೂದೆಯನ್ನು ರಾಜ್ಯಸಭೆ ಅಂಗೀಕರಿಸುವಂತಿಲ್ಲ. ಕೇವಲ

* ಹಿರಿಯ ಪತ್ರಕರ್ತರು, ಕಾರ್ಯಕಾರಿ ಸಂಪಾದಕರು, 'ಟೈಕೂನ್ಸ್ ಕಾರ್ಪೊರೇಟ್'. E-mail : feedback@ashoktnex@gmail.com

ಹಿಂದಿರುಗಿಸಬಹುದು) ಜಿ.ಎಸ್.ಟಿ. ಅಳವಡಿಸಿದೆ.


ಹೊಸ ತೆರಿಗೆ ಪದ್ಧತಿಯು ಒಂದೇ ರೀತಿಯ ಪರೋಕ್ಷ ತೆರಿಗೆಯಾದ್ದರಿಂದ ಹಣದುಬ್ಬರಕ್ಕೆ ಕಾರಣವಾಗಬಹುದು ಎಂದು ಕೆಲವೊಂದು ವರ್ಗದವರು ಹೇಳುತ್ತಿದ್ದಾರೆ. ವಿರೋಧ ಪಕ್ಷಗಳು ಹಲವು ಬಾರಿ ಮಾಡಿದ ಸಲಹೆ ಸೂಚನೆಗಳನ್ನು ತಿದ್ದುಪಡಿ ಮಾಡಿದ ನಂತರ ಈ ಮಸೂದೆಗೆ ರಾಜ್ಯಸಭೆ ಕೂಡ ಸಮ್ಮತಿ ನೀಡಿದೆ. ಲೋಕಸಭೆಯು ಈ ಮಸೂದೆಗೆ ಮಾರ್ಚ್ 29 ರಂದು ಅಂಗೀಕಾರ ನೀಡಿತು. ಮೇ ತಿಂಗಳ ಮಧ್ಯಾವಧಿಯಲ್ಲಿ ಸರ್ಕಾರ ನಿಯಮಾವಳಿಗಳು ಹಾಗೂ ದರಗಳಿಗೆ ಅನುಮೋದನೆ ನೀಡಿತು.

ಜಿ.ಎಸ್.ಟಿ. ಅನುಷ್ಠಾನಗೊಳಿಸಲು ಸಂಸತ್ತು, ನಾಲ್ಕು ಶಾಸನಗಳನ್ನು ಮಾಡಿದೆ.

1. ಕೇಂದ್ರೀಯ ಜಿ.ಎಸ್.ಟಿ. ಮಸೂದೆ, 2017;
2. ಸಮಗ್ರ ಜಿ.ಎಸ್.ಟಿ. ಮಸೂದೆ, 2017
3. ಜಿ.ಎಸ್.ಟಿ. (ರಾಜ್ಯಗಳಿಗೆ ಪರಿಹಾರ) ಮಸೂದೆ, 2017
4. ಕೇಂದ್ರಾಡಳಿತ ಜಿ.ಎಸ್.ಟಿ. ಮಸೂದೆ, 2017

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸಿದ್ದ ಹಲವಾರು ತೆರಿಗೆಗಳ ಬದಲಿಗೆ ಸರಕು ಮತ್ತು ಸೇವೆಗಳ ತೆರಿಗೆಯು ಬಂದಿದೆ. ಜಿ.ಎಸ್.ಟಿ.ಯನ್ನು ಸಂವಿಧಾನ (ನೂರ ಒಂದನೇ ತಿದ್ದುಪಡಿ) ಕಾಯ್ದೆ 2016ರಲ್ಲಿ ಸಂವಿಧಾನದ 122ನೇ ತಿದ್ದುಪಡಿ ಮಸೂದೆ ಮೂಲಕ ಜಾರಿಗೊಳಿಸಲಾಗಿದೆ. ಜಿ.ಎಸ್.ಟಿ. ಕೌನ್ಸಿಲ್ ಈ ತೆರಿಗೆಯ ನಿರ್ವಹಣೆ ಮಾಡುತ್ತದೆ. ಕೇಂದ್ರ ಹಣಕಾಸು ಸಚಿವರು ಈ ಕೌನ್ಸಿಲ್‌ನ ಅಧ್ಯಕ್ಷರಾಗಿರುತ್ತಾರೆ. ಜಿ.ಎಸ್.ಡಿ. ಅಡಿಯಲ್ಲಿ ವಿವಿಧ ಸ್ಲ್ಯಾಬ್‌ಗಳಲ್ಲಿ ತೆರಿಗೆ ವಿಧಿಸಲಾಗುತ್ತದೆ. 5%, 12%, 18%, 28% ದರದಲ್ಲಿ ತೆರಿಗೆ ಇದ್ದು, ಅಮೂಲ್ಯ ಹರಳುಗಳು ಹಾಗೂ ಅರೆ–ಅಮೂಲ್ಯ ಹರಳುಗಳ ಮೇಲೆ 0.25% ಹಾಗೂ ಚಿನ್ನದ ಮೇಲೆ 3% ವಿಶೇಷ ದರ ನಿಗದಿ ಮಾಡಿದೆ.

ಇತಿಹಾಸದ ಕಡೆಗೆ ನೋಡಿದಾಗ, ಮಾಜಿ ಪ್ರಧಾನ ಮಂತ್ರಿ ವಿಶ್ವನಾಥ ಪ್ರತಾಪ್ ಸಿಂಗ್ ಅವರು 1986ರಲ್ಲಿ ಪರಿಷ್ಕೃತ ಮೌಲ್ಯವರ್ಧಿತ ತೆರಿಗೆ ಪದ್ಧತಿ ಜಾರಿಗೆ



ತಂದರು. ಈಗಿನ ಸರಕು ಮತ್ತು ಸೇವೆಗಳ ತೆರಿಗೆ ಹಲವಾರು ತೆರಿಗೆಗಳನ್ನು ತನ್ನೊಳಗೆ ವಿಲೀನಗೊಳಿಸಿಕೊಂಡಿದೆ. ಕೇಂದ್ರೀಯ ಅಬಕಾರಿ ಸುಂಕ, ಸೇವಾ ತೆರಿಗೆ, ಹೆಚ್ಚುವರಿ ಕಸ್ಟಮ್ಸ್ ಸುಂಕ, ಸರ್ಚಾರ್ಜ್, ರಾಜ್ಯ ಮಟ್ಟದ ಮೌಲ್ಯವರ್ಧಿತ ತೆರಿಗೆ ಮತ್ತು ಆಕ್ಟ್ರಾಯ್ (ಪ್ರವೇಶ ತೆರಿಗೆ) ತೆರಿಗೆ ಮುಂತಾದ ಎಲ್ಲಾ ತೆರಿಗೆಗಳು ಜಿ.ಎಸ್.ಟಿ.ಯೊಂದಿಗೆ ವಿಲೀನಗೊಂಡಿವೆ.

ಅಂತಾರಾಜ್ಯಗಳ ನಡುವೆ ನಡೆಯುವ ಸರಕು ಸಾಗಣೆ ಮೇಲಿನ ಪ್ರಸ್ತುತ ಬಳಕೆಯಲ್ಲಿರುವ ಇತರ ಶುಲ್ಕಗಳು ಸಹ ಜಿ.ಎಸ್.ಟಿ. ವ್ಯಾಪ್ತಿಗೆ ಬರಲಿವೆ.

ಜಿಎಸ್‌ಟಿನಲ್ಲಿ ಕೇಂದ್ರೀಯ ಅಬಕಾರಿ ಸುಂಕ, ವಾಣಿಜ್ಯ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಆಹಾರ ತೆರಿಗೆ, ಕೇಂದ್ರೀಯ ಮಾರಾಟ ತೆರಿಗೆ, ಆಕ್ಟ್ರಾಯ್, ಮನರಂಜನಾ ತೆರಿಗೆ, ಪ್ರವೇಶ ತೆರಿಗೆ, ಖರೀದಿ ತೆರಿಗೆ, ಲಕ್ಷುರಿ ತೆರಿಗೆ, ಜಾಹಿರಾತು ತೆರಿಗೆಗಳು ಸಹ ಸೇರಿಕೊಳ್ಳಲಿವೆ.

ಮಾರಾಟ, ವರ್ಗಾವಣೆ, ಖರೀದಿ, ವಿನಿಮಯ, ಭೋಗ್ಯ, ಸರಕು ಮತ್ತು ಸೇವೆಗಳ ಆಮದು ಮುಂತಾದ ಎಲ್ಲಾ ವ್ಯವಹಾರಗಳ ಮೇಲೆ ಜಿ.ಎಸ್.ಟಿ. ಶುಲ್ಕ ವಿಧಿಸಲಾಗುತ್ತದೆ. ಭಾರತವು ದ್ವಿಪದ್ಧತಿಯ ಜಿ.ಎಸ್.ಟಿ. ಮಾದರಿಯನ್ನು ಅಳವಡಿಸಿಕೊಂಡಿದೆ. ಅಂದರೆ, ಒಕ್ಕೂಟ ಮತ್ತು ರಾಜ್ಯ ಎರಡೂ ಸರ್ಕಾರಗಳು ಈ ತೆರಿಗೆ ಪದ್ಧತಿಯನ್ನು ನಿರ್ವಹಿಸುತ್ತವೆ. ಒಂದು ರಾಜ್ಯದ ಒಳಗೆ ನಡೆಯುವ ವ್ಯವಹಾರಕ್ಕೆ ಕೇಂದ್ರ ಸರ್ಕಾರವು ಕೇಂದ್ರಿಯ ಜಿ.ಎಸ್.ಟಿ. (ಸಿಜಿಎಸ್‌ಟಿ) ಶುಲ್ಕ ವಿಧಿಸಿದರೆ, ಅದೇ ರಾಜ್ಯದ ರಾಜ್ಯ ಸರ್ಕಾರ ರಾಜ್ಯ ಜಿ.ಎಸ್.ಟಿ. (ಎಸ್‌ಜಿಎಸ್‌ಟಿ) ವಿಧಿಸುತ್ತದೆ. ಅಂತಾರಾಜ್ಯಗಳ ನಡುವೆ ನಡೆಯುವ ವ್ಯವಹಾರಗಳು ಹಾಗೂ ಆಮದು ಆಗಿರುವ ಸರಕು ಮತ್ತು ಸೇವೆಗಳಿಗೆ ಸಮಗ್ರ ಜಿ.ಎಸ್.ಟಿ. (ಐಜಿಎಸ್‌ಟಿ) ಶುಲ್ಕವನ್ನು ಕೇಂದ್ರ ಸರ್ಕಾರ ವಿಧಿಸುತ್ತದೆ.

ಜಿ.ಎಸ್.ಟಿ. ತೆರಿಗೆಯು ಉಪಭೋಗ ಆಧರಿತ ತೆರಿಗೆಯಾಗಿರುವುದರಿಂದ ಸರಕು ಮತ್ತು ಸೇವೆಗಳು ಯಾವ ರಾಜ್ಯದಲ್ಲಿ ಉಪಯೋಗಿಸಲ್ಪಡುತ್ತವೆಯೊ ಅದೇ ರಾಜ್ಯಕ್ಕೆ ತೆರಿಗೆ ಪಾವತಿಸಲ್ಪಡುತ್ತವೆ. ಅಂದರೆ ಸರಕು ಮತ್ತು ಸೇವೆಗಳು ಉತ್ಪಾದನೆಯಾದ ರಾಜ್ಯಗಳಿಗೆ ಅನ್ವಯವಾಗುವುದಿಲ್ಲ. ಕೇಂದ್ರ ಸರ್ಕಾರ ವಿಧಿಸಿದ ಐಜಿಎಸ್‌ಟಿ ತೆರಿಗೆ ಸಂಗ್ರಹ ಮಾಡಲು ರಾಜ್ಯ ಸರ್ಕಾರಗಳಿಗೆ ಕಷ್ಟಕರವಾಗುತ್ತಿದೆ. ಹಿಂದಿನ ಪದ್ಧತಿಯಲ್ಲಿ ಈ ತೆರಿಗೆ ಸಂಗ್ರಹವನ್ನು ರಾಜ್ಯವೇ ಏಕಾಂಗಿಯಾಗಿ ನಿರ್ವಹಿಸುತ್ತಿತ್ತು.

ಜಿ.ಎಸ್.ಟಿ. ಶುಲ್ಕವನ್ನು ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲೆಯೂ ವಿಧಿಸಲಾಗುತ್ತದೆ ಎಂಬ ಭಾವನೆಯಿಂದ ಜಿ.ಎಸ್.ಟಿ. ಪರಿಣಾಮದಿಂದ ರಾಜ್ಯಗಳ ಆದಾಯವನ್ನು ಪ್ರತ್ಯೇಕಿಸಬೇಕೆಂದು ಪ್ರಸ್ತಾವಿಸಲಾಗಿತ್ತು. ಆದ್ದರಿಂದ, ಜಿ.ಎಸ್.ಟಿ. ಜಾರಿಗೆ ಬಂದ ದಿನದಿಂದ ರಾಜ್ಯಗಳಿಗೆ ನಷ್ಟ ಉಂಟಾದರೆ ಅದನ್ನು ಕಟ್ಟಿಕೊಡುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿದೆ. ಜಿ.ಎಸ್.ಟಿ.ಯ ಪ್ರಮುಖ ಪರಿಣಾಮವೆಂದರೆ ಭಾರತದಲ್ಲಿ ಇಂಧನಗಳ ದರ ಪ್ರತಿದಿನವೂ ಬದಲಾಗುತ್ತಿದೆ.

ಉದ್ದೇಶಿತ ಜಿ.ಎಸ್.ಟಿ. ಕಾನೂನಿನ ಬಗ್ಗೆ ಪರಿಶೀಲನೆ ನಡೆಸಲು 21 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರ ಹೊರತು ಪಡಿಸಿ, ಭಾರತದ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಜಿ.ಎಸ್.ಟಿ. ಕಾನೂನುಗಳನ್ನು ಅಂಗೀಕರಿಸಿವೆ. ಇದರಿಂದ ಜುಲೈ 1, 2017 ರಿಂದ ಜಿ.ಎಸ್.ಟಿ. ಜಾರಿಯನ್ನು ಸುಗಮಗೊಳಿಸಲಾಗಿದೆ. ಭದ್ರತಾ ಬಾಂಡ್‌ಗಳ ಖರೀದಿ ಮತ್ತು ಮಾರಾಟಕ್ಕೆ ಜಿ.ಎಸ್.ಟಿ. ಅನ್ವಯವಾಗಿಲ್ಲ. ಈ ವ್ಯವಹಾರವನ್ನು ಸೆಕ್ಯುರಿಟೀಸ್ ಟ್ರಾನ್ಸಾಕ್ಷನ್ ತೆರಿಗೆ (ಭದ್ರತೆಗಳ ವ್ಯವಹಾರ ತೆರಿಗೆ)ಯ ಮೂಲಕ ನಿರ್ವಹಿಸಲಾಗುತ್ತಿದೆ.

ತೆರಿಗೆದಾರರು, ಸರ್ಕಾರ ಹಾಗೂ ಇತರೆ ಪಾಲುದಾರರನ್ನು ಒಂದೇ ಪೋರ್ಟಲ್‌ಗೆ ತಂದು ಒಂದು ಸಮಾನ ಭೂಮಿಕೆ ಕಲ್ಪಿಸುವ ಉದ್ದೇಶದಿಂದ ಸರಕು

ಮತ್ತು ಸೇವೆಗಳ ತೆರಿಗೆ ಸಂಪರ್ಕಜಾಲ ಎಂಬ ಸರ್ಕಾರೇತರ ಸಂಸ್ಥೆಯನ್ನು ಪರ್ಯಾಯವಾಗಿ ಹುಟ್ಟುಹಾಕಲಾಗಿದೆ. ಕೇಂದ್ರ ಸರ್ಕಾರ ಈ ಪೋರ್ಟಲ್‌ನ ನೆರವಿನಿಂದ ಪ್ರತಿ ತೆರಿಗೆ ವ್ಯವಹಾರವನ್ನು ಪತ್ತೆ ಹಚ್ಚಬಹುದು. ತೆರಿಗೆ ಪಾವತಿದಾರರು ಇಲ್ಲಿ ರಿಟರ್ನ್ಸ್ ಸಲ್ಲಿಸಬಹುದು. ಮುಖ್ಯ ದಾಖಲೆಗಳನ್ನು ನಿರ್ವಹಿಸಬಹುದು ಅಂತಹ ಸೇವೆಯನ್ನು ಈ ಪೋರ್ಟಲ್ ಒದಗಿಸಿದೆ.

ಕೇಂದ್ರ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡ ಖಾಸಗಿ ಉದ್ಯಮಗಳು ಆದಾಯ ತೆರಿಗೆ ಸಂಪರ್ಕ ಜಾಲವನ್ನು ಅಭಿವೃದ್ಧಿಪಡಿಸುತ್ತವೆ. ಇದಕ್ಕಾಗಿ ತಮ್ಮ ಸಂಭಾವನೆಯನ್ನು ಪಡೆಯುತ್ತವೆ. ಜಿ.ಎಸ್.ಟಿ.ಎನ್. ಅಧಿಕೃತ ಬಂಡವಾಳ 1.6 ಮಿಲಿಯನ್ ಡಾಲರ್‌ಗಳು. ಇದರಲ್ಲಿ ಕೇಂದ್ರ ಸರ್ಕಾರದ ಶೇ.24.5 ರಷ್ಟು ಪಾಲು ಹಾಗೂ ರಾಜ್ಯ ಸರ್ಕಾರದ ಶೇ. 24.5 ರಷ್ಟು ಪಾಲು ಇರುತ್ತದೆ. ಉಳಿಕೆ ಮೊತ್ತ ಖಾಸಗಿ ಬ್ಯಾಂಕಿಂಗ್ ಉದ್ಯಮಗಳದ್ದಾಗಿರುತ್ತದೆ.

ಜಿ.ಎಸ್.ಟಿ. ಕಾಯ್ದೆ ಪ್ರಕಾರ 2017ರ ಸೆಪ್ಟೆಂಬರ್ 12ರ ವೇಳೆಗೆ ಇದು ಸಂಪೂರ್ಣ ಜಾರಿಯಾಗಬೇಕು. ಆಗ ಉಳಿದ ಎಲ್ಲಾ ತೆರಿಗೆ ತಾನಾಗೆ ಸಮಾಪ್ತಿಗೊಳ್ಳುತ್ತವೆ. ಅಲ್ಲಿವರೆಗೂ ತೆರಿಗೆ ವಿಧಿಸದ ಪರಿಸ್ಥಿತಿಯನ್ನು ತಡೆದುಕೊಳ್ಳುವುದು ಯಾವ ದೇಶಕ್ಕೂ ಸಾಧ್ಯವಿಲ್ಲದ ಮಾತು. ಆದ್ದರಿಂದಲೇ ಸರ್ಕಾರ ಜುಲೈ 1ರಂದೇ ಕಾರ್ಯರೂಪಕ್ಕೆ ತಂದು, ಎಲ್ಲಾ ಪರೋಕ್ಷ ತೆರಿಗೆಗಳನ್ನು ಇದರೊಂದಿಗೆ ವಿಲೀನ ಮಾಡಲಾಗಿದೆ.

2017ರ ಜುಲೈ 1ರ ಮಧ್ಯರಾತ್ರಿ ಜಿ.ಎಸ್.ಟಿ. ಅನುಷ್ಠಾನಕ್ಕೆ ಬಂದಿರುವುದು ಐತಿಹಾಸಿಕ ಬೆಳವಣಿಗೆಯಾಗಿದ್ದು, ಮಧ್ಯರಾತ್ರಿ ಸಮಾವೇಶದಲ್ಲಿ ಈ ತೆರಿಗೆ ಅನುಷ್ಠಾನಕ್ಕೆ ತರುವ ಮೂಲಕ ಇಡಿ ವಿಶ್ವವೇ ಈ ಬೆಳವಣಿಗೆ ಗಮನಿಸುವಂತೆ ಮಾಡಲಾಗಿದೆ. ಕೆಲವು ತೆರಿಗೆ ದರಗಳು ಮತ್ತು ತ್ವರಿತ ಅನುಷ್ಠಾನದ ರೀತಿಯ ಬಗ್ಗೆ ಹಿಂಜರಿಕೆ ಇತ್ತು. ಹೊಸ ತೆರಿಗೆ ಪದ್ಧತಿಯ ಕಾರ್ಯಾಚರಣೆಗೆ ಹೊಂದಿಕೊಳ್ಳಲು ಉದ್ಯಮ ಇನ್ನೂ ಸಿದ್ಧವಾಗಿಲ್ಲ ಎಂಬ ಭಾವನೆ ಸಹ ಇತ್ತು.

ಯಾವುದೇ ಒಂದು ಹೊಸ ಕಾನೂನು ಬಂದಾಗ ಅನುಮಾನ ಹಾಗೂ ಗೊಂದಲ




ಇರುವಂತೆ ಜಿ.ಎಸ್.ಟಿ.ಗೂ ಕೂಡ ಅಚ್ಚರಿಯನ್ನು ಕಂಡಿತು. ನಾಗರಿಕರಿಗೆ ಬಿಲ್ ದರ ಹೆಚ್ಚಾಗಿರುವಂತೆ ಭಾಷವಾಯಿತು. ದೇಶವು ತೆರಿಗೆಯ ಗಮ್ಯಸ್ಥಾನಕ್ಕೆ ಬಂದು ತಲುಪಿದೆ ಎಂಬುದನ್ನು ನಾಗರಿಕರು ಅರ್ಥ ಮಾಡಿಕೊಂಡಂತಿಲ್ಲ. ಇದು ಉಪಭೋಗಿ ತೆರಿಗೆ ಪದ್ಧತಿ. ಮೊದಲೇ ಹೇಳಿದಂತೆ, ಎಲ್ಲಿ ಬಳಕೆ ಮಾಡಲಾಗುತ್ತದೊ, ಅಲ್ಲಿ ತೆರಿಗೆ ವಿಧಿಸಲಾಗುತ್ತದೆ. ಒಂದು ಸರಕು ತಮಿಳು ನಾಡು ಅಥವಾ ಆಂಧ್ರ ಪ್ರದೇಶ ಅಥವಾ ಮಹಾರಾಷ್ಟ್ರದಲ್ಲಿ ತಯಾರಾಗಿದ್ದರೂ ಸಹ ಅದನ್ನು ಉಪಯೋಗಿಸುವ ದೆಹಲಿ, ಚಂಡಿಗಢ, ಜೈಪುರ ಅಥವಾ ಲಖನೌದಲ್ಲಿ ತೆರಿಗೆಗೆ ಒಳಪಡುತ್ತದೆ.

2016ರ ನವೆಂಬರ್ 8 ರಂದು ದೊಡ್ಡ ಮೌಲ್ಯದ ನೋಟಿನ ಅಪಮೌಲ್ಯೀಕರಣದ ಘೋಷಣೆ ನಂತರ ಒಂದು ವಾರಗಳ ಕಾಲ ಎಲ್ಲರಲ್ಲೂ ಪ್ರಶ್ನೆಗಳ ಸುರಿಮಳೆಗೈದವು. ಈಗ ಜಿ.ಎಸ್.ಟಿ. ಸರದಿಯಾಗಿದ್ದು, ಜುಲೈ 1 ರಂದು ಬಿಲ್ಲುಗಳಲ್ಲಿ ಹಿಗ್ಗಿದ ದರಗಳು ಹಲವರನ್ನು ಅಚ್ಚರಿ, ಗಾಬರಿಯಲ್ಲಿ ಸಿಲುಕಿಸಿತು. ಆದರೆ ಸರ್ಕಾರದ ಉದ್ದೇಶ ನ್ಯಾಯೋಚಿತ ಹಾಗೂ ಸ್ಪಷ್ಟವಾಗಿದೆ. ಒಂದು ದೇಶ ಒಂದು ತೆರಿಗೆ ಎಂಬ ಧ್ಯೇಯದೊಂದಿಗೆ ಜಾರಿಯಾದ ಈ ತೆರಿಗೆ ಮಾರುಕಟ್ಟೆಯಲ್ಲಿ ದರಗಳ ಸಮಾನತೆಯನ್ನು ಸಾಧಿಸುವ ಹಾಗೂ ಜಾಗತಿಕ ಗುಣಮಟ್ಟಕ್ಕೆ ಹೊಂದಿಸುವ ಗುರಿ ಹೊಂದಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತವನ್ನು ಅತ್ಯಂತ ಸ್ಪರ್ಧಾತ್ಮಕವಾಗಿ ಮಾಡುವುದಾಗಿದೆ.

ಜಿ.ಎಸ್.ಟಿ.ಯು ಕಪ್ಪು ಹಣದ ಮೇಲಿನ ಎರಡನೇ ಸರ್ಜಿಕಲ್ ದಾಳಿಯಾಗಿದೆ. ಪ್ರತಿಯೊಬ್ಬ ವ್ಯಾಪಾರಿಯು ಜಿ.ಎಸ್.ಟಿ. ನೊಂದಣಿ ಮಾಡಿಸಿಕೊಂಡು, ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಹೇಳಿಕೆ ಸಲ್ಲಿಸಬೇಕಾಗುತ್ತದೆ. ಪ್ರತಿಯೊಬ್ಬ ವ್ಯಾಪಾರಿಯ ವ್ಯವಹಾರದ ಲೆಕ್ಕ ನೀಡುವುದು ಕಡ್ಡಾಯ ಹಾಗೂ ಕಾನೂನಾತ್ಮಕವಾಗಿದೆ.

ಸರ್ಕಾರ ಬಯಸಿದ್ದು ಏನೆಂದರೆ:

1. ವ್ಯಾಪಕವಾಗಿದ್ದ ಸುಮಾರು 15 ರಿಂದ 20 ತೆರಿಗೆಗಳನ್ನು ದೇಶಾದ್ಯಂತ ಒಂದೇ ತೆರಿಗೆಯಾಗಿ ಮಾಡುವುದು. ಭಾರತದಲ್ಲಿ ಒಂದೇ ರೀತಿಯ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು, ದೇಶಾದ್ಯಂತ ಸರಕುಗಳಿಗೆ ಒಂದೇ ರೀತಿಯ ದರ ಇರುವಂತೆ ನೋಡಿಕೊಳ್ಳುವುದು ಜಿ.ಎಸ್.ಟಿ.ಯ ಉದ್ದೇಶವಾಗಿದೆ. ಆದಾಗ್ಯೂ, ಕೆಲವು ಸರಕುಗಳು ದುಬಾರಿಯಾಗಿವೆ. ಕೆಲವು ಅಗ್ಗವಾಗಿವೆ.

2. ಜಿ.ಎಸ್.ಟಿ.ಯು ಅತ್ಯಂತ ಸರಳ ತೆರಿಗೆ. ಆದರೆ ವಿವಿಧ ಪದಾರ್ಥಗಳಿಗೆ ಐದು ಪದರದ ತೆರಿಗೆ ಸ್ಲ್ಯಾಬ್‌ಗಳು ಇರುವುದರಿಂದ ಅನುಷ್ಠಾನ ಸ್ವಲ್ಪ ಸಂಕೀರ್ಣವಾಗಿಸಿದೆ. ಇದು ಹೊಸದೇನು ಅಲ್ಲ. ವಿಶ್ವದ ಹಲವಾರು ರಾಷ್ಟ್ರಗಳು ತಮ್ಮ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ನೀಡಲು ಈಗಾಗಲೇ ಈ ಪದ್ಧತಿಯನ್ನು ಅನುಷ್ಠಾನಗೊಳಿಸುತ್ತಿವೆ. ಆದರೆ ದುಬಾರಿ ಭೋಗದ ವಸ್ತುಗಳಿಗೆ ಇರುವ ಶೇ.28%ರಷ್ಟು ಪದರದ ತೆರಿಗೆ ಬೇರೆ ದೇಶಗಳಲ್ಲಿ ಇಲ್ಲ. ಇಂಗ್ಲೆಂಡ್ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನ ರಾಷ್ಟ್ರಗಳಲ್ಲಿ ಶೇ.17% ಗಿಂತ ಹೆಚ್ಚಿನ ಸ್ಲ್ಯಾಬ್ ಇರುವ ತೆರಿಗೆ ವಿಧಿಸಿಲ್ಲ.

3. ಜಿ.ಎಸ್.ಟಿ. ಪರಿಕಲ್ಪನೆ ತುಂಬಾ ವಿಭಿನ್ನವಾದುದು. ಮೂಲದಲ್ಲಿ ಇದು ತೆರಿಗೆಗೆ ಒಳಪಡುವುದಿಲ್ಲ. ಗಮ್ಯದಲ್ಲಿ ತೆರಿಗೆಗೆ ಒಳಪಡುತ್ತದೆ. ಇದನ್ನು ಬಳಕೆ ಹಂತದಲ್ಲಿ ವಿಧಿಸುವ ತೆರಿಗೆ ಎನ್ನಬಹುದು. ಒಂದು ಉತ್ಪನ್ನ ತಮಿಳುನಾಡಿನಲ್ಲಿ ತಯಾರಾಗಿ, ವಿವಿಧ ರಾಜ್ಯಗಳಿಗೆ ತೆರಳುತ್ತದೆ. ಉದಾಹರಣೆಗೆ ದೆಹಲಿಯನ್ನು ತಲುಪುತ್ತದೆ. ಅಲ್ಲಿ ಗ್ರಾಹಕ ತೆರಿಗೆ ಪಾವತಿಸುತ್ತಾನೆ. ಈ ತೆರಿಗೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಮಾನ ಪಾಲು ಇದೆ. ರೆಸ್ಟೋರೆಂಟ್‌ನಲ್ಲಿ ಶೇ. 18% ರಷ್ಟು ತೆರಿಗೆ ವಿಧಿಸಿದರೆ, ಶೇ. 9% ರಷ್ಟು ಸಿಜಿಎಸ್‌ಟಿ ಮೂಲಕ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಶೇ. 9%ರಷ್ಟು ಎಸ್‌ಜಿಎಸ್‌ಟಿ ಮೂಲಕ ರಾಜ್ಯ ಸರ್ಕಾರಕ್ಕೆ ಹೋಗುತ್ತದೆ. ಇದು ಪ್ರತಿ ಬಿಲ್ಲಿನ ಮೇಲೂ ಕಾಣುತ್ತದೆ.

ವೈನ್ ಹಾಗೂ ಊಟೋಪಚಾರ ಈಗ ದುಬಾರಿಯಾಗಿದೆ. ಪ್ರಯಾಣ, ಅದರಲ್ಲೂ ವಿಶೇಷವಾಗಿ ವಾಯುಮಾರ್ಗದ ಪ್ರಮಾಣ ನಿಷೇಧಕವಾಗಿದೆ. ಹವಾನಿಯಂತ್ರಣ ಯಂತ್ರ, ಫ್ರಿಡ್ಜ್, ವಾಷಿಂಗ್ ಮೆಷಿನ್, ಸಂಕ್ಷಿಪ್ತವಾಗಿ ಹೇಳುವುದಾದರೆ ಬಿಳಿ ಸರಕುಗಳು ಈಗ ದುಬಾರಿಯಾಗಿವೆ. ಸುಮಾರು 1200 ವಸ್ತುಗಳ ಮೇಲೆ ಶೇ. 18% ರಷ್ಟು ತೆರಿಗೆ ವಿಧಿಸಿದ್ದು, ಇದು ಸಾಮಾನ್ಯವಾಗಿ ಹೆಚ್ಚು ಪದಾರ್ಥಗಳ ಮೇಲೆ ವಿಧಿಸಿದ ತೆರಿಗೆ ಸ್ಲ್ಯಾಬ್ ಆಗಿರುತ್ತದೆ. ಶೇ. 81ರಷ್ಟು ಸರಕುಗಳು ಈ ಪದರದಲ್ಲಿ ತೆರಿಗೆಗೆ ಒಳಪಟ್ಟಿವೆ ಎಂದು ಹೇಳಲಾಗಿದೆ.

**ಅಗ್ಗವಾಗಿರುವ ವಸ್ತುಗಳು**

**ತಿನಿಸುಗಳು :** 1. ಹಾಲಿನ ಪುಡಿ, 2. ಮೊಸರು, 3. ಮಜ್ಜಿಗೆ, 4. ಬ್ರಾಂಡ್ ರಹಿತ ನೈಸರ್ಗಿಕ ಜೇನುತುಪ್ಪ, 5. ಹೈನು ಉತ್ಪನ್ನಗಳು, 6. ಬೆಣ್ಣೆ, 7. ಮಸಾಲೆ ಪದಾರ್ಥಗಳು, 8. ಟೀ 9. ಗೋಧಿ, 10. ಅಕ್ಕಿ, 11. ಹಿಟ್ಟು, 12. ಕಡಲೆಕಾಯಿ ಬೀಜದ ಎಣ್ಣೆ, 14. ತಾಳೆ ಎಣ್ಣೆ, 15. ಸೂರ್ಯಕಾಂತಿ ಎಣ್ಣೆ, 16. ತೆಂಗಿನ ಎಣ್ಣೆ, 17. ಸಾಸಿವೆ ಎಣ್ಣೆ, 18. ಸಕ್ಕರೆ, 19. ಬೆಲ್ಲ, 20 ಸಕ್ಕರೆ ಪದಾರ್ಥಗಳು, 21 ಪಸ್ತ, 22. ಸ್ಪಾಗೆಟ್ಟಿ 23. ಸೇವಿಗೆ, 24. ನೂಡಲ್ಸ್ 25. ಹಣ್ಣು ಮತ್ತು ತರಕಾರಿಗಳು, 26. ಉಪ್ಪಿನಕಾಯಿ, 27. ಎಣ್ಣೆಯಲ್ಲಿ ಬೆಂದ ಸಿಹಿ ತಿನಿಸಿಗಳು, 28. ಚಟ್ನಿ, ಹಾಗೂ 29. ಸಿಹಿಮಾಂಸಗಳು.

**ದಿನಬಳಕೆ ವಸ್ತುಗಳು:** 1. ಸ್ನಾನದ ಸೋಪು, 2. ತಲೆ ಎಣ್ಣೆ, 3. ಡಿಟರ್ಜೆಂಟ್ ಪೌಡರ್, 4. ಸೋಪು, 5. ಟಿಶ್ಯೂ ಕಾಗದ, 6. ನ್ಯಾಪ್‌ಕಿನ್ಸ್, 7. ಬೆಂಕಿಕಡ್ಡಿ, 8. ಕ್ಯಾಂಡಲ್ಸ್, 9. ಕಲ್ಲಿದ್ದಲು 10. ಸೀಮೆಎಣ್ಣೆ, 11. ಗೃಹ ಬಳಕೆ ಎಲ್.ಪಿ.ಜಿ. 12. ಚಮಚ 13. ಫೋರ್ಕ್ಸ್, 14. ಲ್ಯಾಡಲ್‌ಗಳು, 15. ಸ್ಕಿಮ್ಮರ್‌ಗಳು 16. ಕೇಕ್ ಸರ್ವರ್, 17 ಮೀನಿನ ಚಾಕು 18. ಟಾಂಗ್ಸ್ 19. ಅಗರಬತ್ತಿ 20. ಟೂತ್‌ಪೇಸ್ಟ್

**ಸ್ಟೇಷನರಿ :** 1. ನೋಟ್ ಪುಸ್ತಕ 2. ಪೆನ್ನುಗಳು 3. ಎಲ್ಲಾ ರೀತಿಯ ಕಾಗದಗಳು 4. ಗ್ರಾಫ್ ಕಾಗದ 5. ಶಾಲೆ ಬ್ಯಾಗ್‌ಗಳು 6. ಎಕ್ಸರ್‌ಸೈಸ್ ಪುಸ್ತಕ 7. ಚಿತ್ರಗಳು, ಡ್ರಾಯಿಂಗ್ಸ್ ಮತ್ತು ಬಣ್ಣದ



ಪುಸ್ತಕಗಳು 8. ಪಾರ್ಚ್‌ಮೆಂಟ್ ಕಾಗದ 9. ಕಾರ್ಬನ್ ಪೇಪರ್ 10. ಪ್ರಿಂಟರ್ಸ್

**ಆರೋಗ್ಯ ಔಷಧಿ:** 1. ಇನ್ಸುಲಿನ್ 2. ವೈದ್ಯಕೀಯ ಬಳಕೆಗೆ ಎಕ್ಸ್–ರೇ ಚಿತ್ರಗಳು 3. ಡಯಾಗ್ನೋಸ್ಟಿಕ್ ಕಡ್ಡಿಗಳು 4. ಕನ್ನಡಕಗಳು 5. ಮಧುಮೇಹ, ಕ್ಯಾನ್ಸರ್ ಔಷಧಿಗಳು

**ಉಡುಪುಗಳು:** 1. ರೇಷ್ಮೆ 2. ಉಲನ್ ಬಟ್ಟೆ 3. ಖಾದಿ ಉಡುಪು 4. ಗಾಂಧಿ ಟೋಪಿ 5. ರೂ. 500/– ಗಿಂತ ಕಡಿಮೆ ಬೆಲೆಯ ಚಪ್ಪಲಿಗಳು 6. ರೂ. 1000/– ವರೆಗಿನ ಉಡುಪುಗಳು.

ಕಡಿಮೆ ಜಿ.ಎಸ್.ಟಿ. ದರವು ಹಣದುಬ್ಬರ ಇಳಿಕೆಗೆ ಕಾರಣವಾಗಬಹುದು ಎಂದು ಯಾರಾದರೂ ನಿರೀಕ್ಷಿಸಬಹುದು, ಅಲ್ಪಾವಧಿಯಲ್ಲಿ ಆರ್ಥಿಕ ಬೆಳವಣಿಗೆ ಗಣನೀಯವಾಗಿ ಬೆಳವಣಿಗೆ ಆಗದಿರಬಹುದು. ಆದರೆ ಮಧ್ಯಮಾವಧಿಯಲ್ಲಿ ಭಾರತದ ಉದ್ಯಮ ಹಾಗೂ ಸರ್ಕಾರಕ್ಕೆ ಅನುಕೂಲವಾಗುತ್ತದೆ ಎಂದು ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ.

ದಿನಬಳಕೆಯ ಬಹುತೇಕ ಸರಕುಗಳ ಮೇಲೆ ಜಿ.ಎಸ್.ಟಿ. ದರ ತುಂಬಾ ಕಡಿಮೆ ಇರುವುದರಿಂದ ಹಣದುಬ್ಬರದ ಪ್ರಮಾಣ ಕಡಿಮೆ ಆಗುತ್ತದೆ ಎಂದು ಹೆಚ್ಚಿನ ಆರ್ಥಿಕ ತಜ್ಞರು ಭವಿಷ್ಯ ನುಡಿದಿದ್ದಾರೆ. ದೇಶವು ಜಿ.ಎಸ್.ಟಿ. ವ್ಯವಸ್ಥೆಗೆ ಬಂದಿರುವುದರಿಂದ ಬಹುತೇಕ ಎಲ್ಲಾ ಉತ್ಪಾದಕ ಘಟಕಗಳು, ಕೈಗಾರಿಕೆಗಳು ತಮ್ಮ ವ್ಯವಹಾರದ ರೂಪುರೇಷೆಯನ್ನು ಪುನಾರಚಿಸಿಕೊಳ್ಳಬೇಕಾಗಿರುವುದು ಭಾರತದ ಉದ್ಯಮದಲ್ಲಿ ಬಹುದೊಡ್ಡ ಕಾರ್ಯವಾಗಿದೆ. ಈ ಪದ್ಧತಿಯಿಂದ ಹೆಚ್ಚಿನ ಸಣ್ಣ ಕಂಪನಿಗಳು ಸಹ ಜಿಎಸ್‌ಟಿಐಎನ್ ಮೂಲಕ ನೊಂದಾಯಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇದರಿಂದ ಹೆಚ್ಚಿನ ಸಂಖ್ಯೆಯ ಕಂಪನಿಗಳು ತೆರಿಗೆ ಜಾಲದೊಳಗೆ ಬರುತ್ತವೆ.

ಹಣದುಬ್ಬರ ಪ್ರಮಾಣ ಇಳಿಕೆಯಾಗಲಿದೆ ಎಂಬುದು ಬಲವಾಗಿದ್ದರೂ ಸಹ, ಭಾರತೀಯ ರಿಸರ್ವ್ ಬ್ಯಾಂಕ್‌ನ ಮುಂದಿನ ನೀತಿ ಪರಿಷ್ಕರಣೆಯಲ್ಲಿ ಇದು ಪ್ರಭಾವ ಬೀರುವುದಿಲ್ಲ ಎಂದು ಆರ್ಥಿಕ ತಜ್ಞರು ನಂಬಿದ್ದಾರೆ. ಮುಂಗಾರು ಪರಿಸ್ಥಿತಿ ಹಾಗೂ ಹೊಸ ತೆರಿಗೆ ವ್ಯವಸ್ಥೆ ಹೇಗೆ ಸಾಗುತ್ತಿದೆ ಎಂಬುದನ್ನು ಆರ್.ಬಿ.ಐ. ವಿಶ್ಲೇಷಣೆ ಮಾಡುತ್ತದೆ ಎಂದು ಇಂಡಿಯಾ ರೇಟಿಂಗ್ ಸಂಸ್ಥೆಯ ಮುಖ್ಯ ಆರ್ಥಿಕ ತಜ್ಞ ಸುನಿಲ್ ಸಿನ್ಹ ಅವರು ಹೇಳಿದ್ದಾರೆ.

ಜಿ.ಎಸ್.ಟಿ.ಯಿಂದ ಅಲ್ಪಾವಧಿಯಲ್ಲಿ ಐದು ಪ್ರಮುಖ ಪರಿಣಾಮಗಳು ಉಂಟಾಗಲಿವೆ ಎಂದು ಆರ್ಥಿಕತಜ್ಞರು ಹಾಗೂ ಕೈಗಾರಿಕಾ ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ:

ಉದ್ಯಮಗಳ ಅಸ್ತಿತ್ವ ಹಾಗೂ ಅವುಗಳ ಕಾರ್ಯಾಚರಣೆಯಲ್ಲಿ ಏರಿಳಿತ ಉಂಟಾಗಲಿದೆ.

ಹೇಗೆ? ಹೊಸ ತೆರಿಗೆ ಪದ್ಧತಿಯು ಹಲವಾರು ಕಂಪನಿಗಳಿಗೆ ತಮ್ಮ ಕಾರ್ಯಾಚರಣೆ ಶೈಲಿಯನ್ನು ಮನಾರಚಿಸುವಂತೆ ಒತ್ತಡ ಉಂಟು ಮಾಡುವುದರಿಂದ ಕಂಪನಿಗಳು ವರ್ತಕರಿಗೆ ಹಾಗೂ ಸರಬರಾಜುದಾರರಿಗೆ ಇನ್‌ವಾಯಿಸ್ ಸರಕು ಪಟ್ಟಿ ನೀಡುವಂತೆ ಒತ್ತಾಯಿಸುತ್ತವೆ. ಏಕೆಂದರೆ ಜಿ.ಎಸ್.ಟಿ. ತೆರಿಗೆಯಿಂದ ಉದ್ಯಮಗಳು ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲವಲ್ಲ. ದೊಡ್ಡ ಕಂಪನಿಗಳಿಗೆ ಪೂರೈಕೆದಾರರ ಸರಪಳಿ ಸಮರ್ಪಕವಾಗಿ ಇರುವುದರಿಂದ ಅವು ತಮ್ಮ ಲಾಭವನ್ನು ಸರಿಯಾಗಿ ನಿರ್ವಹಿಸಿಕೊಳ್ಳುತ್ತವೆ. ಈ ಕಂಪನಿಗಳಿಗೆ ಬರುವ ಆದಾಯದಿಂದ ಅವು ಮಾಡಿದ ತೆರಿಗೆ ಪಾವತಿಯನ್ನು ಸರಿದೂಗಿಸಿಕೊಳ್ಳಬಲ್ಲವು. ಅನುಸರಣ ವೆಚ್ಚ ಹೆಚ್ಚಾಗುವುದರಿಂದ ಸಣ್ಣ ಉದ್ಯಮಗಳಿಗೆ ಹೊಡೆತ ಬೀಳಬಹುದು. ಅಬಕಾರಿ ಶುಲ್ಕ ವಿನಾಯಿತಿಗೊಂಡಿರುವ ವಲಯಗಳಲ್ಲಿ ಉತ್ಪಾದನಾ ಘಟಕಗಳ ಅಸ್ತಿತ್ವದ ಮೇಲೆ ಕಂಪನಿಗಳ ಮೇಲೆ ಬೀರಬಹುದಾದ ಪರಿಣಾಮದಲ್ಲಿ ವ್ಯತ್ಯಾಸವಾಗುತ್ತದೆ. ಪೂರೈಕೆ ಸರಪಳಿ ಜಾಲದಲ್ಲಿ ಜಿ.ಎಸ್.ಟಿ.

ಅನುಷ್ಠಾನದಿಂದ ವೆಚ್ಚ ಕಡಿಮೆಯಾಗಬೇಕು, ಅಸಂಘಟಿತದಿಂದ ಸಂಘಟಿತ ವ್ಯಾಪಾರಕ್ಕೆ ಬದಲಾಗುವುದನ್ನು ಚುರುಕುಗೊಳಿಸಬೇಕು ಎಂಬ ವಿದೇಶದ ದಳ್ಳಾಳಿ ಉದ್ಯಮದ ಶ್ರೀ ಜೆಫರಿ ಹೇಳಿಕೆಯನ್ನು ಮಾಧ್ಯಮಗಳು ವರದಿ ಮಾಡಿವೆ.

**ಕಡಿಮೆ ತೆರಿಗೆಯ ಲಾಭವನ್ನು ಸಾರ್ವಜನಿಕರಿಗೆ ದಾಟಿಸುವುದು ಹೇಗೆ?**

ಹಣಕಾಸು ಸಚಿವರು ಅಧ್ಯಕ್ಷರಾಗಿರುವ ಜಿ.ಎಸ್.ಟಿ. ಕೌನ್ಸಿಲ್ ವಿವಿಧ ಕಂಪನಿಗಳ ಮೇಲೆ ನಿಗಾವಹಿಸುತ್ತಿರಬೇಕು ಎಂಬ ನಿರೀಕ್ಷೆ ಇದೆ. ಕಂಪನಿಗಳು ಕಡಿಮೆ ದರದ ತೆರಿಗೆಯ ಲಾಭವನ್ನು ಗ್ರಾಹಕರಿಗೆ ದಾಟಿಸುತ್ತಿವೆಯೇ ಎಂಬುದರ ಬಗ್ಗೆ ಕೌನ್ಸಿಲ್ ನಿಗಾ ಇಡಬೇಕಾಗುತ್ತದೆ. ಈ ಬಗ್ಗೆ ಪರಿಣಿತರಲ್ಲಿ ಭಿನ್ನಾಭಿಪ್ರಾಯವಿದೆ.

"ಉದ್ಯಮಗಳು ಜಿ.ಎಸ್.ಟಿ.ಯ ಪ್ರತ್ಯಕ್ಷ ಲಾಭವನ್ನು ಗ್ರಾಹಕರಿಗೆ ದಾಟಿಸಬೇಕು (ಕಡಿಮೆ ದರದ ತೆರಿಗೆಯಂತಹವನ್ನು) ಪರೋಕ್ಷ ಲಾಭದ ಭಾಗಶಃ ಪ್ರಮಾಣವನ್ನು (ಪೂರ್ಣಪ್ರಮಾಣವಲ್ಲ) ಉಳಿಸಿಕೊಳ್ಳಲು ಗುರಿಹೊಂದಬೇಕು. ಸಾಗಣೆ ವೆಚ್ಚದಲ್ಲಿ ಉಳಿತಾಯ ಮಾಡಿ, ವ್ಯವಹಾರ ಪ್ರಕ್ರಿಯೆಯನ್ನು ಸುಗಮಗೊಳಿಸಿ, ಆದಾಯದ ಹರಿವನ್ನು ಹೆಚ್ಚಿಸಿಕೊಳ್ಳುವ ಮೂಲಕ ಪರೋಕ್ಷ ಲಾಭವನ್ನು ಕಾಣಬೇಕು" ಎಂದು ಹಣಕಾಸು ಸೇವಾ ಸಂಸ್ಥೆ ನೊಮುರಾ ಹೇಳಿದೆ. ಲಾಭ ರಹಿತ ಕ್ರಮಗಳ ಬಗ್ಗೆ ಜಿಎಸ್‌ಟಿ ಕಾನೂನು ಗಮನ ಹರಿಸಿದ್ದಾಗ್ಯೂ ತೆರಿಗೆ ದರದಲ್ಲಿ ಇಳಿಕೆಯ ಲಾಭಗಳು ಮತ್ತು ಆದಾಯಗಳನ್ನು ಬೆಲೆ ಇಳಿಸುವ ಮೂಲಕ ವರ್ಗಾಯಿಸಬೇಕು. ಇಂತಹ ಕ್ರಮಗಳನ್ನು ಅನುಷ್ಠಾನ ಮಾಡುವುದು ಕಷ್ಟವಾಗಿದ್ದು, ಅವಸರದಲ್ಲಿ ಜಾರಿಗೊಳಿಸಿದರೆ ಹಿಂದಡಿ ಇಟ್ಟಂತೆ ಆಗುತ್ತದೆ. ಇದು ಬೆಲೆ ನಿಯಂತ್ರಣಕ್ಕೆ ಸಮಾನ ಎಂದು ನೊಮುರ ವಾದಿಸಿದೆ.



ಜಿ.ಎಸ್.ಟಿ. ವ್ಯಾಪ್ತಿಯಿಂದ ಹೊರಗುಳಿದವುಗಳಿಂದ ಕಂಪನಿಗಳಿಗೆ ಆಗುವ ಉಳಿತಾಯವನ್ನು ಕಂಪನಿಗಳು ಬಳಸಿಕೊಂಡು ಸ್ವಲ್ಪ ಮಟ್ಟಿಗೆ ಲಾಭ ಸುಧಾರಿಸಿಕೊಂಡು, ಹೊಸ ಸಾಮರ್ಥ್ಯ ನಿರ್ಮಾಣಕ್ಕೆ ಹೂಡಿಕೆ ಮಾಡಬಹುದು ಎಂದು ಆ ಸಂಸ್ಥೆ ಪ್ರತಿಪಾದಿಸಿದೆ.

ಸರ್ಕಾರದ ಈ ಮಹತ್ವಾಕಾಂಕ್ಷಿ ಸುಧಾರಣೆಯ ನಿಜವಾದ ಪರಿಣಾಮ ತಿಳಿಯುವುದು ಈ ಯೋಜನೆಯ ಒಂದು ವರ್ಷದ ಅನುಷ್ಠಾನದ ನಂತರವೇ ಎಂದು ಬಹುತೇಕ ತೆರಿಗೆ ಪರಿಣಿತರು ಭಾವಿಸಿದ್ದಾರೆ. ಆದರೆ ಇದರ ತಕ್ಷಣದ ಪರಿಣಾಮವೆಂದರೆ ಹಲವು ಸಂದರ್ಭದಲ್ಲಿ ನಿಮ್ಮ ಜೇಬು ಭಾರವಾಗುತ್ತದೆ. ಇತರರಿಗೆ ವ್ಯಾಪಾರ ಸರಾಗವಾಗುತ್ತದೆ.

ಸರ್ಕಾರಕ್ಕೆ ಆದಾಯ ತರುವ ವಿಚಾರದಲ್ಲಿ ಏನು ಪರಿಣಾಮ ಆಗಬಹುದು ಎಂಬುದನ್ನು ಕಾದುನೋಡಬೇಕಾಗಿದೆ. ಬ್ಯಾಂಕಿಂಗ್ ಸೇವೆ, ಟೆಲಿಕಾಂ ಸೇವೆ ದುಬಾರಿಯಾಗಲಿವೆ. ಫ್ಲಾಟ್ ಖರೀದಿ, ಸಿದ್ಧ ಉಡುಪುಗಳು, ಮಾಸಿಕ ಮೊಬೈಲ್ ಬಿಲ್ಲು, ಕೂಡ ಹೆಚ್ಚಾಗಲಿವೆ. ಪ್ರಸ್ತುತ ಫ್ಲಾಟ್ ಮತ್ತು ಅಂಗಡಿ ಖರೀದಿಗೆ ಪ್ರಸ್ತುತ ಸುಮಾರು ಶೇ. 6 ರಷ್ಟು ತೆರಿಗೆ ಇತ್ತು. ಜಿ.ಎಸ್.ಟಿ.ನಲ್ಲಿ ಇದು ಶೇ. 12ಕ್ಕೆ ಏರಿಕೆಯಾಗಿದೆ. 23ಕ್ಕೂ ಹೆಚ್ಚು ರಾಜ್ಯಗಳು ತಮ್ಮ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸಿದ್ದರಿಂದ ವಿದೇಶಿ ವ್ಯಾಪಾರಸ್ಥರು ತಮ್ಮ ಉತ್ಪನ್ನಗಳನ್ನು ಸರಾಗವಾಗಿ ಸಾಗಣೆ ಮಾಡಲು ಅನುಕೂಲವಾಗಿದ್ದು, ಅವರು ಜಿ.ಎಸ್.ಟಿ.ಯನ್ನು ಸ್ವಾಗಸಿದ್ದಾರೆ.

ಕಮಾಡಿಟೀಸ್ ಟ್ರೇಡಿಂಗ್ ಗುರು ಹಾಗೂ ಬೇಲಿ ನಿಧಿ ವ್ಯವಸ್ಥಾಪಕ ಜಿಮ್ ರೋಜರ್ಸ್ ಅವರು ಹಿಂದೆ 2015ರಲ್ಲಿ ತಮ್ಮ ಷೇರುಗಳನ್ನು ಭಾರತೀಯ ಕಂಪನಿಗಳಿಗೆ ಮಾರಿಬಿಟ್ಟಿದ್ದರು. ಅದಕ್ಕೆ ಅವರು ನೀಡಿದ್ದ ಕಾರಣವೆಂದರೆ ಸರ್ಕಾರ ಆಗ ಹೂಡಿಕೆದಾರರ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂಬುದು. ಈಗ ಜಿಮ್ ರೋಜರ್ಸ್ ಅವರು ಭಾರತಕ್ಕೆ ಮರು ಪ್ರವೇಶ ಮಾಡುವ ಇಂಗಿತ ವ್ಯಕ್ತಪಡಿಸಿದ್ದಾರೆ. ಭಾರತೀಯ ಮಾರುಕಟ್ಟೆಗಳು ಸುಸ್ಥಿರ ದಾಖಲೆಯ ನಡಿಗೆ ಪ್ರದರ್ಶಿಸಿರುವುದರಿಂದ ರೋಜರ್ಸ್ ಅವರು ಭಾರತದ ಬಸ್ ಮಿಸ್ ಮಾಡಿಕೊಂಡನೇನೊ ಎನಿಸುತ್ತಿದೆ. "ಜಿ.ಎಸ್.ಟಿ. ನನಗೆ ಅಚ್ಚರಿ, ದಿಗ್ಭ್ರಮೆ ಉಂಟು ಮಾಡಿದೆ" ಎಂದಿದ್ದಾರೆ.

ಜಿಎಸ್‌ಟಿ ತೆರಿಗೆ ಚೋರರ ಮೇಲೆ ನಡೆದ ಎರಡನೇ ಸರ್ಜಿಕಲ್ ದಾಳಿಯಾಗಿದೆ. ಬಹುತೇಕ ವ್ಯಾಪಾರಿಗಳನ್ನು ತೆರಿಗೆ ಜಾಲಕ್ಕೆ ತಂದು ನಿಲ್ಲಿಸಿದೆ. ಸರಕು ಸಾಮಗ್ರಿಗಳು ದೇಶಾದ್ಯಂತ ಸರಾಗವಾಗಿ ಸಾಗಣೆಯಾಗುವಂತೆ ಮಾಡಿದೆ.

ನಾಗರಿಕರು ಹೆಚ್ಚಿನ ಬೆಲೆ ತೆರಬೇಕಾದ ಸನ್ನಿವೇಶವಿದ್ದಾಗ್ಯೂ ಸಹ ಏಕರೂಪದ ತೆರಿಗೆ ಮತ್ತು ಮಾರುಕಟ್ಟೆ ವ್ಯವಸ್ಥೆಯ ಫಲವಾಗಿ ವಿದೇಶಿ ಹೂಡಿಕೆದಾರರನ್ನು ಸೆಳೆಯುತ್ತಿದೆ. ಶೇ. 81ರಷ್ಟು ಸರಕು ಸಾಮಗ್ರಿಗಳ ಮೇಲೆ ಜಿ.ಎಸ್.ಟಿ. ದರ ಕಡಿಮೆ ಮಾಡುವ ನಿರೀಕ್ಷೆ ಇದೆ. ಹೊಸ ತೆರಿಗೆ ಪದ್ಧತಿಗೆ ದೇಶ ಬದಲಾದ್ದರಿಂದ ದೀರ್ಘಾವಧಿಯಲ್ಲಿ ಲಾಭಸಿಗಲಿದೆ. ಅಲ್ಪಾವಧಿಯಲ್ಲಿ ಸ್ವಲ್ಪ ತೊಂದರೆಯಾಗಿದೆ. ಆದರೆ ಇದು ಸಹಜ. ❑



**ಯೋಜನಾ ಓದುಗರಿಗೆ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು**



# ಗ್ರಾಹಕರಿಗೆ ಲಾಭ ವರ್ಗಾವಣೆ – ಜಿಎಸ್‌ಟಿ ಜಾರಿ ಸವಾಲು

* ಗಿರೀಶ್ ಚಂದ್ರ ಪ್ರಸಾದ್



ವ್ಯಾಪಾರಿಗಳು ಮತ್ತು ಉದ್ದಿಮೆದಾರರು ತೆರಿಗೆ ಕಡಿತ ಲಾಭವನ್ನು ಗ್ರಾಹಕರಿಗೆ ನೀಡುವ ಬದಲು ತಾವೇ ಉಳಿಸಿಕೊಳ್ಳುವ ಸಾಧ್ಯತೆಯನ್ನು ತಡೆಯಲು ಜಿಎಸ್‌ಟಿಯಲ್ಲಿ ಲಾಭಕೋರತನ ತಡೆ ಅಂಶ ಸೇರಿಸುವ ವಿಚಾರವು ಪ್ರಾಧಾನ್ಯತೆ ಪಡೆಯಿತು.

ಹದಿನೇಳು ಕೇಂದ್ರ ಹಾಗೂ ರಾಜ್ಯ ತೆರಿಗೆಗಳನ್ನು ತೆಗೆದುಹಾಕಿ ಸರಕು ಮತ್ತು ಸೇವಾ ತೆರಿಗೆಗೆ ಭಾರತವು ವರ್ಗಾವಣೆಯಾಗಿರುವುದು ಮತ್ತು 2.3 ಸಹಸ್ರ ಕೋಟಿ ಡಾಲರ್‌ನ ಒಂದೇ ಮಾರುಕಟ್ಟೆಯನ್ನುರೂಪಿಸಲು ರಾಜ್ಯಗಳಲ್ಲಿನ ತಡೆಗಳನ್ನು ತೊಡೆದುಹಾಕಿರುವುದು ಖಚಿತವಾಗಿ ವ್ಯಾಪಾರಿಗಳಿಗೆ ಹಾಗೂ ಹೂಡಿಕೆದಾರರಿಗೆ ಅವರ ವ್ಯವಹಾರ ಸುಗಮವಾಗುವಂತೆ ಮಾಡುತ್ತದೆ.

ಆದರೆ ಸರಕುಗಳು ಮತ್ತು ಸೇವೆಗಳ ತೆರಿಗೆಗಳ ಮೇಲೆ ಈ ಹೊಸ ಪರೋಕ್ಷ ತೆರಿಗೆ ನಿಯಮದಿಂದ ಒದಗುವ ಕಡಿಮೆ ತೆರಿಗೆಯ ಪ್ರಯೋಜನವನ್ನು ಗ್ರಾಹಕರು ಪಡೆಯುವಂತೆ ಮಾಡುವುದು ನೀತಿ ನಿರೂಪಕರ ಅತಿ ದೊಡ್ಡ ಸಮಸ್ಯೆಯಾಗಿದೆ. ಈ ಪ್ರಯೋಜನವನ್ನು ವ್ಯಾಪಾರಿಗಳು ಮತ್ತು ಉದ್ದಿಮೆದಾರರು ಗ್ರಾಹಕರಿಗೆ ವರ್ಗಾಯಿಸುವಂತೆ ಖಚಿತಪಡಿಸಲು ಲಾಭಕೋರತನ ವಿರೋಧಿ ಪ್ರಾಧಿಕಾರದ ಪ್ರಾರಂಭ, ವ್ಯಾಪಾರಿಗಳು ಹಾಗೂ ಗ್ರಾಹಕರ ನಡುವೆ ತಿಳಿವಳಿಕೆಯನ್ನು ಉಂಟುಮಾಡುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಲೇಶಿಯಾ ಮತ್ತು ಆಸ್ಟ್ರೇಲಿಯಾಗಳಂತಹ ದೇಶಗಳು ಜಿಎಸ್‌ಟಿಗೆ ವರ್ಗಾವಣೆಯಾದಾಗ ವರದಿಯಾದ ಲಾಭಕೋರತನದ ಪ್ರಕರಣಗಳನ್ನು ಪರಿಗಣಿಸಿದರೆ ಇದು ಬಹಳಷ್ಟು ಗಮನಾರ್ಹ ಅಂಶವಾಗಿದೆ. ಈ ಹಿಂದೆ ಇದ್ದ ಪ್ರಯಾಸಕರ ಮತ್ತು ಅಪಾರದರ್ಶಕವಾದ ಪರೋಕ್ಷ ತೆರಿಗೆ ವ್ಯವಸ್ಥೆಯ ಬದಲು, ಇಂದಿನ ಜಿಎಸ್‌ಟಿ ಪಾರದರ್ಶಕವಾಗಿದೆ. ಇದು ಸರಕು ಅಥವಾ ಸೇವೆಯ ನೈಜ ತೆರಿಗೆಯನ್ನು ಕೊನೆ ಹಂತದ ಗ್ರಾಹಕರಿಗೆ ತಿಳಿಯಪಡಿಸುತ್ತದೆ. ಹಿಂದಿನ ವ್ಯವಸ್ಥೆಯಲ್ಲಿ ಚಿಲ್ಲರೆ ವ್ಯಾಪಾರ ಮಟ್ಟದಲ್ಲಿ ರಾಜ್ಯಗಳು ಹೇರಿರುವ ಮೌಲ್ಯಾಧಾರಿತ ತೆರಿಗೆ ಅಥವಾ ಕೇಂದ್ರ ಸರ್ಕಾರವು ವಿಧಿಸಿರುವ ಸೇವಾ ತೆರಿಗೆಗಳನ್ನು ವ್ಯಾಟ್ ಅನ್ನು ಮಾತ್ರ ಗ್ರಾಹಕರು ಕಾಣಬಹುದಿತ್ತೇ ವಿನಃ ಪದಾರ್ಥ ಅಥವಾ ಸೇವೆಗಳಿಗಾಗಿ ಉತ್ಪಾದನೆ ಅಥವಾ ಪೂರೈಕೆಗಳ ಹಿಂದಿನ ಹಂತಗಳಲ್ಲಿ ಸೇರಿಕೊಂಡಿದ್ದ ತೆರಿಗೆಗಳನ್ನಲ್ಲ. ಉದಾಹರಣೆಗೆ, ಫ್ಯಾಕ್ಟರಿ ಮಟ್ಟದಲ್ಲಿ ವಿಧಿಸಲಾಗುತ್ತಿದ್ದ ಅಬಕಾರಿ ಸುಂಕ ಅಥವಾ ಬಳಸುವ ಉಪಕರಣದ ಮೇಲೆ ಒಂದು ಟೆಲಿಕಾಂ ಕಂಪನಿಯು ನೀಡುತ್ತಿದ್ದ ತೆರಿಗೆಗಳು. ವ್ಯಾಪಾರಿಗಳು ತಮ್ಮ ಗ್ರಾಹಕರನ್ನು ದಿಕ್ಕುತಪ್ಪಿಸಿ ಹೆಚ್ಚಿದ ಪಾರದರ್ಶಕತೆ ಕಾರಣ ನೀಡಿ ಅದನ್ನು ದುರುಪಯೋಗ ಪಡಿಸಿಕೊಂಡು ಹೆಚ್ಚಿನ ದರ ಹೇರುವುದನ್ನು ಪ್ರಾಧಿಕಾರಗಳು ಬಯಸುವುದಿಲ್ಲ.

ಪೂರೈಕೆ ಸರಣಿಯ ಹಿಂದಿನ ಹಂತಗಳಲ್ಲಿ ಪಾವತಿಸಿದ ತೆರಿಗೆಗಳಿಗೆ ಸಂಪಾದಿಸಿದ ಪ್ರಯೋಜನ (ಕ್ರೆಡಿಟ್)ಗಳನ್ನು ಬಳಸಿ, ಹಿಂದಿನ ತೆರಿಗೆ ವ್ಯವಸ್ಥೆಯಲ್ಲಿ ಅನುಮತಿಸಿದಕ್ಕಿಂತ ಹೆಚ್ಚಾಗಿ ತಮ್ಮ ಸರಕು ಮತ್ತು ಸೇವೆಗಳಿಗೆ ತೆರಿಗೆ ಬಾಧ್ಯತೆಯನ್ನು ಹೊಂದಲು ಕೂಡ ವ್ಯಾಪಾರ ಸಂಸ್ಥೆಗಳಿಗೆ ಜಿಎಸ್‌ಟಿಯು ಅನುವು ಮಾಡುತ್ತದೆ. ಹೀಗಾಗಿ ಟೆಲಿಕಾಂ ಸೇವೆ ಒದಗಿಸುವವರು ತಮ್ಮ ವ್ಯಾಪಾರದಲ್ಲಿ ಬಳಸಿದ ಉಪಕರಣಗಳ ಮೇಲೆ ಪಾವತಿಸಿದ ತೆರಿಗೆ ಕ್ರೆಡಿಟ್‌ಗಳನ್ನು ತಮ್ಮ ಗ್ರಾಹಕರಿಗೆ ಒದಗಿಸುವ ಸೇವೆಯಲ್ಲಿ ಜಿಎಸ್‌ಟಿಯ ಒಂದು ಭಾಗಾಂಶವನ್ನು

* ಪತ್ರಕರ್ತರು. E-mail : gureeshchandraprasad@gmail.com



ಕೈಬಿಡಲು ಬಳಸಬಹುದು. ಹಿಂದಿನ ವ್ಯವಸ್ಥೆಯಲ್ಲಿ ನಿರ್ದಿಷ್ಟೀಕರಿಸಿದಕ್ಕಿಂತಲೂ ಈಗಿನ ಜಿಎಸ್‌ಟಿ ದರವು ಹೆಚ್ಚಿದ್ದರೂ ಇದು ಸರಕು ಅಥವಾ ಸೇವೆಯ ಮೇಲಿನ ನೈಜ ತೆರಿಗೆ ಹೊರೆಯನ್ನು ತಗ್ಗಿಸುತ್ತದೆ.

ಜೂನ್ 11ರಂದು ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿಯವರು ತಿಳಿಸಿದಂತೆ ಹಲವಾರು ಸರಕು ಪದಾರ್ಥಗಳಲ್ಲಿ ತೆರಿಗೆ ಹೊರೆಯನ್ನು ತಗ್ಗಿಸುವುದಕ್ಕಾಗಿ ಹಿಂದಿನ ವ್ಯವಸ್ಥೆಯಲ್ಲಿ ಅವುಗಳಿಗೆ ಅನ್ವಯಿಸುವ ತೆರಿಗೆಗಿಂತ ಕಡಿಮೆ ತೆರಿಗೆಯನ್ನು ವಿಧಿಸುವ ನಿಲುವನ್ನು ಕೌನ್ಸಿಲ್ ಹೊಂದಿತು. ಇದನ್ನು ಬದಲಾಗುತ್ತಿರುವ ಸೇವನಾ ವಿನ್ಯಾಸ ಮತ್ತು ಆರ್ಥಿಕ ವಾಸ್ತವಗಳನ್ನು ಪರಿಗಣಿಸಿ ರೂಪಿಸಲಾಯಿತು. ಮೇ ತಿಂಗಳು ಶ್ರೀನಗರದಲ್ಲಿ ಸೇರಿದ ಸಭೆಯಲ್ಲಿ ಕೌನ್ಸಿಲ್ 66 ಪದಾರ್ಥಗಳ ಜಿಎಸ್‌ಟಿ ದರವನ್ನು ತಗ್ಗಿಸಿತು. ತೆರಿಗೆ ಕಡಿತದ ಪ್ರಯೋಜನ ಗ್ರಾಹಕರಿಗೆ ತಲುಪಬೇಕು ಎನ್ನುವುದು ಸರ್ಕಾರದ ಉದ್ದೇಶ. ವ್ಯಾಪಾರಿಗಳು ಮತ್ತು ಉದ್ದಿಮೆದಾರರು ತೆರಿಗೆ ಕಡಿತ ಲಾಭವನ್ನು ಗ್ರಾಹಕರಿಗೆ ನೀಡುವ ಬದಲು ತಾವೇ ಉಳಿಸಿಕೊಳ್ಳುವ ಸಾಧ್ಯತೆಯನ್ನು ತಡೆಯಲು ಜಿಎಸ್‌ಟಿ ವಿಧೇಯಕದಲ್ಲಿ ಲಾಭಕೋರತನ ತಡೆ ಅವಕಾಶವನ್ನು ಸೇರಿಸುವ ವಿಚಾರವು ಪ್ರಾಧಾನ್ಯತೆ ಪಡೆಯಿತು.

ಕೇಂದ್ರ ಜಿಎಸ್‌ಟಿ ಕಾಯ್ದೆಯು "ತೆರಿಗೆ ಸಾಲ ಪ್ರಯೋಜನ(ಕ್ರೆಡಿಟ್) ಅಥವಾ ಯಾವುದೇ ಸರಕುಗಳು ಅಥವಾ ಸೇವೆಗಳ ತೆರಿಗೆ ದರದಲ್ಲಿ ಕಡಿತವಾದರೆ ಅದರಂತೆ ಬೆಲೆ ಕಡಿತದ ಮೂಲಕ ಆ ಪ್ರಯೋಜನವನ್ನು ಸ್ವೀಕೃತರಿಗೆ ವರ್ಗಾಯಿಸತಕ್ಕದ್ದು" ಎಂದು ನಿರ್ದಿಷ್ಟೀಕರಿಸುತ್ತದೆ.

ಈ ನಿಯಮವನ್ನು ವಿಧಿಸುವ ಸಲುವಾಗಿ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಪ್ರಸ್ತಾಪಿತ ಲಾಭಕೋರತೆ ವಿರೋಧಿ ಪ್ರಾಧಿಕಾರವು ಲಾಭಕೋರತನದ ಸಂದೇಹಾಸ್ಪದ ಪ್ರಕರಣಗಳನ್ನು ವಿವರವಾದ ತನಿಖೆಗಾಗಿ ಕೇಂದ್ರ ಅಬಕಾರಿ ಮತ್ತು ಸುಂಕಗಳ ಮಂಡಲಿಯ ಅಡಿಯಲ್ಲಿ ರಚಿಸಲಾದ ಸುರಕ್ಷತೆಗಳ ಸಮಿತಿಯ ಮಹಾ ನಿರ್ದೇಶಕರಿಗೆ ಕಳುಹಿಸಿಕೊಡುತ್ತದೆ.

ಪ್ರಾಧಿಕಾರವು ಜಿಎಸ್‌ಟಿ ವ್ಯವಸ್ಥೆಯಲ್ಲಿ ಕಡಿಮೆಯಾಗಿರುವ ತೆರಿಗೆ ಪ್ರಯೋಜನವನ್ನು ಸರಕುಗಳು ಅಥವಾ ಸೇವೆಗಳ ಪೂರೈಕೆದಾರರು ನೀಡದ ತಮ್ಮ ಗ್ರಾಹಕರಿಗೆ ಪಕ್ಷದಲ್ಲಿ ಅವರಿಗೆ ಬೆಲೆಗಳನ್ನು ತಗ್ಗಿಸಲು ಅಥವಾ ಖರೀದಿಗಾರರಿಗೆ ನೀಡದ ತೆರಿಗೆಗೆ ಸಮವಾದ ಮೊತ್ತವನ್ನು ವಾಪಸ್ಸು ಮಾಡಲು ಆದೇಶ ಹೊರಡಿಸಬಹುದು.

ಲಾಭಕೋರತನಕ್ಕೆ ದಂಡ ವಿಧಿಸಬಹುದು ಮತ್ತು ವ್ಯಾಪಾರ ಸಂಸ್ಥೆಯು ತನ್ನ ನೊಂದಣಿಯನ್ನು ಕಳೆದುಕೊಳ್ಳುವ ಸಾಧ್ಯತೆ ಕೂಡ ಉಂಟು.

ಈ ನಿಯಮವು ಕಠಿಣವಾಗಿದೆಯೆಂದು ಕಾಣಬಹುದು. ಇಲ್ಲಿ ಸರ್ಕಾರದ ಉದ್ದೇಶ ಪರಿಣಾಮಕಾರಿಯಾಗಿ ತಡೆಯನ್ನು ಒಡ್ಡುವುದಾಗಿದೆ. ಇದನ್ನು ಸರ್ಕಾರವು ಒಂದು ಉದ್ದಿಮೆ ಅಥವಾ ಪದಾರ್ಥದ ದೊಡ್ಡ ಮಟ್ಟದ ಲಾಭಕೋರತನದಲ್ಲಿ ಮಾತ್ರ ಬಳಸುತ್ತದೆ. ಇದು ಮುಕ್ತ ಮಾರುಕಟ್ಟೆ ಆರ್ಥಿಕತೆಯಲ್ಲಿ ದರಗಳ ಸೂಕ್ಷ್ಮನಿರ್ವಹಣೆಯ ಒಳ ಹೊಕ್ಕುವುದಿಲ್ಲ. ಇದಲ್ಲದೆ ಹೊಸ ಪರೋಕ್ಷ ತೆರಿಗೆ ವ್ಯವಸ್ಥೆಗೆ ಪರಿವರ್ತನೆಯಾಗುವ ಅವಧಿಯವರೆಗೆ ಮಾತ್ರ ಈ ಲಾಭಕೋರತನ ವಿರೋಧಿ ನಿಯಮವು ಜಾರಿಯಲ್ಲಿರುತ್ತದೆ.

ಇಲ್ಲಿಯವರೆಗೆ ಹೊಸ ವ್ಯವಸ್ಥೆಗೆ ಪರಿವರ್ತನೆಯು ಸಲೀಸಾಗಿ ನಡೆದಿದೆ ಮತ್ತು ತಮ್ಮ ಪ್ರಯೋಜನಗಳನ್ನು /ಲಾಭಗಳನ್ನು ವ್ಯಾಪಾರಸಂಸ್ಥೆಗಳು ತಮ್ಮ ಗ್ರಾಹಕರಿಗೆ ಹಸ್ತಾಂತರಿಸಿವೆ. ಜಿಎಸ್‌ಟಿ ಅನುಷ್ಠಾನ ಘೋಷಿಸಿದ ಸಮಯದಿಂದಲೇ ಕೆಲವು ಕಂಪನಿಗಳು ಇದನ್ನು ಕಾರ್ಯಗತ ಮಾಡಿವೆ.

ಜಿಎಸ್‌ಟಿ ಅನುಷ್ಠಾನಕ್ಕೆ ಬಂದ ಶನಿವಾರದ ಮಧ್ಯರಾತ್ರಿಯ ಮರುದಿನವೇ ತನ್ನ ಭಾರತದ ಗ್ರಾಹಕರಿಗಾಗಿ ಆ್ಯಪಲ್ ಸಂಸ್ಥೆಯು ಐಫೋನುಗಳು, ಐಪ್ಯಾಡುಗಳು, ಮ್ಯಾಕ್ ಮತ್ತು ಆ್ಯಪಲ್



ವಾಚ್ ಮಾಡೆಲುಗಳ ದರವನ್ನು ತಗ್ಗಿಸಿತು. ಶೀಘ್ರವಾಗಿ ಮಾರಾಟವಾಗುವ ಸಾಧನಗಳನ್ನು ಹೊಂದಿರುವ ಸರಕು ಕಂಪನಿ ಹಿಂದೂಸ್ಥಾನ್ ಯುನಿಲಿವರ್ ಲಿಮಿಟೆಡ್ ತನ್ನ ಕೆಲವು ಡಿಟರ್ಜೆಂಟುಗಳು ಮತ್ತು ಸೋಪುಗಳ ದರವನ್ನು ತಗ್ಗಿಸಿತು. ದ್ವಿಚಕ್ರವಾಹನ ತಯಾರಕ ಹೀರೊ ಮೊಟೊಕಾರ್ಪ್ ಲಿಮಿಟೆಡ್ ತನ್ನ ಮಾಡೆಲುಗಳ ದರವನ್ನು ರೂ 400 ರಿಂದ 1800ರೂವರೆಗೆ ತಗ್ಗಿಸಿತು.

ಜನರ ಪಾವತಿಸುವ ಸಾಮರ್ಥ್ಯ ಆಧರಿತವಾಗಿರುವ ಆದಾಯ ತೆರಿಗೆಗಳಂತಿರದೆ, ಪರೋಕ್ಷ ತೆರಿಗೆಗಳು ಶ್ರೀಮಂತರು ಮತ್ತು ಬಡವರಿಗೆ ಒಂದೇ ತೆರವಾಗಿ ಅನ್ವಯಿಸುತ್ತದೆಂಬ ಅಂಶವನ್ನು ಪರಿಗಣಿಸಿದರೆ, ಗ್ರಾಹಕರಿಗೆ ಪ್ರಯೋಜನವಾಗಬೇಕೆಂಬ ದೃಷ್ಟಿಯಿಂದ ಸರಕುಗಳು ಮತ್ತು ಸೇವೆಗಳ ತೆರಿಗೆ ಹೊರೆಯನ್ನು ಕಡಿಮೆ ಮಾಡುವುದನ್ನು ಖಚಿತಗೊಳಿಸುವುದು ಕೂಡ ಮುಖ್ಯ. ಏಕೆಂದರೆ ಆದಾಯ ತೆರಿಗೆಗಳ ದರಗಳು ಆದಾಯ ಹೆಚ್ಚಿದಂತೆ ಏರುತ್ತವೆ.

ಬೆಲೆಗಳನ್ನು ಕಡಿಮೆ ಮಾಡುವ ಕೌನ್ಸಿಲಿನ ಆಕಾಂಕ್ಷೆಯ ಫಲವೇ ಲಾಭಕೋರತನ ವಿರೋಧಿ ಕ್ರಮಗಳು. ಹೀಗಾಗಿ ಈ ತಗ್ಗಿದ ತೆರಿಗೆ ಹೊರೆಯು ಚಿಲ್ಲರೆ ವ್ಯಾಪಾರದ ಹಣದುಬ್ಬರವನ್ನು ತಗ್ಗಿಸುವುದು. ತನ್ಮೂಲಕ ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚುವುದು ಮತ್ತು ಬೆಲೆಗಳು ಏರುಪೇರಾಗುವುದನ್ನು ತಡೆಯುವ ಸುಧಾರಣೆ ಉಂಟಾಗುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ತೆರಿಗೆ ಆದಾಯವು ತಮ್ಮ ಕಲ್ಯಾಣ ಯೋಜನೆಗಳಿಗೆ ಮತ್ತು ಮೂಲಭೂತರಚನೆಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಲು ನೆರವಾಗುತ್ತವೆ.

ಬಹಳ ಮಟ್ಟಿಗೆ, ಯಾವ ಸಂಸ್ಥೆಯೂ ತನ್ನ ಮಾರುಕಟ್ಟೆ ಪಾಲನ್ನು

ಕಳೆದುಕೊಳ್ಳಲು ಇಷ್ಟಪಡದಿರುವುದರಿಂದ ಗ್ರಾಹಕರಿಗೆ ತಮ್ಮ ಲಾಭದ ಪಾಲನ್ನು ವ್ಯಾಪಾರ ಸಂಸ್ಥೆಗಳು ಹಸ್ತಾಂತರಿಸುವುದನ್ನು ಮಾರುಕಟ್ಟೆಯ ಸ್ಪರ್ಧೆಯು ಖಂಡಿತವಾಗಿ ಖಚಿತಗೊಳಿಸುತ್ತದೆ.

ಜಿಎಸ್‌ಟಿಯ ತೆರಿಗೆ ಹೊರೆಯು ಬಡವರಿಗೆ ತಟ್ಟಬಾರದೆಂದು ಖಚಿತಪಡಿಸಲು ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿಯವರ ಅಧ್ಯಕ್ಷತೆಯ ಸಂಯುಕ್ತ ಪರೋಕ್ಷ ತೆರಿಗೆ ಮಂಡಳಿಯಾದ ಜಿಎಸ್‌ಟಿ ಕೌನ್ಸಿಲ್ ಎಲ್ಲ ಪದಾರ್ಥಗಳು ಮತ್ತು ಸೇವೆಗಳಿಗೆ ಒಂದೇ ದರವನ್ನು ನಿಗದಿ ಮಾಡುವ ಪರಿಕಲ್ಪನೆಯಿಂದ ಸರಿದು 5%, 12%, 18% ಮತ್ತು 28% ಎಂಬುದಾಗಿ ನಾಲ್ಕು ವಿಧಗಳ ತೆರಿಗೆಯನ್ನು ರೂಪಿಸಿದೆ.

ಇದರಿಂದ ಸಮೂಹ ಬಳಕೆಯ ಪದಾರ್ಥಗಳಿಗೆ ಕಡಿಮೆ ದರದಲ್ಲಿ ಮತ್ತು ಲಕ್ಸುರಿ ವಸ್ತುಗಳಿಗೆ ಹೆಚ್ಚಿನ ದರದ ತೆರಿಗೆಯು ವಿಧಿಸಲಾಗಿದೆ. ಜಿಎಸ್‌ಟಿ ದರಗಳನ್ನು ಸಮರೂಪತೆ ತತ್ವದ ಆಧಾರದ ಅಡಿಯಲ್ಲಿ ನಿಗದಿ ಪಡಿಸಲಾಗಿದೆ. ಅಂದರೆ ಅದು ಸರಕುಗಳು ಮತ್ತು ಸೇವೆಗಳ ಮೇಲೆ ಪ್ರಸಕ್ತ ತೆರಿಗೆ ಸಂದರ್ಭಗಳಿಗೆ ಹತ್ತಿರವಾಗಿದೆ. ವಸ್ತ್ರ ಉದ್ದಿಮೆಗಳಂಥ ಕೆಲವು ವಲಯಗಳು ಜಿಎಸ್‌ಟಿಯಿಂದ ರಿಯಾಯಿತಿ ಬೇಕೆಂದು ಆಗ್ರಹಪಡಿಸುತ್ತಿವೆ. ಇಂತಹ ಕ್ರಮವು ಒಳಿತಿಗಿಂತ ಹಾನಿಯನ್ನೇ ಹೆಚ್ಚು ಉಂಟುಮಾಡುತ್ತದೆ. ಒಂದು ಸರಕನ್ನು ಜಿಎಸ್‌ಟಿಯಿಂದ ಹೊರತು ಪಡಿಸಿದರೆ, ಹಿಂದಿನ ಉತ್ಪಾದನಾ ಹಂತಗಳಲ್ಲಿ ಕಚ್ಚಾ ವಸ್ತುಗಳಿಗೆ ಪಾವತಿಸಿದ ತೆರಿಗೆಗಳಿಂದ ಪದಾರ್ಥ ಬೆಲೆಗೆ ಸೇರಲ್ಪಟ್ಟಿರುವಂತಹ ಸಾಲ ಪ್ರಯೋಜನಗಳನ್ನು (ಕ್ರೆಡಿಟ್ಸ್) ಮಾರಾಟಗಾರ ಪಡೆಯಲಾರನು. ಕೆಲವು ಸೇವೆಗಳಲ್ಲಿ ತೆರಿಗೆ



ಹೊರೆಯು ಹೆಚ್ಚಾಗಲಿರುವುದು ಉದ್ದಿಮೆಯ ಒಂದು ಸಂಭವನೀಯ ಸಮಸ್ಯೆ. ಸರಕುಗಳಿಗೆ ಸಮಾನವಾಗಿ ಸೇವೆಗಳಿಗೆ ತೆರಿಗೆ ವಿಧಿಸುವುದು ವಿಶ್ವದಾದ್ಯಂತ ಅನುಸರಿಸುವ ರೂಢಿಯಾಗಿದ್ದು ಇದನ್ನು ಜಿಎಸ್‌ಟಿ ಕೌನ್ಸಿಲ್ ಅಂಗೀಕರಿಸಿದೆ. ಉದಾಹರಣೆಗೆ, ಟೆಲಿಕಾಂ ಸೇವೆಗಳ ಮೇಲಿನ ಜಿಎಸ್‌ಟಿ ದರವು ಹಿಂದಿನ 15% ಸೇವಾ ತೆರಿಗೆಯಿಂದ ಈಗ 18% ಕ್ಕೆ ಏರಿದ್ದು ಸೇವಾ ತೆರಿಗೆ ಹೆಚ್ಚಾಗಿದೆ.ಇದರಿಂದ ಟೆಲಿಫೋನ್ ಬಿಲ್ಲು ದರಗಳು ಹೆಚ್ಚಾಗಲಿವೆಯೆಂದು ಟೆಲಿಕಾಂ ಉದ್ದಿಮೆಯು ಶಂಕಿಸಿದೆ. ಮೇ 26ರಂದು ಸರ್ಕಾರವು ಹಿಂದಿನ ಸೆಕ್ಟ್ರಂ ಪಾವತಿಗಳ ಮೇಲೆ ದೊರಕಿರುವ ಸೇವಾ ತೆರಿಗೆಯಿಂದ ತೆರಿಗೆ ಪ್ರಯೋಜನಗಳು ಕಂಪನಿಗಳಿಗೆ ಲಭ್ಯವಾಗುತ್ತವೆ ಮತ್ತು ಉಪಕರಣಗಳ ಆಮದು ತೆರಿಗೆ ದರ ಹೆಚ್ಚಳವನ್ನು ಸರಿದೂಗಿಸುತ್ತದೆ ಎಂದು ಸ್ಪಷ್ಟನೆ ನೀಡಿದೆ.

"ಈ ಎಲ್ಲವೂ (ತೆರಿಗೆ ಪ್ರಯೋಜನಗಳು) ಜಿಎಸ್‌ಟಿಯನ್ನು ಹಣದ ಮೂಲಕ ಪಾವತಿಸುವ ಟೆಲಿಕಾಂ ಕಂಪನಿಯ ಹೊಣೆಗಾರಿಕೆಯನ್ನು ಕಳೆದ ಹಣಕಾಸು ವರ್ಷದಲ್ಲಿ ಅವು ಪಾವತಿಸಿದ ಹಣದ ಶೇಕಡ 87 ರಷ್ಟು ತಗ್ಗಿಸುತ್ತವೆ ಎಂದು ಸ್ಪಷ್ಟನೆ ನೀಡಲಾಗಿದೆ.

ಇನ್ನೊಂದೆಡೆ, ಜಿಎಸ್‌ಟಿ ಜಾರಿಯಾದ ಬಳಿಕ ಟೆಲಿಕಾಂ ಸೇವೆಗಳಿಗೆ ಪೂರೈಕೆಯ ವೆಚ್ಚ ಜಿಎಸ್‌ಟಿ ಹೆಚ್ಚಿಸುತ್ತದೆಯೇ ಎಂದು ತೀರ್ಮಾನಿಸಲು ಕಂಪನಿಗಳು ಜಿಎಸ್‌ಟಿ ಜಾರಿಯಾದ ನಂತರದ ಮೊದಲ ಬಿಲ್ಲಿನ ಪ್ರಕ್ರಿಯೆ ಪೂರ್ತಿಯಾಗಬೇಕೆಂದು ಕಾಯುತ್ತಿವೆ.

ಮೇ ತಿಂಗಳಲ್ಲಿ ಕೇರಳದ ಹಣಕಾಸು ಮಂತ್ರಿ ಶ್ರೀ ಥಾಮಸ್ ಐಸಾಕ್ ಹಾಗೂ ಜಮ್ಮು ಮತ್ತು ಕಾಶ್ಮೀರದ ಹಣಕಾಸು ಸಚಿವ ಶ್ರೀ ಹಸೀಬ್ ದ್ರಬುರವರು ಸರಕುಗಳು ಮತ್ತು ಸೇವೆಗಳ ಮೇಲೆ ತೆರಿಗೆ ದರಗಳನ್ನು ಜಿಎಸ್‌ಟಿ ಕೌನ್ಸಿಲ್ ನಿಗದಿಗೊಳಿಸಿದ ನಂತರ, ತೆರಿಗೆ ಕಡಿತದ ಪ್ರಯೋಜನಗಳು ಗ್ರಾಹಕರಿಗೆ ವರ್ಗಾವಣೆಯಾಗುತ್ತದೆ ಎಂಬ ಅಂಶ ಅನುಮೋದಿಸಿದರು.

ಕಂದಾಯ ಕಾರ್ಯದರ್ಶಿಗಳಾದ ಶ್ರೀ ಹಸ್ಮುಖ್ ಅಧಿಯಾರವರು ಲಾಭಕೋರತನ ತಡೆ ಮಂಡಳಿಯು ಜಿಎಸ್‌ಟಿ ದರಗಳನ್ನು ನಿರ್ಧರಿಸಿದ ದಿನದಿಂದಲೇ ವ್ಯಾಪಾರಗಳ ಬೆಲೆ ವರ್ತನೆಗಳನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಆದರೆ ಇದನ್ನು ಸಣ್ಣ ಬೆಲೆ ಪರಿಷ್ಕರಣೆಗಳ ಸಂದರ್ಭಗಳಲ್ಲದೆ ಕೇವಲ ದೊಡ್ಡ ಪ್ರಮಾಣದ ಮತ್ತು ವ್ಯಾಪಕ ಉದ್ದಿಮೆ ಲಾಭಕೋರತನಗಳ ಸಂದರ್ಭಗಳಲ್ಲಿ ಮಾತ್ರ ನಿಯಮವನ್ನು ವಿಧಿಸುವ ಸಾಧ್ಯತೆಯಿದೆ. ಆದರೆ ಈ ಅವಧಿಯಲ್ಲಿ ಹೊಸ ವ್ಯವಸ್ಥೆಗೆ ಉದ್ದಿಮೆಗಳು ಮತ್ತು ವ್ಯಾಪಾರಗಳು ಒಗ್ಗುವಂತೆ ಮತ್ತು ಅದು ಸುಗಮವಾಗಿ ನೆಲೆಗೊಳ್ಳಲು ಅನುವುಮಾಡುವ ಕ್ರಿಯೆಯತ್ತ ಜಿಎಸ್‌ಟಿ ಕೌನ್ಸಿಲ್ ಮತ್ತು ತೆರಿಗೆ ಪ್ರಾಧಿಕಾರಗಳು ಗಮನ ಹರಿಸುತ್ತವೆ. ಈ ಅವಧಿಯಲ್ಲಿ ಸಣ್ಣ ಕಾರ್ಯವಿಧಾನಗಳ ನ್ಯೂನತೆಗಳನ್ನು ಉಗ್ರವಾಗಿ ಪರಿಗಣಿಸುವುದಿಲ್ಲ. ❑


# ಯೋಜನಾ

## ಸೆಪ್ಟೆಂಬರ್ 2017 ಸಂಚಿಕೆಯ ವಿಷಯ

## ಸರ್ವರಿಗೂ ಸೂರು

ವಿಶೇಷ ಲೇಖನ

ಆಧಾರ

# ಸದೃಢ ಐಟಿ – ಜಿಎಸ್‌ಟಿ ಬೆನ್ನೆಲುಬು

* ಪ್ರಕಾಶ್ ಕುಮಾರ್



ತೆರಿಗೆ ಪಾವತಿ ಮಾಡುವುದು ತೆರಿಗೆದಾರನ ಕರ್ತವ್ಯ. ಆದರೆ ಅವರು ತೆರಿಗೆ ವಿವರಗಳನ್ನು ಸಲ್ಲಿಸುವ ವ್ಯವಸ್ಥೆಯನ್ನು ಸುಲಭಗೊಳಿಸುವುದು, ಅನುಕೂಲಕರಗೊಳಿಸುವುದು, ಅವರ ಸಮಯ ಉಳಿತಾಯ ಮಾಡುವುದು ಇವುಗಳು ತೆರಿಗೆ ಪಡೆಯುವ ವ್ಯವಸ್ಥೆಯ ಕರ್ತವ್ಯವಾಗಿರುತ್ತದೆ.

ಜುಲೈ 1, 2017 ರಂದು ಭಾರತವು ತನ್ನ ಅತ್ಯಂತ ಕ್ರಾಂತಿಕಾರಕ ತೆರಿಗೆ ಸುಧಾರಣೆಯನ್ನು ಜಿಎಸ್‌ಟಿ (ಸರಕು ಮತ್ತು ಸೇವೆಗಳ ತೆರಿಗೆ) ರೂಪದಲ್ಲಿ ಜಾರಿಗೆ ತಂದಿತು. ಇದು ಇಡೀ ದೇಶವನ್ನು ಒಂದೇ ಮಾರುಕಟ್ಟೆಯನ್ನಾಗಿ ಒಗ್ಗೂಡಿಸಿ, ದೇಶದ ಆರ್ಥಿಕತೆಗೆ ಹೊಸ ಬಲವನ್ನು ನೀಡುವ ಗುರಿ ಹೊಂದಿದೆ. ಮುಕ್ತ ಮಾರುಕಟ್ಟೆಗೆ ದೇಶದ ಆರ್ಥಿಕತೆಯನ್ನು ಪರಿಚಯಿಸಿ 26 ವರ್ಷಗಳ ನಂತರ ಭಾರತವು ಮತ್ತೊಂದು ಮುಖ್ಯ ಆರ್ಥಿಕ ಸುಧಾರಣೆಯ ಮೂಲಕ ಉದಾರೀಕರಣದ ಲಾಭ ಪಡೆದು ಮುನ್ನುಗ್ಗಲು ಉದ್ದೇಶಿಸಿದೆ.

ಹೊಸ ಜಿಎಸ್‌ಟಿ ಯು 17 ಕೇಂದ್ರೀಯ ಮತ್ತು ರಾಜ್ಯ ತೆರಿಗೆಗಳು ಹಾಗೂ 22 ವಿಧದ ಸೆಸ್‌ಗಳನ್ನು ಒಂದೇ ತೆರಿಗೆಗೆ ವಿಲೀನಗೊಳಿಸುತ್ತದೆ. ಆ ಮೂಲಕ ಹಲವಾರು ರೀತಿಯ ಸಂಕೀರ್ಣ ತೆರಿಗೆಗಳನ್ನು ತೆಗೆದುಹಾಕಿ, ಪರೋಕ್ಷ ತೆರಿಗೆಯನ್ನು ಸರಳಗೊಳಿಸುತ್ತದೆ. 34 ರಾಜ್ಯಗಳ ಮೌಲ್ಯವರ್ಧಿತ ತೆರಿಗೆಗಳು, ವ್ಯಾಟ್ 97 ವಿಭಿನ್ನ ರೀತಿಯ ತೆರಿಗೆ ಸಲ್ಲಿಕೆಯ ನಮೂನೆಗಳು 317 ಅನುಬಂಧಗಳು ಮತ್ತು 28 ದೃಢೀಕರಣಗಳನ್ನು ಒಳಗೊಂಡಿದ್ದವು. ಅದೇ ರೀತಿ ಕೇಂದ್ರ ಅಬ್ಕಾರಿಯು 13 ತೆರಿಗೆ ಸಲ್ಲಿಕೆ ನಮೂನೆಗಳೊಡನೆ ಒಂದು ದೃಢೀಕರಣವನ್ನು ಒಳಗೊಂಡಿತ್ತು. ಅದಕ್ಕೆ ಉಪಯೋಗಿಸುವ ಚಲನ್ ಸಹ 12 ವಿಧಗಳನ್ನು ಹೊಂದಿತ್ತು. ಇವೆಲ್ಲವುಗಳನ್ನು ತೆಗೆದುಹಾಕಿ, ದೇಶಾದ್ಯಂತ ಕೇವಲ 12 ವಿಧದ ನಮೂನೆಗಳು ಮತ್ತು ಕೇವಲ ಒಂದು ರೀತಿಯ ಚಲನ್ ಅನ್ನು ಮಾತ್ರ ಜಾರಿಗೆ ತರಲಾಗಿದೆ. ಜಿಎಸ್‌ಟಿಯು ಕೇವಲ ತೆರಿಗೆ ಸಲ್ಲಿಸುವ ಹಾಗೂ ತೆರಿಗೆ ನಿರ್ಧರಿಸುವ ಕಾರ್ಯವನ್ನು ಮಾತ್ರ ಸುಲಭಗೊಳಿಸದೆ, ಅದು ವ್ಯವಹಾರದಲ್ಲಿನ ತೊಡಕುಗಳನ್ನು ನಿವಾರಿಸಿ ಆ ಕಾರ್ಯವನ್ನು ಸುಲಭಗೊಳಿಸುವ ಗುರಿಯನ್ನು ಹೊಂದಿದೆ.

ಜಿಎಸ್‌ಟಿಯು 2.6 ರಿಂದ 3.0 ಶತಕೋಟಿ ವ್ಯಾಪಾರದಿಂದ–ವ್ಯಾಪಾರಕ್ಕೆ ವಹಿವಾಟನ್ನು ಒಳಗೊಂಡಿರುವ 80 ಲಕ್ಷ ತೆರಿಗೆದಾರರ, ತೆರಿಗೆ ಪಾವತಿ ಪ್ರಕ್ರಿಯೆಯನ್ನು ಅವರು ತೆರಿಗೆ ಫೈಲ್ ಮಾಡಿದ ಕೇವಲ 10 ದಿನಗಳಲ್ಲಿ ಪೂರ್ತಿಗೊಳಿಸುವ ಅಂದಾಜನ್ನು ಹೊಂದಿದೆ. ಐಟಿನ ಪೂರ್ವಭಾವಿ ವ್ಯವಸ್ಥೆ ಇಲ್ಲದಿದ್ದರೆ ಈ ಕಾರ್ಯವು ಅಸಾಧ್ಯವಾಗುತ್ತದೆ. ಹೀಗೆ ಐಟಿ – ಮಾಹಿತಿ ತಂತ್ರ––ನ ಶಕ್ತಿಯುತ ಬೆನ್ನೆಲುಬಾಗಿದೆ. ಜಿಎಸ್‌ಟಿ ಪೋರ್ಟಲ್ ಮತ್ತು ಐಟಿ ವೇದಿಕೆಗಳನ್ನು ಒಳಗೊಂಡ ಜಿಎಸ್‌ಟಿ ಅನುಷ್ಠಾನ ರೂಪಕ್ಕೆ ಬಂದಿದೆ. ಇದು ಅತ್ಯಂತ ಮುಂದುವರೆದ ತಾಂತ್ರಿಕ ಪೂರ್ವಭಾವಿ ವ್ಯವಸ್ಥೆಯಾಗಿ ಸಮಯಕ್ಕೆ ಸರಿಯಾಗಿ ತೆರಿಗೆ ಸಲ್ಲಿಸುವ ಕ್ರಮವನ್ನು ಸಾಧ್ಯಗೊಳಿಸಿದೆ. ಪರೋಕ್ಷ ತೆರಿಗೆ ವ್ಯವಸ್ಥೆಯನ್ನು ಒಳಗೊಂಡಿರುವ ಎಲ್ಲಾ ವಹಿವಾಟುಗಳು, ತೆರಿಗೆದಾರರು ಮತ್ತು ಇತರ ಫಲಾನುಭವಿಗಳಿಗಾಗಿ ಒಂದೇ ಸಾಮಾನ್ಯ ಜಾಲತಾಣವನ್ನು ಜಿಎಸ್‌ಟಿಯು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದೆ. ಈ ಲೇಖನ ಬರೆಯುವ ವೇಳೆಗಾಗಲೇ 69 ಲಕ್ಷ ತೆರಿಗೆದಾರರು ಜಿಎಸ್‌ಟಿ ಜಾಲತಾಣದಲ್ಲಿ ತಮ್ಮನ್ನು ನೊಂದಾಯಿಸಿಕೊಳ್ಳುವ ಮೂಲಕ ಜಿಎಸ್‌ಟಿ ಕ್ಷೇತ್ರವನ್ನು ಪ್ರವೇಶಿಸಿದ್ದರು. 25 ಜೂನ್ 2017ರಂದು ಜಿಎಸ್‌ಟಿಎನ್ ಜಾಲತಾಣವು ಹೊಸದಾಖಲಾತಿ (ಅಥವಾ

* ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಎಸ್‌ಟಿಎನ್. E-mail : prakash@gstn.org.in

ನೊಂದಣಿ) ಗಾಗಿ ತೆರೆಯಲ್ಪಟ್ಟಿತು. 5 ಲಕ್ಷ ಜನರು ನೊಂದಣಿಗಾಗಿ ಅರ್ಜಿ ಹಾಕಿದರು. ಅವರಲ್ಲಿ 3 ಲಕ್ಷ ಜನರ ನೊಂದಣಿಯಾಗಿದೆ.

### ಜಿಎಸ್‌ಟಿಎನ್ – ಜಿಎಸ್‌ಟಿಯ ತಂತ್ರಜ್ಞಾನ ಬೆಂಬಲ

ಜಿಎಸ್‌ಟಿಎನ್ ಎಂದರೆ ಜಿಎಸ್‌ಟಿ ತೆರಿಗೆ ಪಾವತಿಯನ್ನು ಅನುವುಗೊಳಿಸುವ ಜಾಲತಾಣ. ಜಿಎಸ್‌ಟಿಎನ್ ಅನ್ನು ಜಿಎಸ್‌ಟಿ ಒಳ ತೆರಿಗೆ (ಐಟಿ) ಪಾವತಿಯ ಆಧಾರವೆಂದು ಭಾವಿಸಲಾಗಿದೆ. ಇದು ಒಂದು ಸಂಘಟನೆಯಾಗಿ ತೆರಿಗೆ ಪಾವತಿದಾರರನ್ನು ಬಹು ವಿಧದ ತೆರಿಗೆ ವ್ಯವಸ್ಥೆಯಿಂದ ಒಂದೇ ರೀತಿಯ ಸರಳ ಅಥವಾ ಸುಲಭ ವ್ಯವಸ್ಥೆಗೆ ಬದಲಾಯಿಸಲು ಅನುವು ಮಾಡಿಕೊಡುತ್ತದೆ ಎಂದೂ ಸಹ ಭಾವಿಸಲಾಗಿದೆ. ಒಂದು ವಿಶೇಷ ಉದ್ದೇಶವುಳ್ಳ ಸರ್ಕಾರೇತರ ಸಂಸ್ಥೆಯಾದ ಜಿಎಸ್‌ಟಿಎನ್ ಅನ್ನು ರಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದುಗೂಡಿವೆ. ಇದು ಒಂದು ಲಾಭ ಪಡೆಯದ ಕಂಪನಿಯಾಗಿದೆ. ಇದರಲ್ಲಿ ಕೇಂದ್ರವು 24.5% ಮತ್ತು ಎಲ್ಲಾ ರಾಜ್ಯಗಳೂ ಒಟ್ಟಾಗಿ 24.5% ಶೇರುಗಳನ್ನು ಹೊಂದಿವೆ. ಉಳಿದ ಶೇರುಗಳನ್ನು 5 ಖಾಸಗಿ ಹಣಕಾಸು ಸಂಸ್ಥೆಗಳು ಹೊಂದಿವೆ. ಇದು ಖಾಸಗಿ ವಲಯದಲ್ಲಿ ಸುಲಭ ಮತ್ತು ಸರಳವಾದ ರಚನೆಯನ್ನು ಹೊಂದಿದ್ದರೂ ಹೆಚ್ಚಿನ ಹತೋಟಿಯನ್ನು ಸರ್ಕಾರವು ಹೊಂದಿರುತ್ತದೆ.

ಅತ್ಯಧಿಕ ಸಂಖ್ಯೆಯ ತೆರಿಗೆ ವ್ಯವಸ್ಥೆಗಳನ್ನು ಆಡಳಿತದ ವಿವಿಧ ಹಂತಗಳಲ್ಲಿ ತಪ್ಪುಗಳಾಗದಂತೆ, ಒಂದು ಹಂತಕ್ಕೊಳಪಡಿಸುವುದು ಸಣ್ಣ ಕೆಲಸವಲ್ಲ. ಜಿಎಸ್‌ಟಿ ವ್ಯವಸ್ಥೆಯ ಯೋಜನೆಯು ಒಂದು ವಿಶಿಷ್ಟ ಮತ್ತು ಸಂಕೀರ್ಣ ಐಟಿ ಕಾರ್ಯವಾಗಿದೆ. ಅದು ವಿಶಿಷ್ಟ ಏಕೆಂದರೆ ಮೊದಲ ಬಾರಿಗೆ ಅದು ತೆರಿಗೆ ಪಾವತಿದಾರರನ್ನು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒಂದೇ ಪೂರ್ವಭಾವಿ ವ್ಯವಸ್ಥೆಗೆ ತರುತ್ತದೆ. 36 ವಿವಿಧ ತೆರಿಗೆ ವ್ಯವಸ್ಥೆಗಳನ್ನು ವಿವಿಧ ಹಂತಗಳಲ್ಲಿ ಒಗ್ಗೂಡಿಸುವುದು ಬಹಳ ಕಷ್ಟದ ಕಾರ್ಯವಾಗಿದೆ. ಅಲ್ಲದೆ ಜಿಎಸ್‌ಟಿಯ ಗುರಿ ಆಧರಿತ ತೆರಿಗೆಯಾಗಿ ಐಜಿಎಸ್‌ಟಿಯ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ತೆರಿಗೆ




ಹಂಚಿಕೆಯ ವಿಷಯದಲ್ಲಿ ಒಪ್ಪಂದಕ್ಕೆ ಬರುವುದು ತುಂಬಾ ಗಂಭೀರವಾದ ವಿಷಯವಾಗಿದೆ. ಶಕ್ತಿಯುತವಾದ ಐಟಿ ಪೂರ್ವಭಾವಿ ವ್ಯವಸ್ಥೆಯನ್ನು ಹಾಗೂ ಸೇವೆಯ ಬೆಂಬಲವನ್ನು ಹೊಂದಿ, ತೆರಿಗೆ ಪಾವತಿದಾರರನ್ನು ಒಳಗೊಂಡ ಫಲಾನುಭವಿಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು, ಲೆಕ್ಕ ಪತ್ರದ ಕಚೇರಿಗಳು, ಬ್ಯಾಂಕುಗಳು ಮತ್ತು ಆರ್‌ಬಿಐ ಇವುಗಳ ನಡುವೆ ವಿಚಾರ ವಿನಿಮಯವಾದಾಗ ಮಾತ್ರ ಈ ಕಾರ್ಯ ಸಾಧ್ಯವಾಗುತ್ತದೆ.

ಜಿಎಸ್‌ಟಿಎನ್ ಕಳೆದ ಕೆಲವು ವರ್ಷಗಳಿಂದ ಒಂದು ಸಾಮಾನ್ಯ ಜಾಲತಾಣವನ್ನು ಅಭಿವೃದ್ಧಿಪಡಿಸಲು, ಯೋಜಿಸಲು ಹಾಗೂ ಕಾರ್ಯತಂತ್ರಗೊಳಿಸಲು ಅವಿಶ್ರಾಂತವಾಗಿ ದುಡಿದಿದೆ. ಅನ್ವಯಿಕ ತಂತ್ರಾಂಶಗಳನ್ನು ಬೆಳೆಸಲು ಜಿಎಸ್‌ಟಿಎನ್, ಎಂಎಸ್‌ಪಿ (ನಿರ್ವಹಣಾ ಸೇವೆ ಪೂರೈಕೆದಾರರು) ಇನ್‌ಫೋಸಿಸ್ ಅನ್ನು ಮುಂದಿನ 5 ವರ್ಷಗಳಿಗೆ ತನ್ನ ಪಾಲುದಾರರನ್ನಾಗಿ ಮಾಡಿಕೊಂಡಿದೆ.

ದೇಶಾದ್ಯಂತ ಎಲ್ಲಾ ತೆರಿಗೆ ಪಾವತಿದಾರರೂ ಒಂದೇ ಜಾಲತಾಣದ ಸೇವೆ ಪಡೆಯಬಹುದಾಗಿದೆ. ಇದು ಎಲ್ಲರಿಗೂ ಅನ್ವಯವಾಗುತ್ತದೆ. ಕೇವಲ ಕೆಲವು ವೇಳೆ ಯಾವುದಾದರೂ ಒಬ್ಬ ತೆರಿಗೆದಾರ ಲೆಕ್ಕಪತ್ರ ಪರಿಶೋಧಿಸಲ್ಪಡುವ ಮತ್ತು ಪರೀಕ್ಷಿಸಲ್ಪಡುವ ಸಂದರ್ಭ ಬಂದಾಗ ಅವನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸುತ್ತಾನೆ. ಉಳಿದ ಸುಮಾರು 95% ರಷ್ಟಿರುವ ಎಲ್ಲಾ ತೆರಿಗೆ ಪಾವತಿದಾರರಿಗೆ ಜಿಎಸ್‌ಟಿಎನ್ ಏಕೈಕ ಮಾಧ್ಯಮವಾಗಿದೆ.

### ಅದು ಹೇಗೆ ಕೆಲಸ ಮಾಡುತ್ತದೆ

ಜಿಎಸ್‌ಟಿಎನ್ ಎಲ್ಲಾ ಪರೋಕ್ಷ ತೆರಿಗೆಯ ಫಲಾನುಭವಿಗಳಿಗೆ, ಸಾಮಾನ್ಯ ನೊಂದಣಿ, ಬ್ಯಾಂಕುಗಳ ಮೂಲಕ ಹಣ ಪಾವತಿಸುವ ಚಲನೆಗಳ ರಚನೆ, ತೆರಿಗೆ ಪಾವತಿಸಲು ಒದಗಿಸುವ ವ್ಯಾಪಾರ ವಹಿವಾಟಿನ ವಿವರಗಳನ್ನು ಸಲ್ಲಿಸುವುದು ಇತ್ಯಾದಿ ಸೇವೆಗಳನ್ನು ಪೂರೈಸುವ ಒನ್ ಸ್ಟಾಪ್ ಶಾಪ್ ಆಗಿ ಕಾರ್ಯ ನಿರ್ವಹಿಸುವ ಸಲುವಾಗಿ ರಚಿಸಲ್ಪಟ್ಟಿದೆ. ಜಿಎಸ್‌ಟಿಎನ್ 27 ರಾಜ್ಯಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ, ತೆರಿಗೆ ನಿಗದಿ, ಮನವಿ ಜಾರಿಗೊಳಿಸುವುದು ಇತ್ಯಾದಿಗಳನ್ನು ಸಹ ಪೂರೈಸಲು ಸಹ ಆದೇಶಿಸಲ್ಪಟ್ಟಿದೆ. ಜಿಎಸ್‌ಟಿಯಲ್ಲಿ ಸೇರಲ್ಪಡುವ ವ್ಯಾಟ್ ನೊಂದಾಯಿತ ತೆರಿಗೆ, ಸೇವಾ ತೆರಿಗೆ, ಅಬ್ಕಾರಿ ತೆರಿಗೆ ಮತ್ತು ಇತರ ತೆರಿಗೆಗಳ ಪಾವತಿದಾರರಿಗಾಗಿ ಜಿಎಸ್‌ಟಿಎನ್ 8ನೇ ನವೆಂಬರ್ 2016 ರಂದು ನೊಂದಣಿ ವಿಭಾಗವನ್ನು ಪ್ರಾರಂಭಿಸಿತು. ಈ ಸಾಮಾನ್ಯ ಜಾಲತಾಣವು ಅಂದಿನಿಂದ ಎಲ್ಲಾ ತೆರಿಗೆದಾರರಿಗೂ ಏಕೈಕ ಮಾಧ್ಯಮವಾಗಿದೆ. ಅರ್ಜಿಗಳ ವಿಶ್ವಾಸಾರ್ಹತೆಯನ್ನು ದೃಢಪಡಿಸಿಕೊಳ್ಳಲು ಪ್ಯಾನ್, ಆಧಾರ್ ಇತ್ಯಾದಿ ದಾಖಲೆಗಳ ಸಹಯೋಗವನ್ನು ಪಡೆಯಲಾಗುತ್ತದೆ.

ಜಿಎಸ್‌ಟಿ ಜಾಲತಾಣದ ಮೂಲಕ ಒಂದೇ ಚಲನ್ ಅನ್ನು ಉಪಯೋಗಿಸಿಕೊಂಡು ಎಲ್ಲಾ ವಿಧದ ತೆರಿಗೆಗಳನ್ನು ಪಾವತಿಸುವ ಕಾರ್ಯ ಆರಂಭವಾಗಿದೆ. ಚಲನ್‌ನಲ್ಲಿ ತೆರಿಗೆದಾರನ ಹೆಸರು, ತೆರಿಗೆಯ ವಿವಿಧ ಖಾತೆಗಳಿಗೆ ಸಲ್ಲಿಸಬೇಕಾದ ತೆರಿಗೆಯ ಮೊತ್ತ ಇವುಗಳ ವಿವರಗಳಿರುತ್ತವೆ. ತೆರಿಗೆ ಪಾವತಿಸಲು ತೆರಿಗೆದಾರರಿಗೆ ಎರಡು ಆಯ್ಕೆಗಳಿರುತ್ತವೆ.

1. ತೆರಿಗೆ ಪಡೆಯುವ ಅಧಿಕಾರ ನೀಡಲ್ಪಟ್ಟಿರುವ 25 ಬ್ಯಾಂಕ್‌ಗಳ ಅಂತರ್ಜಾಲದ ಮೂಲಕ ತೆರಿಗೆ ಸಲ್ಲಿಸುವುದು.

2. ಎಲ್ಲಾ ವಿವರಗಳನ್ನು ಚಲನ್‌ನಲ್ಲಿ ಭರ್ತಿ ಮಾಡಿ ಬ್ಯಾಂಕ್ ಕೌಂಟರ್ ಮೂಲಕ ಓಟಿಸಿ ಒಬ್ಬ ತೆರಿಗೆದಾರ ಒಂದು ತಿಂಗಳಿಗೆ 10,000 ರೂಗಳನ್ನು ಪಾವತಿಸಬಹುದು. ಅವನು ತೆರಿಗೆ ಪಾವತಿಸಲು ಭಾರತದ ಯಾವುದೇ ಬ್ಯಾಂಕಿನ ನೆಫ್ಟ್, ಆರ್‌ಟಿಜಿಎಸ್‌ಗಳ ಉಪಯೋಗವನ್ನು ಪಡೆದುಕೊಳ್ಳಬಹುದು. ಆಯಾ ದಿನದ ಅಂತ್ಯದಲ್ಲಿ ಜಿಎಸ್‌ಟಿ ಜಾಲತಾಣವು ಎಲ್ಲಾ ಬ್ಯಾಂಕ್‌ಗಳ ಮೂಲಕ ಆಯಾ ದಿನ ಪಾವತಿಯಾದ ಎಲ್ಲಾ ಹಣದ ವಿವರ ಪಡೆದು ಅದರ ಸಾರವನ್ನು ಲೆಕ್ಕಪತ್ರದ ಅಧಿಕಾರಿಗಳಿಗೆ ಪರಾಮರ್ಶೆಯಾಗಿ ಕಳಿಸಿಕೊಡುತ್ತದೆ.

ಲೆಕ್ಕಪತ್ರದ ಅಧಿಕಾರಿಗಳು ಆರ್‌ಬಿಐನಿಂದ ಪಾವತಿಯ ವಿವರಗಳನ್ನು ಪಡೆಯುತ್ತಾರೆ. ಬ್ಯಾಂಕುಗಳು ಸ್ವೀಕರಿಸಲಾದ ತೆರಿಗೆ ಹಣದ ಲೆಕ್ಕವು ಬ್ಯಾಂಕುಗಳ ಲೆಡ್ಜರ್‌ಗಳಲ್ಲಿ ದಾಖಲಾಗುತ್ತದೆ.

## ನಿಯಮಗಳನ್ನು ಸರಳಗೊಳಿಸುವುದು

ತೆರಿಗೆ ಪಾವತಿ ಮಾಡುವುದು ತೆರಿಗೆದಾರನ ಕರ್ತವ್ಯ. ಆದರೆ ಅವರು ತೆರಿಗೆ ವಿವರಗಳನ್ನು ಸಲ್ಲಿಸುವ ವ್ಯವಸ್ಥೆಯನ್ನು ಸುಲಭಗೊಳಿಸುವುದು, ಅನುಕೂಲಕರಗೊಳಿಸುವುದು, ಅವರ ಸಮಯ ಉಳಿತಾಯ ಮಾಡುವುದು ಇವುಗಳು ತೆರಿಗೆ ಪಡೆಯುವ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ತೆರಿಗೆ ಸುಧಾರಣೆಯ ಹಿಂದಿನ ಉದ್ದೇಶವು ಸಹ ಇದೇ ಆಗಿರುತ್ತದೆ. ಜಿಎಸ್‌ಟಿಯು ಮೂಲಕ ನಾವು ಹಲವಾರು ವಿಧದ ಸೇವೆಗಳನ್ನು ತಾಂತ್ರಿಕ ಉಪಕರಣಗಳನ್ನು ತೆರಿಗೆ ಪಾವತಿಸುವ ಕಟ್ಟಕಡೆಯ ಸಾಮಾನ್ಯ ವ್ಯಕ್ತಿಗೂ ಅನುಕೂಲಕರವಾದ ರೀತಿಯಲ್ಲಿ ಒದಗಿಸಿಕೊಡುತ್ತದೆ. ಜಿಎಸ್‌ಟಿ ಕ್ಷೇತ್ರದ ಎಲ್ಲಾ ರೀತಿಯ ತೆರಿಗೆದಾರರೂ ಅವರ ಬಾಹ್ಯ ಪೂರೈಕೆಯ ವಿವರಗಳನ್ನು ಪ್ರತಿ ತಿಂಗಳ 10 ರಂದು ಜಿಎಸ್‌ಟಿಆರ್‌ಐ ನಮೂನೆಯಲ್ಲಿ ಸಲ್ಲಿಸಬೇಕು. ಈ ಪ್ರಯತ್ನದ ಒಂದು ಭಾಗವಾಗಿ ಜಿಎಸ್‌ಟಿಎನ್ ಒಂದು ಆಫ್‌ಲೈನ್ ಟೂಲ್ ಮತ್ತು ಸರಳ ಎಕ್ಸೆಲ್ ಆಧಾರಿತ ನಮೂನೆ ಅನ್ನು ತೆರಿಗೆ ಪಾವತಿದಾರರು, ತಿಂಗಳ ತೆರಿಗೆ ವಿವರಗಳನ್ನು, ಗರಿಷ್ಠ ಮಟ್ಟದ ಸರಳ, ಮತ್ತು ಕನಿಷ್ಠ ಮಟ್ಟದ ವೆಚ್ಚದಲ್ಲಿ ಸಲ್ಲಿಸುವ ವಿಧಾನವನ್ನು ಸೃಷ್ಟಿಸಿಕೊಟ್ಟಿದೆ. ಎಕ್ಸೆಲ್ ವರ್ಕ್‌ಬುಕ್ ನಮೂನೆಯನ್ನು ಜಿಎಸ್‌ಟಿ ಸಾಮಾನ್ಯ ಜಾಲತಾಣದಿಂದ (www.gst.gov.in) ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ತೆರಿಗೆದಾರರು ನಿಗದಿತ ಪಟ್ಟಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಉಪಯೋಗಿಸಿಕೊಳ್ಳಬಹುದು. ಎಕ್ಸೆಲ್ ಶೀಟ್‌ನಲ್ಲಿರುವ ಮಾಹಿತಿಯನ್ನು ಆಫ್‌ಲೈನ್ ಸಾಧನದ ಸಹಾಯದಿಂದ ಜಿಎಸ್‌ಟಿಎನ್ ಜಾಣತಾಣಕ್ಕೆ ವರ್ಗಾಯಿಸಬಹುದು ಹಾಗೂ ಜೆಎಸ್‌ಓಎನ್ ಫೈಲ್ ಅನ್ನು ಸೃಷ್ಟಿಸಿ ಅದನ್ನು ಜಿಎಸ್‌ಟಿ ಜಾಲತಾಣಕ್ಕೆ ವರ್ಗಾಯಿಸುವಾಗ ಮಾತ್ರ ತೆರಿಗೆ ಪಾವತಿದಾರನಿಗೆ ಅಂತರ್‌ಜಾಲದ ಸಂಪರ್ಕ ಬೇಕಾಗುತ್ತದೆ.




ಕೇವಲ ಬಳಕೆದಾರರಿಗೆ ಮಾತ್ರ ಮಾರಾಟ ಮಾಡುವ ಸಣ್ಣ ತೆರಿಗೆ ಪಾವತಿದಾರರು, ವಹಿವಾಟುಗಳಿಗೆ ಸಂಬಂಧಿಸಿದ ಸರಕು ಪಟ್ಟಿಗಳನ್ನು ಹೊಂದಿಲ್ಲದೆ ಇರುವುದರಿಂದ ಅವರ ತೆರಿಗೆ ಪಾವತಿಯು ಕೇವಲ 5 ತೆರಿಗೆ ದರಗಳನ್ನು ಒಳಗೊಂಡ 5 ಸಾಲಿನ ಸಂಗತಿಗಳನ್ನು ಹೊಂದಿರುತ್ತದೆ. ಇದೇ ರೀತಿ 75 ಲಕ್ಷ ಮತ್ತು ಅದಕ್ಕೂ ಕಡಿಮೆ ವಹಿವಾಟು ಹೊಂದಿರುವ ಎಲ್ಲಾ ತೆರಿಗೆದಾರರು 3 ತಿಂಗಳಿಗೊಮ್ಮೆ ತೆರಿಗೆ ಪಾವತಿಸುವ ಆಯ್ಕೆಯನ್ನು ಹೊಂದಿರುತ್ತಾರೆ ಹಾಗೂ ಆ ವಿಧಾನವೂ ಬಹಳ ಸುಲಭ.

ನಮ್ಮ ಉದ್ದೇಶವು ತೆರಿಗೆ ಪಾವತಿಸುವ ವಿಧಾನವನ್ನು ಸುಲಭ ಮತ್ತು ಸರಳಗೊಳಿಸುವುದಾಗಿದೆ. ವರ್ತಕರು ತಮ್ಮ ವ್ಯವಹಾರಗಳಲ್ಲಿನ ವಿವಿಧ ಖಾತೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಿರ್ವಹಿಸಲು ಎಕ್ಸೆಲ್ ನಮೂನೆ ಅನ್ನು ಬಳಸಿಕೊಳ್ಳಬಹುದು. ತೆರಿಗೆ ಪಾವತಿದಾರನು ತನ್ನ ವಹಿವಾಟಿನ ವಿವರಗಳನ್ನು ವಾರಕ್ಕೊಮ್ಮೆಯೊ ಅಥವಾ ತನಗೆ ಸೂಕ್ಷ್ಮವಾದ ಅವಧಿಗೊಮ್ಮೆಯೊ ಜಿಎಸ್‌ಟಿಎನ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಈ ಸಾಧನವು ಒಂದೇ ಬಾರಿಗೆ 19,000 ದಾಖಲೆಗಳನ್ನು ಎಕ್ಸೆಲ್ ಫೈಲ್‌ನಿಂದ ತೆಗೆದುಕೊಂಡು 5ಎಂಬಿಯ ಇನ್ನೊಂದು ಫೈಲ್ ಆಗಿ ಮಾರ್ಪಡಿಸುತ್ತದೆ.

ಬೇಕಾದರೆ ಈ ಟೂಲ್ ಅನ್ನು ಜಿಎಸ್‌ಟಿಆರ್–1 ಗಾಗಿ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಎಷ್ಟು ಬಾರಿಯಾದರೂ ಉಪಯೋಗಿಸಿಕೊಳ್ಳಬಹುದು. ಈ ರೀತಿಯಾಗಿ ಬಿಟುಬಿ ಮಾರಾಟ ಮಾಡುವ ಹೆಚ್ಚಿನ ಸಂಖ್ಯೆಯ ಮಧ್ಯಮ ಗಾತ್ರದ ತೆರಿಗೆದಾರರು ಸಹ ತೆರಿಗೆ ವಿವರಗಳನ್ನು ಸಲ್ಲಿಸಬಹುದು. ಜಿಎಸ್‌ಟಿಆರ್–1, ಎಕ್ಸೆಲ್ ಟೆಂಪ್ಲೆಟ್ ವರ್ಕ್‌ಬುಕ್ ಅನ್ನು ಅಂತರ್ ಜಾಲವನ್ನು ಸಂಪರ್ಕಿಸಿದೆ. ಆಫ್‌ಲೈಟ್ ವಿಧಾನದಿಂದ, ಜಿಎಸ್‌ಟಿ–1 ತೆರಿಗೆ ವಿವರಗಳನ್ನು ಸಿದ್ಧಪಡಿಸಲು ಬಳಸಿಕೊಳ್ಳಬಹುದು. ಇದು ಅಂತರ್‌ಜಾಲ ಸಂಪರ್ಕ ಸಾಧ್ಯವಿಲ್ಲದ ದೂರದಲ್ಲಿರುವ ತೆರಿಗೆದಾರರಿಗೂ ಸಹ ಅನುಕೂಲವಾಗುತ್ತದೆ.

## ವ್ಯವಹಾರ ಮಾಡುವ ಕಾರ್ಯವನ್ನು ಸುಲಭಗೊಳಿಸುವುದು

ಸುಲಭ ವ್ಯಾಪಕ ಮಾನದಂಡವು ವ್ಯವಹಾರಕ್ಕೆ ಸಂಬಂಧಿಸಿದ ಆರ್ಥಿಕತೆಯ ಮುಕ್ತತೆ ಮತ್ತು ಸಾಧ್ಯತೆಯ ಮುಖ್ಯ ಮಾಪಕವಾಗಿದೆ. ಆದರೆ ಆ ವಿಷಯದಲ್ಲಿ ಭಾರತವು ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಹಿಂದೆ ಬಿದ್ದಿರುವುದು ದುರದೃಷ್ಟಕರವಾಗಿದೆ.

ಜಾಗತಿಕ ಬ್ಯಾಂಕಿನ ಸುಲಭ ವ್ಯಾಪಾರ ವರದಿಯು ಒಬ್ಬ ಉದ್ದಿಮೆದಾರನು ತನ್ನ ವ್ಯವಹಾರವನ್ನು ಪ್ರಾರಂಭಿಸುವ ಮತ್ತು ನಡೆಸುವ ದಾರಿಯಲ್ಲಿ ಎದುರಿಸುವ ಕಷ್ಟಗಳು ಹಾಗೂ ಕಷ್ಟಗಳಿಲ್ಲದಿರುವಿಕೆಯನ್ನು ನಿರ್ಧರಿಸಲು ಹಲವಾರು ಸೂಚಿಗಳನ್ನು ಪರಿಗಣಿಸುತ್ತದೆ. ಇಲ್ಲಿ ಪರಿಗಣಿಸುವ ಮುಖ್ಯ ಸೂಚಿ ಎಂದರೆ ತೆರಿಗೆ ಪಾವತಿಸುವಲ್ಲಿನ ಸುಲಭ ವಿಧಾನ ಜಿಎಸ್‌ಟಿಎನ್‌ನ ಧ್ಯೇಯವು ಕೇವಲ ಅಗತ್ಯ ಕೆಲಸವನ್ನು ಸರಳಗೊಳಿಸುವುದಲ್ಲ.

ಆದರೆ ತೆರಿಗೆ ಪಾವತಿಸುವ ಪ್ರಕ್ರಿಯೆಯನ್ನು ಸರಳಗೊಳಿಸುವುದು ಮತ್ತು ಅನುಕೂಲಕರಗೊಳಿಸುವುದು. ಈ ಸೂಚಿಯೊಂದನ್ನೇ ಸುಧಾರಿಸುವುದರಿಂದ ಸುಲಭ ವ್ಯಾಪಾರ ಮಾನದಂಡಕ್ಕೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ನಮ್ಮ ಸ್ಥಾನವನ್ನು ಗಣನೀಯವಾಗಿ ಸುಧಾರಿಸಿಕೊಳ್ಳಬಹುದು. ಸ್ವಯಂ ಸೇವಾ ವಿಧಾನವಾಗಿ ರೂಪಿಸಲ್ಪಟ್ಟ ಚರ ವ್ಯವಸ್ಥೆಗಳೂ ಅಳವಡಿಸಿಕೊಳ್ಳಬಹುದಾದ ಜಿಎಸ್‌ಟಿಎನ್, ವ್ಯವಹಾರಸ್ಥರನ್ನೂ ಹಾಗೂ ಉದ್ದಿಮೆದಾರರನ್ನೂ, ಅವರ ತೆರಿಗೆ ವಿಧಾನವನ್ನು ಸುಲಭಗೊಳಿಸುವುದರ ಮೂಲಕ ಸಬಲೀಕರಣಗೊಳಿಸುವಲ್ಲಿ ಮುಖ್ಯ ಛಾಪು ವಹಿಸುತ್ತದೆ. ಜಿಎಸ್‌ಟಿಯನ್ನು ಯಶಸ್ವಿಯಾಗಿ ಜಾರಿಗೊಳಿಸಿ, ಜಿಎಸ್‌ಟಿಎನ್ ಮೂಲಕ ಶಕ್ತಿ ಪಡೆದು ವ್ಯವಹಾರವನ್ನು ಸುಲಭಗೊಳಿಸಿ ಆ ಮೂಲಕ ಹೆಚ್ಚಿನ ಲಾಭವನ್ನು ಪಡೆಯಲು ಭಾರತವು ಮುನ್ನೋಡುತ್ತಿದೆ. ಜಿಎಸ್‌ಟಿಯ ಜಾರಿಯು ಭಾರತದ ವ್ಯವಹಾರವನ್ನು ವೃದ್ಧಿಪಡಿಸಿ ಆರ್ಥಿಕತೆಯ ಬೆಳವಣಿಗೆಯನ್ನು ಸಾಧಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ❑

# ಜಿಎಸ್‌ಟಿ ಹಾಗೂ ವ್ಯಾಪಾರ ವಹಿವಾಟು

* ಡ್ಯಾನಿಷ್ ಎ. ಹಶೀಮ್
** ವರ್ಷಾ ಕುಮಾರಿ




ವ್ಯಾಪಾರ ವಹಿವಾಟಿನ ಮೇಲೆ ಜಿಎಸ್‌ಟಿಯ ಧನಾತ್ಮಕ ಪರಿಣಾಮಗಳ ಬಗ್ಗೆ ಯಾವುದೇ ಅನುಮಾನಗಳಿರಲು ಸಾಧ್ಯವಿಲ್ಲ. ವ್ಯಾಪಾರಕ್ಕೆ ಸಂಬಂಧಿಸಿದಂತೆ ನಿರ್ವಹಣಾ ವೆಚ್ಚ, ತೆರಿಗೆ ಹೊರೆ, ಸುಗಮ ಸರಕು ಸಾಗಾಣಿಕೆ ಇವು ಸ್ಪಷ್ಟವಾಗಿ ಎದ್ದುಕಾಣುವಂತಹದ್ದು. ಈ ವ್ಯವಸ್ಥೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಪ್ರಯತ್ನಗಳು ಇನ್ನು ಮುಂದೆ ನಡೆಯಬೇಕಿದೆ.

ಸುಮಾರು 17 ವರ್ಷಗಳ ನಿರಂತರವಾಗಿ ಹಲವು ಸುತ್ತಿನ ವಾದಗಳು, ಚರ್ಚೆಗಳು, ಸಭೆಗಳು, ಸಮಾಲೋಚನೆಗಳು, ವಿರೋಧಗಳೊಂದಿಗಿನ ಸುದೀರ್ಘ ಪಯಣದ ನಂತರ ಅತ್ಯಂತ ಕಠಿಣ ತೆರಿಗೆ ವ್ಯವಸ್ಥೆ ಭಾರತದಲ್ಲಿ ಜಾರಿಗೆ ಬಂದಿದೆ. ಈ ಪಯಣ ಆರಂಭವಾದದ್ದು 2000ರದಲ್ಲಿ. ಆಗಿನ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರವು ನಿಯೋಜಿಸಿದ್ದ ಸಮಿತಿಯು ಜಿಎಸ್‌ಟಿ ಮಾದರಿಯನ್ನು ಪ್ರಸ್ತಾಪಿಸಿತು. ಇದರ ಬೆನ್ನಲ್ಲೇ 2003ರಲ್ಲಿ ಈ ಬಗ್ಗೆ ಕೆಲಸ ಮಾಡಲು ವಿಜಯ್ ಕೇಳ್ಕರ್‌ರವರ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲಾಯಿತು. ಆ ನಂತರ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ನಿರಂತರವಾಗಿ ಚರ್ಚೆಯನ್ನು ಜಾರಿಯಲ್ಲಿಟ್ಟಿತ್ತು.

ಜಿಎಸ್‌ಟಿಯನ್ನು ಜಾರಿಗೆ ತರುವುದರೊಂದಿಗೆ ಭಾರತವು ಸುಮಾರು 160 ದೇಶಗಳ ಸಾಲಿಗೆ ಸೇರಿತು. ಜಿಎಸ್‌ಟಿ/ವ್ಯಾಟ್ ಜಾರಿಗೆ ತಂದಿರುವ ಜರ್ಮನಿ, ಇಟಲಿ, ಯುಕೆ, ದಕ್ಷಿಣ ಕೊರಿಯಾ, ಜಪಾನ್, ಕೆನಡ, ಆಸ್ಟ್ರೇಲಿಯ, ರಶಿಯಾ, ಚೀನಾ, ಸಿಂಗಪೂರ್ ಮತ್ತು ಮಲೇಷ್ಯಾ ದೇಶಗಳ ಸಾಲಿಗೆ ಸೇರಿತು. ತೆರಿಗೆ ವಂಚನೆಯನ್ನು ತಡೆಯಲು ಜಿಎಸ್‌ಟಿಯನ್ನು 1954ರಷ್ಟು ಹಿಂದೆಯೇ ಫ್ರಾನ್ಸ್ ಅಳವಡಿಸಿಕೊಂಡಿತು. ಈ ತೆರಿಗೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ ಭಾರತವು ದೇಶದ ವ್ಯಾಪಾರ ವಹಿವಾಟನ್ನು ಸುಗುಮಗೊಳಿಸುವುದರೊಂದಿಗೆ ರ್‍ಯಾಂಕಿಂಗ್ ಪಟ್ಟಿಯಲ್ಲಿ ಮೇಲಕ್ಕೇರಿದೆ. ವಿಶ್ವ ಬ್ಯಾಂಕಿನ 2017ರ ವ್ಯಾಪಾರಕ್ಕೆ ಸಂಬಂಧಿಸಿದ ವರದಿಯಲ್ಲಿ 190 ದೇಶಗಳಲ್ಲಿ ಭಾರತವು ಪ್ರಸ್ತುತ 130ನೇ ಸ್ಥಾನದಲ್ಲಿದೆ.

### ಜಿಎಸ್‌ಟಿಯ ಅರ್ಥೈಕೆ

ಜಿಎಸ್‌ಟಿ ಎನ್ನುವುದು ಗಮ್ಯಾಧಾರಿತ ಏಕರೂಪ ತೆರಿಗೆ ವ್ಯವಸ್ಥೆ. ತಯಾರಕರಿಂದ ಗ್ರಾಹಕರಿಗೆ ಉತ್ಪನ್ನಗಳ ಪೂರೈಕೆಯಲ್ಲಿ ಹಲವು ಬಗೆಯ ತೆರಿಗೆಗಳನ್ನು ಹೇರಲಾಗುತ್ತಿತ್ತು. ಇದನ್ನು ಜಿಎಸ್‌ಟಿ ಬದಲಿಸಿ ಇಡಿ ದೇಶದ ಮಾರುಕಟ್ಟೆಯನ್ನು ಒಗ್ಗೂಡಿಸಿದೆ (ಕೋಷ್ಟಕ –1). ಹಲವು ಉಪಯೋಗಗಳೊಂದಿಗೆ ಜಿಎಸ್‌ಟಿಯಿಂದಾಗಿ ವಹಿವಾಟಿನಲ್ಲಿನ ತೆರಿಗೆ ಸಂಕೀರ್ಣತೆಯನ್ನು ಸುಗಮಗೊಳಿಸಲಿದೆ. ತೆರಿಗೆಯ ಮೇಲೆ ತೆರಿಗೆಯನ್ನು ಹಾಕುವ ಹೊರೆಯನ್ನು ಕಡಿಮೆಮಾಡಲಿದೆ. ತೆರಿಗೆ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲಿದೆ. ತೆರಿಗೆ ವಂಚನೆಯನ್ನು ತಪ್ಪಿಸಿ, ಆ ಮೂಲಕ ತೆರಿಗೆಯ ಮೂಲಕ ಉಂಟಾಗುವ ಆದಾಯವನ್ನು ಹೆಚ್ಚಿಸಲಿದೆ. ಕೈಗಾರಿಕಾ ಉತ್ಪನ್ನಗಳಿಗೆ ಈ ಹಿಂದೆ ಪಾವತಿಸುತ್ತಿದ್ದ 25% – 28% ತೆರಿಗೆಯನ್ನು 18%ಕ್ಕೆ ತಗ್ಗಿಸಿದೆ.

ಜಿಎಸ್‌ಟಿ 17 ಬಗೆಯ (8 ಕೇಂದ್ರ + 9 ರಾಜ್ಯ) ಪರೋಕ್ಷ ತೆರಿಗೆಗಳನ್ನು ತಪ್ಪಿಸಿದೆ.




* ಮುಖ್ಯಸ್ಥರು ** ಸಲಹಾಕಾರರು, ಸುಲಭ ವ್ಯಾಪಾರ ಮತ್ತು ಆರ್ಥಿಕ ವ್ಯವಹಾರ, ಭಾರತೀಯ ಕೈಗಾರಿಕಾ ಒಕ್ಕೂಟ.
* E-mail : Danish_hashim@yahoo.com ** varshak.kumari44@gmail.com

23 ಕೇಂದ್ರ, ರಾಜ್ಯಗಳ ಸೆಸ್‌ಗಳನ್ನು ತಪ್ಪಿಸಿದೆ. ತೆರಿಗೆ ಪಾವತಿಯನ್ನು ಸರಳಗೊಳಿಸಿದೆ. ತಯಾರಕರಿಂದ ಗ್ರಾಹಕರವರೆಗಿನ ಸರಕು ಮತ್ತು ಸೇವಾ ಸೇವೆಯನ್ನು ಹೆಚ್ಚು ತರ್ಕಬದ್ಧವಾಗಿಸಿದೆ. ಜಿಎಸ್‌ಟಿಯು ಸಿಜಿಎಸ್‌ಟಿ ಹಾಗೂ ಎಸ್‌ಜಿಎಸ್‌ಟಿಯನ್ನು ಒಳಗೊಂಡಿದೆ. ಈ ಮೊದಲು ಈ ತೆರಿಗೆಯನ್ನು ಕೇಂದ್ರ, ರಾಜ್ಯ ಸರ್ಕಾರಗಳಿಗೆ ಬೇರೆಬೇರೆಯಾಗಿ ಪಾವತಿಸಬೇಕಿತ್ತು. ಗ್ರಾಹಕನ ಮೇಲಿನ ತೆರಿಗೆಯ ಹೊರೆಯನ್ನು ಇದು ತಗ್ಗಿಸಿದೆ. ಅಲ್ಲದೆ ಇದು ವಸ್ತುಗಳ ಬೆಲೆಯನ್ನು ತಗ್ಗಿಸಬಹುದೆಂದು ನಿರೀಕ್ಷಿಸಲಾಗಿದೆ. ಈ ಹಿಂದೆ ತೆರಿಗೆ ಮೇಲೆ ತೆರಿಗೆಯ ಹೊರೆಯಿದ್ದು ತಯಾರಿಕೆಯ ವೆಚ್ಚ ಹೆಚ್ಚಾಗುತ್ತಿತ್ತು. ಉದಾಹರಣೆಗೆ ತಯಾರಕರು 100ರೂಗಳ ಶರ್ಟೊಂದಕ್ಕೆ 12ರೂಪಾಯಿ ಸೆಂಟ್ರಲ್ ಎಕ್ಸೈಸ್ ಪಾವತಿಸಬೇಕಿತ್ತು. ಅದರ ನಂತರ ರಾಜ್ಯಗಳು ವ್ಯಾಟ್ ಹೆಸರಿನಲ್ಲಿ 15% 100ರೂಗಳ ಬದಲಿಗೆ 112 ರೂ. ಗಳಿಗೆ ತೆರಿಗೆಯನ್ನು ಹಾಕುತ್ತಿದ್ದವು.

ರಾಜ್ಯಗಳ ನಡುವೆ ಸರಕು ಸೇವೆಗಳ ಮೇಲೆ ಹೇರಲಾಗುತ್ತಿದ್ದ ತೆರಿಗೆಯನ್ನು ಜಿಎಸ್‌ಟಿ ತೆಗೆದುಹಾಕಿದ್ದು ಅದರ ಬದಲಿಗೆ ಐಜಿಎಸ್‌ಟಿಯನ್ನು ಪರಿಚಯಿಸಿದೆ. ಇದರಿಂದಾಗಿ ರಾಜ್ಯಗಳ ನಡುವೆ ಎರಡು ಕಡೆಗಳಲ್ಲಿ ಕಟ್ಟಬೇಕಿದ್ದ ತೆರಿಗೆಯ ಹೊರೆಯನ್ನು ತಪ್ಪಿಸಿದೆ. ಇದರಿಂದಾಗಿ ಚೆಕ್‌ಪೋಸ್ಟುಗಳಲ್ಲಿ ಟ್ರಕ್‌ಗಳು ಹೆಚ್ಚು ಸುಗುಮವಾಗಿ ಹಾದುಹೋಗುವಂತಾಗಿದ್ದು ಅಲ್ಲಿನ ವಹಿವಾಟಿನ ಸಮಯವನ್ನು ಕಡಿಮೆಗೊಳಿಸಿದೆ.

ಜಿಎಸ್‌ಟಿ ನಾಲ್ಕು ಹಂತದ ಅಂದರೆ ಶೇಕಡ 5, 12, 18 ಹಾಗೂ 28ರ ತೆರಿಗೆ ವ್ಯವಸ್ಥೆಯನ್ನು ಒಳಗೊಂಡಿದ್ದು ಅಗತ್ಯ ವಸ್ತುಗಳಿಗೆ ಕಡಿಮೆ ದರ ಮತ್ತು ಐಷಾರಮಿ ಹಾಗೂ ಅಗತ್ಯೇತರ ವಸ್ತುಗಳಿಗೆ ರಾಜ್ಯವು ಹೆಚ್ಚಿನ ತೆರಿಗೆಯನ್ನು ವಿಧಿಸಬಹುದಾಗಿದೆ.



**ಕೋಷ್ಟಕ 1 : ಜಿಎಸ್‌ಟಿಯಡಿಯಿಂದ ರದ್ದಾದ ಪರೋಕ್ಷ ತೆರಿಗೆಗಳು**

| ಕ್ರ.ಸಂ. | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರಗಳು |
|---|---|---|
| 1 | ಕೇಂದ್ರ ಅಬಕಾರಿ ಸುಂಕ | ರಾಜ್ಯ ವ್ಯಾಟ್ (ಮೌಲ್ಯವರ್ಧಿತ ತೆರಿಗೆ) |
| 2 | ಅಬಕಾರಿ ಸುಂಕ (ವೈದ್ಯಕೀಯ ಹಾಗೂ ಶೌಚಾಲಯ ಸಂಬಂಧಿ) | ಕೇಂದ್ರ ಮಾರಾಟ ತೆರಿಗೆ |
| 3 | ಹೆಚ್ಚುವರಿ ಅಬಕಾರಿ ಸುಂಕ (ವಿಶೇಷ ವಸ್ತುಗಳ ಮೇಲೆ) | ಐಷಾರಾಮಿ ತೆರಿಗೆ |
| 4 | ಹೆಚ್ಚುವರಿ ಅಬಕಾರಿ ಸುಂಕ (ಜವಳಿ ಹಾಗೂ ಜವಳಿ ಪದಾರ್ಥಗಳು) | ಪ್ರವೇಶ ತೆರಿಗೆ (ಎಲ್ಲ ವಿಧಗಳು) |
| 5 | ಹೆಚ್ಚುವರಿ ಸೀಮಾ ಸುಂಕ | ಮನರಂಜನಾ ತೆರಿಗೆ (ಸ್ಥಳೀಯ ಸಂಸ್ಥೆ ತೆರಿಗೆ ಬಿಟ್ಟು) |
| 6 | ವಿಶೇಷ ಹೆಚ್ಚುವರಿ ಸೀಮಾ ಸುಂಕ | ಜಾಹಿರಾತು ತೆರಿಗೆ |
| 7 | ಸೇವಾ ತೆರಿಗೆ | ಖರೀದಿ ತೆರಿಗೆ |
| 8 | ಪೂರೈಕೆಗೆ ಸಂಬಂಧಿಸಿದಂತೆ ಸರಕು ಮತ್ತು ಸೇವೆಗಳ ಮೇಲೆ ಕೇಂದ್ರ ಸರ್ಚಾರ್ಜ್ ಮತ್ತು ಸೆಸ್ | ಲಾಟರಿ, ಬೆಟ್ಟಿಂಗ್, ಜೂಜು ತೆರಿಗೆ |
| 9 | ------ | ಪೂರೈಕೆಗೆ ಸಂಬಂಧಿಸಿದಂತೆ ಸರಕು ಮತ್ತು ಸೇವೆಗಳ ಮೇಲೆ ರಾಜ್ಯ ಸರ್ಚಾರ್ಜ್ ಮತ್ತು ಸೆಸ್ |

ಮೂಲ : ಸಿಬಿಇಸಿ

ಇದರಿಂದ ಪರೋಕ್ಷ ತೆರಿಗೆ ರದ್ಧತಿಯಿಂದಾದ ನಷ್ಟವನ್ನು ಸರಿದೂಗಿಸಬಹುದಾಗಿದೆ. ಗ್ರಾಹಕ ದರ ಸೂಚ್ಯಂಕ ಪಟ್ಟಿಯಲ್ಲಿರುವ 30–35% ವಸ್ತುಗಳು ವಿನಾಯತಿ ವರ್ಗದಲ್ಲಿರುವುದರಿಂದ ಅಗತ್ಯ ವಸ್ತುಗಳ ದರವನ್ನು ನಿಯಂತ್ರಣದಲ್ಲಿರುಸುತ್ತದೆ. ರಫ್ತು ಮಾಡುವ ಸರಕು ಮತ್ತು ಸೇವೆಗಳ ಮೇಲೆ ಜಿಎಸ್‌ಟಿಯನ್ನು ಶೂನ್ಯಗೊಳಿಸಲಾಗಿದೆ. ಆದಾಯ ಸಂಗ್ರಹದಲ್ಲಿ ಕೇಂದ್ರ ಮತ್ತು ರಾಜ್ಯಗಳ ಮೇಲೆ ಪ್ರತಿಕೂಲ ಪರಿಣಾಮಗಳುಂಟಾಗದಂತೆ ಎಚ್ಚರ ವಹಿಸಲಾಗಿದೆ. ಜಿಎಸ್‌ಟಿಯ ಅಡಿಯಲ್ಲಿ ಸುಮಾರು 60% ವಸ್ತುಗಳ ತೆರಿಗೆ 18 –20% ಇರಲಿದೆ. 20% ವಸ್ತುಗಳ ತೆರಿಗೆ 28% ಇರಲಿದೆ. ಇದರಲ್ಲಿ ಐಷಾರಮಿ ಹಾಗೂ ಇತರ ಅಗತ್ಯೇತರ ವಸ್ತುಗಳನ್ನು ಬಿಟ್ಟು ಚಾಕೊಲೇಟುಗಳು, ಚೂಯಿಂಗ್ ಗಮ್, ಶಾಂಪೂ, ಡಿಯೊಡರಂಟ್ಸ್, ಪೈಂಟ್ ಇತ್ಯಾದಿಗಳು ಸೇರಿವೆ. ವಿದ್ಯುತ್, ಸ್ಟಾಂಪ್, ಅಬಕಾರಿ ಸುಂಕಗಳು ಮತ್ತು ಮದ್ಯ, ಪೆಟ್ರೋಲಿಯಂ ಪದಾರ್ಥಗಳ ಮೇಲಿನ ವ್ಯಾಟ್ ಸದ್ಯಕ್ಕೆ ಜಿಎಸ್‌ಟಿಯಿಂದ ಹೊರಗಿದೆ. ವಿನಾಯ್ತಿ ಸರಕುಗಳ ವ್ಯಾಪಾರ ಅಥವ ವಾರ್ಷಿಕ 20 ಲಕ್ಷಕ್ಕಿಂತ ಕಡಿಮೆ ವಹಿವಾಟು ನಡೆಸುತ್ತಿದ್ದು ಅಂತಾರಾಜ್ಯ ವಹಿವಾಟು ನಡೆಸದೆ ಇದ್ದಲ್ಲಿ ಜಿಎಸ್‌ಟಿ ರಿಟರ್ನ್ ಇಂದ ವಿನಾಯ್ತಿ ನೀಡಲಾಗಿದೆ.

ಜಿಎಸ್‌ಟಿ ಒಟ್ಟಾರೆಯಾಗಿ ಮುಖ್ಯ ವಲಯಗಳು/ ದರಗಳ ಮೇಲೆ (ಗ್ರಾಹಕರ ವಸ್ತುಗಳು, ಕಟ್ಟಡ ಸಾಮಗ್ರಿಗಳು ಮತ್ತು ಎಫ್‌ಎಂಸಿಜಿ (ಪ್ಯಾಕ್ ಮಾಡಿದ ವಸ್ತುಗಳು) ಕನಿಷ್ಠ ಪರಿಣಾಮವನ್ನು ಬೀರಲಿದೆ. ಕೆಲವೇ ಸಮಯದಲ್ಲಿ ಅವುಗಳ ಮೇಲಿನ ಕರಭಾರವು ತಗ್ಗಬಹುದು. ಈ ಮೊದಲು ಈ ಪದಾರ್ಥಗಳ ಮೇಲಿನ ವ್ಯಾಟ್‌ನಿಂದಾಗಿ ಇವುಗಳ ಬೆಲೆಯು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿತ್ತು. ಹೆಚ್ಚು ಮೌಲ್ಯದ ಅಂತಾರಾಜ್ಯ ವಹಿವಾಟಿನ ಮೇಲಿದ್ದ ಸಿಎಸ್‌ಟಿಯ ತೆರಿಗೆಯ ಹೊರೆ 2%ನಷ್ಟು ಕಡಿಮೆಯಾಗಲಿದೆ. ಆಟೋಮೊಬೈಲ್ ವಲಯದ ತೆರಿಗೆಯು

ಈ ಹಿಂದೆ 50% ಇದ್ದದ್ದು 43%ಗೆ ತಗ್ಗಿದೆ (28% ಜಿಎಸ್‌ಟಿ + 15% ಸೆಸ್). ಒಟ್ಟಾರೆ ಆಟೊಮೊಬೈಲ್ ಹಾಗೂ ಎಫ್‌ಎಂಸಿಜಿ ವಲಯಗಳು ಜಿಎಸ್‌ಟಿಯಿಂದಾಗಿ ದರಗಳು ಕಡಿಮೆಯಾಗಿರುವುದಕ್ಕೆ ಸಾಕ್ಷಿಯಾಗಿವೆ.

**ವಹಿವಾಟಿನ ಮೇಲೆ ಜಿಎಸ್‌ಟಿ ಪರಿಣಾಮ**

ಪರೋಕ್ಷ ತೆರಿಗೆಗಳಿಂದಾಗಿ ಭಾರತದಲ್ಲಿ ವ್ಯಾಪಾರಕ್ಕೆ ಆಗುತ್ತಿರುವ ತೊಂದರೆಗಳನ್ನು ಕುರಿತು ಸಿಐಐ– ಕೆಪಿಎಂಜಿ (2014) ಅಧ್ಯಯನ ಮಾಡಿತು. ಅದರನ್ವಯ ಕಂಪನಿಗಳು ಹೆಚ್ಚಾಗಿ ವ್ಯಾಟ್ ನೊಂದಣಿ, ಅಬಕಾರಿ, ಕಸ್ಟಮ್ಸ್ ಮತ್ತು ಸೇವಾ ತೆರಿಗೆ; ಸರಕು ಸಾಗಾಣಿಕೆ; ತೆರಿಗೆ ಅಧಿಕಾರಿಗಳು; ತೆರಿಗೆ ಸಂಬಂಧಿ ಸಮಸ್ಯೆ ಪರಿಹಾರ; ತೆರಿಗೆ ಪ್ರೋತ್ಸಾಹಕಗಳು ಹಾಗೂ ಸಕಾಲಕ್ಕೆ ತೆರಿಗೆ ಮರುಪಾವತಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಹಿಂದೆ ಪ್ರತಿ ರಾಜ್ಯದಲ್ಲೂ ಭಿನ್ನ ತೆರಿಗೆ ವ್ಯವಸ್ಥೆಯಿತ್ತು. ಹಾಗಾಗಿ ಹೆಚ್ಚಿನ ತೆರಿಗೆಗಳಿದ್ದ ರಾಜ್ಯಗಳಲ್ಲಿ ವಹಿವಾಟು ನಡೆಸುವುದು ಕಷ್ಟವಾಗುತ್ತಿತ್ತು. ಅಂತಾರಾಜ್ಯಗಳ ಸರಕು ಸಾಗಾಣಿಕೆ ನಡೆಸಬೇಕಿದ್ದಲ್ಲಿ ಎರಡೂ ರಾಜ್ಯಗಳಿಗೂ ಸುಂಕ ಪಾವತಿಸಬೇಕಿತ್ತು. ಇದರಿಂದ ವೆಚ್ಚ ಹೆಚ್ಚಾಗುತ್ತಿತ್ತು. ಎಲ್ಲ ರಾಜ್ಯಗಳಲ್ಲೂ ಏಕರೂಪ ತೆರಿಗೆ ವ್ಯವಸ್ಥೆ ಇಲ್ಲದಿದ್ದರಿಂದ ವ್ಯಾಪಾರ ಸಂಬಂಧಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಷ್ಟವಾಗುತ್ತಿತ್ತು. ಸರಕು ಮತ್ತು ಸೇವಾ ತೆರಿಗೆಯಲ್ಲಿ ಸ್ಪಷ್ಟತೆ ಇಲ್ಲದ್ದರಿಂದ ಹಿಂದೆ ಪಾವತಿಸಲಾದ ತೆರಿಗೆಗೆ ವಿನಾಯತಿ ಇದೆಯೊ ಇಲ್ಲವೊ ಅನ್ನುವುದು ಗೊಂದಲವಾಗಿದ್ದು ತೆರಿಗೆಯ ಮೇಲೆ ತೆರಿಗೆ ಪಾವತಿಸಬೇಕಾಗಿತ್ತು.

ಜಿಎಸ್‌ಟಿ ತೆರಿಗೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದರಿಂದ ಈ ಎಲ್ಲ ಸಮಸ್ಯೆಗಳು ಪರಿಹಾರವಾಗಲಿವೆ. ಅಲ್ಲದೆ ತೆರಿಗೆಯಲ್ಲಿನ ಸಂಕೀರ್ಣತೆಗಳು ಸರಳವಾಗಲಿವೆ, ಅಂತಾರಾಜ್ಯಗಳ ನಡುವಿನ ಸರಕು ಸಾಗಾಣಿಕೆ ಸರಾಗವಾಗಲಿದೆ, ತೆರಿಗೆಯ ಹೊರೆ ತಗ್ಗಲಿದ್ದು ತೆರಿಗೆ ಮರುಪಾವತಿ ಇನ್ನಿತರ ಅನುಕೂಲಗಳು ಆಗಲಿದೆ. ಇದರಿಂದಾಗಿ ವಿಶ್ವಬ್ಯಾಂಕಿನ ಅತಿ ಹೆಚ್ಚು ತೆರಿಗೆ ಪಾವತಿ ಮಾಡುವ 190 ದೇಶಗಳ ಪಟ್ಟಿಯಲ್ಲಿ ಭಾರತವು 172ನೇ ಸ್ಥಾನದಿಂದ ಮೇಲೇರಲಿದೆ.



**ಜಿಎಸ್‌ಟಿಯಿಂದ ವಹಿವಾಟಿಗೆ ಆಗುವ ಮುಖ್ಯ ಲಾಭಗಳು ಹೀಗಿವೆ:**

**• ಅನುಸರಿಸಲು ಸುಲಭ**

ಈ ಹಿಂದಿನ ತೆರಿಗೆ ವ್ಯವಸ್ಥೆಯಲ್ಲಿ ವ್ಯಾಪಾರ ನಡೆಸುವವರು ಅನೇಕ ತೆರಿಗೆಗಳಿಗೆ ಹಲವು ರಿಟರ್ನ್‌ಗಳನ್ನು ಸಲ್ಲಿಸಬೇಕಿತ್ತು. ಹಲವು ಅಧಿಕಾರಿಶಾಹಿವರ್ಗಗಳ ನಿಧಾನ ಪ್ರಕ್ರಿಯೆಯಿಂದ ಪರೋಕ್ಷ ತೆರಿಗೆಗಳ ಹೊರೆಯು ಹೆಚ್ಚಿತ್ತು. ಜಿಎಸ್‌ಟಿಯು ಏಕರೂಪ ತೆರಿಗೆಯಡಿ ಎಲ್ಲ ಪರೋಕ್ಷ ತೆರಿಗೆಗಳನ್ನು ಒಂದು ಮಾಡಿ ವ್ಯಾಪಾರವನ್ನು ಸರಳಗೊಳಿಸಿದೆ. ಈ ತೆರಿಗೆ ವ್ಯವಸ್ಥೆಗಾಗಿ ರೂಪಿತವಾಗಿರುವ ಜಿಎಸ್‌ಟಿಎನ್ ಸಂಪರ್ಕಜಾಲವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒಗ್ಗೂಡಿಸಿ ಈ ವ್ಯವಸ್ಥೆಯ ಬೆನ್ನೆಲುಬಾಗಿದೆ. ಇದರಲ್ಲಿ ತೆರಿಗೆ ಪಾವತಿದಾರರು ದೇಶದ ಯಾವಭಾಗದಿಂದಲಾದರೂ ಅಂತರ್ಜಾಲದ ಮೂಲಕ ಅಧಿಕಾರಿಗಳ ಹಸ್ತಕ್ಷೇಪದ ಹಂಗಿಲ್ಲದೆ ನೊಂದಣಿ, ಪಾವತಿ ಮತ್ತು ಮರುಪಾವತಿಗಳನ್ನು ಮಾಡಿಕೊಳ್ಳಬಹುದು. ಇದರಿಂದಾಗಿ ತೆರಿಗೆ ವಹಿವಾಟು ಸುಲಭ, ಪಾರದರ್ಶಕ, ಶೀಘ್ರ ಮತ್ತು ಕಾಗದ ರಹಿತವಾಗಲಿದೆ.

**• ಅಂತಾರಾಜ್ಯ ಸರಕು ಸಾಗಾಣಿಕೆ ಸುಲಭವಾಗಲಿದೆ**

ಈ ಹಿಂದೆ ಸರಕು ಸಾಗಣೆಯ ವಾಹನಗಳು ಪ್ರತಿ ರಾಜ್ಯದ ಚೆಕ್‌ಪೋಸ್ಟ್‌ನಲ್ಲಿ ಸುಂಕ ಪಾವತಿಸಬೇಕಾಗಿದ್ದರಿಂದ ಹೆಚ್ಚು ಸಮಯ ವ್ಯರ್ಥವಾಗುತ್ತಿತ್ತು. ಜಿಎಸ್‌ಟಿಯು ಪ್ರವೇಶ ತೆರಿಗೆಯ ಮತ್ತು ಸುಂಕವನ್ನು ತನ್ನಡಿಗೆ ತೆಗೆದುಕೊಂಡಿರುವುದರಿಂದ ಸಮಯ ಮತ್ತು ಹಣ ಎರಡೂ ವ್ಯಾಪಾರಿಗಳಿಗೆ/ ಗ್ರಾಹಕರಿಗೆ ಉಳಿಯಿತು. ಜಿಎಸ್‌ಟಿ ಜಾರಿಯಾದ ತರುವಾಯ ಎಲ್ಲ ರಾಜ್ಯಗಳಲ್ಲಿನ ಚೆಕ್‌ಪೋಸ್ಟ್‌ಗಳು ರದ್ದಾಗಿ ಸರಕು ಸಾಗಣೆ ವಾಹನಗಳ ಪಯಣದ ಸಮಯ ಉಳಿತಾಯವಾಗಿದೆ.

**• ಏಕರೂಪ ಬಳಕೆ ವ್ಯವಸ್ಥೆ**

ಜಿಎಸ್‌ಟಿಎನ್ ತೆರಿಗೆ ಪಾವತಿದಾರರಿಗೆ ಹಾಗೂ ತೆರಿಗೆ ಅಧಿಕಾರಿಗಳಿಗೆ ಏಕರೂಪ ಬಳಕೆ ವ್ಯವಸ್ಥೆ ಹೊಂದಿರುವ ವೇದಿಕೆಯನ್ನು ಒದಗಿಸಿದ್ದು ಯಾವುದೇ ಭಿನ್ನಾಭಿಪ್ರಾಯಗಳಿಗೆ ಅವಕಾಶವಿಲ್ಲ. ಸರಬರಾಜುದಾರರು, ಗ್ರಾಹಕರು ಮತ್ತು ತೆರಿಗೆ ಅಧಿಕಾರಿಗಳು ಎಲ್ಲರೂ ಕೂಡ ಅಗತ್ಯ ಮಾಹಿತಿಯನ್ನು ಏಕರೀತಿಯಲ್ಲಿ ಪಡೆದುಕೊಳ್ಳಬಹುದಾಗಿದ್ದು ಪ್ರತಿಯೊಬ್ಬರು ಇನ್‌ವಾಯ್ಸ್(ಸರಕುಪಟ್ಟಿ) ಗಳನ್ನು ಹೋಲಿಸಿನೋಡಿಕೊಳ್ಳುವ ಅವಕಾಶವನ್ನು ಒದಗಿಸಲಾಗಿದೆ. ಅಲ್ಲದೆ ತೆರಿಗೆ ಪಾವತಿ ಸಂಪೂರ್ಣವಾಗಬೇಕಾದರೆ ಎಲ್ಲರ ಪಟ್ಟಿಗಳು ಹೊಂದಾಣಿಕೆಯಾಗಬೇಕು. ಇದರಿಂದಾಗಿ ತೆರಿಗೆಯನ್ನು ಸಕಾಲದಲ್ಲಿ ಪಾವತಿಸುವ ಹೊಣೆ ಗ್ರಾಹಕ/ ಸರಬರಾಜುದಾರರದಾಗಿರುತ್ತದೆ.

**• ತೆರಿಗೆ ಹೊರೆ ಇಳಿಕೆ**

ಹಿಂದಿನ ತೆರಿಗೆ ವ್ಯವಸ್ಥೆಯಲ್ಲಿದ್ದಂತೆ ಇಲ್ಲಿ ತೆರಿಗೆ ಮೇಲೆ ತೆರಿಗೆ ವಿಧಿಸಲಾಗುವುದಿಲ್ಲ. ಇದರಿಂದಾಗಿ ಕಚ್ಚಾ ಪದಾರ್ಥಗಳ ಮೇಲಿನ ತೆರಿಗೆ ಕಡಿಮೆಯಾಗಲಿದೆ. ಈಗ ಉತ್ಪಾದಕ ಒಂದು ಹಂತದಲ್ಲಿ ಮಾತ್ರ ತೆರಿಗೆ ಪಾವತಿಸಬೇಕಾಗುವುದರಿಂದ ಅವನ ಮೇಲೆ ಹೊರೆ ತಗ್ಗಲಿದೆ.

**• ಏಕರೂಪ ಮಾರುಕಟ್ಟೆಯನ್ನು ರೂಪಿಸುತ್ತದೆ**

ಜಿಎಸ್‌ಟಿಯಿಂದಾಗಿ ಉತ್ಪಾದಕರು ದೇಶದ ಯಾವ ಭಾಗದಲ್ಲಿ ಬೇಕಾದರೂ ತಮ್ಮ ವಹಿವಾಟನ್ನು ನಡೆಸಬಹುದಾಗಿದೆ. ನೋಂದಣಿಯನ್ನು ಕೇಂದ್ರೀಕೃತಗೊಳಿಸಿರುವುದರಿಂದ ವಹಿವಾಟನ್ನು ರಾಜ್ಯಗಳ ನಡುವೆ ವಿಸ್ತರಿಸಲು ಅನುಕೂಲವಾಗಿದೆ.

**• ರಫ್ತು ವಲಯದಲ್ಲಿ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಿದೆ**

ಹಿಂದಿನ ತೆರಿಗೆ ನೀತಿಯಲ್ಲಿ ರಫ್ತು ಮಾಡುವ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಪಾವತಿಸಬೇಕಾಗಿದ್ದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಭಾರತವು ಸ್ಪರ್ಧಿಸಲು ಕಷ್ಟವಾಗುತ್ತಿತ್ತು. ಜಿಎಸ್‌ಟಿ ಈ ತೊಂದರೆಯನ್ನು ತಪ್ಪಿಸಿದ್ದು ರಫ್ತು ಉದ್ಯಮದ ಬೆಳವಣಿಗೆಗೆ ಇದು ಸಹಕಾರಿಯಾಗಲಿದೆ. ರಫ್ತು ಉದ್ಯಮದ



ಮೇಲಿನ ತೆರಿಗೆ ತಗ್ಗಿದಾಗ ದೇಶದ ಆರ್ಥಿಕತೆ ಉತ್ತಮಗೊಂಡ ಉದಾಹರಣೆಯನ್ನು ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಕಾಣಬಹುದಾಗಿದೆ. 1986ರಲ್ಲಿ ನ್ಯೂಜಿಲ್ಯಾಂಡಿನಲ್ಲಿ ಜಿಎಸ್‌ಟಿ ಅಳವಡಿಸಿದ ನಂತರ ಅದರ ಮುಂದಿನವರ್ಷದಲ್ಲೇ ರಫ್ತು 22% ಹೆಚ್ಚಿತ್ತು.

**• ಸಂಪನ್ಮೂಲಗಳ ಹಂಚಿಕೆಯಲ್ಲಿದ್ದ ತೊಂದರೆ ನಿವಾರಣೆ**

ವಹಿವಾಟುಗಳ ವಿಸ್ತರಣೆಯಲ್ಲಿ ತೆರಿಗೆ ಹಾಗೂ ಸಂಪನ್ಮೂಲಗಳ ವಿಷಯದಲ್ಲಿ ಪ್ರತಿ ರಾಜ್ಯಗಳಲ್ಲೂ ಸ್ಪರ್ಧಾತ್ಮಕತೆಯಿದ್ದು ವ್ಯಾಪಾರ ಕೆಲವೇ ಕಡೆ ಕೇಂದ್ರಿತವಾಗುವ ಸಾಧ್ಯತೆಯಿರುತ್ತದೆ. ಜಿಎಸ್‌ಟಿ ಇದನ್ನು ನಿವಾರಿಸಿ ದೇಶದ ಯಾವುದೇ ಭಾಗದಲ್ಲಾದರೂ ವಹಿವಾಟು ನಡೆಸುವ ಅವಕಾಶವನ್ನು ಒದಗಿಸಿದೆ.

**• ಸಣ್ಣ ಮತ್ತು ಮಧ್ಯಮ ಉದ್ದಿಮೆದಾರರಿಗೆ ವಹಿವಾಟು ನಡೆಸಲು ಅನುಕೂಲ.**

ಹಿಂದಿನ ತೆರಿಗೆ ವ್ಯವಸ್ಥೆಯಲ್ಲಿ ಸಣ್ಣ ಮತ್ತು ಮಧ್ಯಮ ಉದ್ದೆಮೆದಾರರ ವಾರ್ಷಿಕ ವಹಿವಾಟು 5 ಲಕ್ಷವಿದ್ದವರು ವ್ಯಾಟಿಗೆ ನೊಂದಣಿ ಮಾಡಿಸಬೇಕಿತ್ತು

ಅಂತರ್ ರಾಜ್ಯ ವಹಿವಾಟನ್ನು ನಡೆಸುತ್ತಿದ್ದಲ್ಲಿ ಭಿನ್ನ ತೆರಿಗೆಗಳನ್ನು ಪಾವತಿಸಬೇಕಿತ್ತು. ತೆರಿಗೆ ಪಾವತಿಗಾಗಿಯೇ ನುರಿತ ಸಿಬ್ಬಂದಿಯ ನೆರವು ಪಡೆಯಾಗಬೇಕಾಗುತ್ತಿತ್ತು. ಇದು ಉದ್ದಿಮೆದಾರರಿಗೆ ಹೊರೆಯಾಗುತ್ತಿತ್ತು. ಜಿಎಸ್‌ಟಿಯ ಏಕರೂಪ ವ್ಯವಸ್ಥೆಯಡಿಯಲ್ಲಿ ಆನ್‌ಲೈನ್ ಪಾವತಿ, ಮರುಪಾವತಿ, ನೋಂದಣಿ ವ್ಯವಸ್ಥೆ ಮಾಡಿರುವುದರಿಂದ ತೆರಿಗೆ ವ್ಯವಹಾರವು ಸುಗುಮವಾಗಿದೆ. ಇದರಿಂದಾಗಿ ಈ ಉದ್ದಿಮೆದಾರರಿಗೂ ಅನುಕೂಲವಾಗಲಿದೆ.

**ಕ್ರಮಿಸಬೇಕಾದ ಹಾದಿ**

ಜಿಎಸ್‌ಟಿಯ ವಾಗ್ದಾನ – ವ್ಯಾಪಾರ ವಹಿವಾಟು ಸುಗಮಗೊಳಿಸುವುದು, ಉತ್ಪಾದಕ ಹಾಗೂ ಗ್ರಾಹಕರ ಮೇಲಿನ ತೆರಿಗೆ ಹೊರೆ ತಗ್ಗಿಸುವುದು, ಸರ್ಕಾರದ ತೆರಿಗೆ ಸಂಗ್ರಹವನ್ನು ಹೆಚ್ಚಿಸುವುದು. ಇದು ತೆರಿಗೆ ವ್ಯವಸ್ಥೆಯ ಮೂವರನ್ನು ಒಳಗೊಳ್ಳಲಿದೆ – ಉತ್ಪಾದಕ, ಗ್ರಾಹಕ ಮತ್ತು ಸರ್ಕಾರ. ಇದು ದೇಶದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಸಹಕಾರ ಪದ್ಧತಿಯನ್ವಯ ಒಳಗೊಳ್ಳಲಿದೆ. ಭಾರತ ಸರ್ಕಾರವು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಇಂತಹ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತಂದದ್ದಕ್ಕೆ ಅಭಿನಂದನಾರ್ಹರು.

ವ್ಯಾಪಾರ ವಹಿವಾಟಿನ ಮೇಲೆ ಜಿಎಸ್‌ಟಿಯ ಧನಾತ್ಮಕ ಪರಿಣಾಮಗಳ ಬಗ್ಗೆ ಯಾವುದೇ ಅನುಮಾನಗಳಿರಲು ಸಾಧ್ಯವಿಲ್ಲ. ವ್ಯಾಪಾರಕ್ಕೆ ಸಂಬಂಧಿಸಿದಂತೆ ನಿರ್ವಹಣಾ ವೆಚ್ಚ, ತೆರಿಗೆ ಹೊರೆ, ಸುಗಮ ಸರಕು ಸಾಗಾಣಿಕೆ ಇವು ಸ್ಪಷ್ಟವಾಗಿ ಎದ್ದುಕಾಣುವಂತಹದ್ದು. ಈ ವ್ಯವಸ್ಥೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಪ್ರಯತ್ನಗಳು ಇನ್ನು ಮುಂದೆ ನಡೆಯಬೇಕಿದೆ. 'ಒಂದು ದೇಶ ಒಂದು ತೆರಿಗೆ' ಘೋಷ ವಾಕ್ಯ ಮಾತ್ರವಾಗದೆ ವಾಸ್ತವದಲ್ಲಿ ಕಾರ್ಯರೂಪಕ್ಕೆ ತರಬೇಕಿದೆ. ಉದ್ಯಮದಾರರು ಹಾಗೂ ಹಿಡುವಳಿದಾರರಿಗೆ ತಮ್ಮ ಪ್ರತಿಕ್ರಿಯೆಗಳನ್ನು ನಿರಂತರವಾಗಿ ದಾಖಲಿಸುವ ವೇದಿಕೆಯನ್ನು ರೂಪಿಸುವುದರಿಂದ ಅನುಕೂಲವಾಗುತ್ತದೆ. ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳು ಪರೋಕ್ಷ ತೆರಿಗೆಗಳನ್ನು ಹೇರದಂತೆ ಮನವೊಲಿಸಬೇಕು. ಜಿಎಸ್‌ಟಿಯ ಸಂಪರ್ಕಜಾಲವನ್ನು ವಿಸ್ತರಿಸುವುದು ಮತ್ತೊಂದು ಮುಖ್ಯ ಗುರಿ.


ಸಿಂಗಾಪುರ, ಮಲೇಶಿಯಾಗಳಲ್ಲಿ ಜಿಎಸ್‌ಟಿಯದು ಏಕರೂಪ ದರ 7% ಮತ್ತು 6%. ಭಾರತ ಕೂಡ ಈ ರೀತಿಯ ಏಕದರ ಪದ್ಧತಿ ಅಳವಡಿಸಿಕೊಳ್ಳುವತ್ತ ಆದಷ್ಟು ಬೇಗ ಹೆಜ್ಜೆಹಾಕಬೇಕು. ಇದು ಕಡಿಮೆ ದರ ವ್ಯವಸ್ಥೆ ಹಾಗೂ ಇದರಲ್ಲಿ ವಿನಾಯ್ತಿಯನ್ನು ಕೊಡಬಹುದಾಗಿದೆ.

ನೊಂದಣಿ, ತೆರಿಗೆ ರಿಟರ್ನ್ಸ್, ವಿವಿಧ ರಾಜ್ಯಗಳಲ್ಲಿನ ವ್ಯಾಪಾರ ಇವುಗಳನ್ನು ಕುರಿತಂತೆ ಒಂದು ಮಾದರಿಯನ್ನು ರೂಪಿಸಬೇಕು. ಇದರಿಂದಾಗಿ ದೇಶದಲ್ಲಿನ ವ್ಯಾಪಾರ ವಹಿವಾಟಿನ ಪರಿಸ್ಥಿತಿಯನ್ನು ಉತ್ತಮಗೊಳಿಸಲು ನೆರವಾಗುತ್ತದೆ. ಮೇಕ್ ಇನ್ ಇಂಡಿಯಾದ ಕಾರ್ಯಕ್ರಮವು ಯಶಸ್ವಿಯಾಗಲು ಇದು ಅತ್ಯವಶ್ಯಕ. ಜಿಎಸ್‌ಟಿಯನ್ನು ಅಳವಡಿಸಿಕೊಳ್ಳುವಲ್ಲಿ ಅತಿದೀರ್ಘ ಸಮಯವನ್ನು ತೆಗೆದುಕೊಂಡಿದ್ದೇವೆ ಆದರೀಗ ಅದನ್ನು ಯಶಸ್ವಿಯಾಗಿ ಸಮರ್ಪಕವಾಗಿ ಅಳವಡಿಸಿಕೊಂಡು ವಿಶ್ವದಲ್ಲಿ ಉತ್ತಮ ದೇಶವಾಗಿ ಹೊರಹೊಮ್ಮುವಲ್ಲಿ ತಡಮಾಡಬಾರದು. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ–ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು.** ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : kannada-yojana@gov.in ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ಜ್ಞಾನಾರ್ಜನೆಗಾಗಿ...
# ಯೋಜನಾ - ಕನ್ನಡ ಮಾಸ ಪತ್ರಿಕೆ
# ಚಂದಾದಾರರಾಗಿ




## ಚಂದಾ ವಿವರ

| | |
|---|---|
| ಒಂದು ವರ್ಷಕ್ಕೆ | ರೂ. 230/- |
| ಎರಡು ವರ್ಷಗಳಿಗೆ | ರೂ. 430/- |
| ಮೂರು ವರ್ಷಗಳಿಗೆ | ರೂ. 610/- |

**ಯೋಜನಾಕ್ಕೆ ಚಂದಾದಾರರಾಗಲು ಮೂರು ಆಯ್ಕೆಗಳಿವೆ**

### 1. ಮನಿ ಆರ್ಡರ್-ಎಂ ಓ ಮೂಲಕ ಚಂದಾ

ಚಂದಾದಾರರು ಎಂ.ಓ. ಮೂಲಕ ಚಂದಾ ಕಳುಹಿಸಬಹುದು. ಎಂ.ಓ. ಕಳುಹಿಸಿದ ಒಂದು ವಾರದ ಒಳಗೆ ನಮ್ಮ ಕಚೇರಿಯನ್ನು ಸಂಪರ್ಕಿಸಿ ನಿಮ್ಮ ವಿಳಾಸ-ವಿವರಗಳನ್ನು ದೃಢೀಕರಿಸಿಕೊಳ್ಳಬೇಕಾಗಿ ಕೋರಲಾಗಿದೆ.

### 2. ಆನ್-ಲೈನ್ ಚಂದಾ

ಈಗ ಆನ್-ಲೈನ್ ಮೂಲಕವೂ ಯೋಜನಾ ಕನ್ನಡ ಮಾಸಪತ್ರಿಕೆಗೆ ಚಂದಾದಾರರಾಗಬಹುದಾಗಿದೆ. ಇದಕ್ಕಾಗಿ ಲಾಗ್-ಆನ್ ಆಗಬೇಕಾದ ವೆಬ್‌ಸೈಟ್ ವಿವರ ಈ ಮುಂದಿನಂತಿದೆ.

**http://publicationsdivision.nic.in/, bharatkosh.gov.in**

### 3. ಡಿಮಾಂಡ್ ಡ್ರಾಫ್ಟ್

ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ಚಂದಾದಾರರು ತಮ್ಮ ವಿಳಾಸ ವಿವರಗಳೊಂದಿಗೆ ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.

ವಿಳಾಸ


**ಯೋಜನಾ – ಕನ್ನಡ**

ಮೊದಲನೆ ಅಂತಸ್ತು,
'ಎಫ್' ವಿಂಗ್, ಕೇಂದ್ರೀಯ ಸದನ,
ಕೋರಮಂಗಲ, ಬೆಂಗಳೂರು – 560 034.

✆ : 25537244

e-mail : kannada-yojana@gov.in

ಪತ್ರಿಕೆ ಸರಿಯಾಗಿ ತಲುಪಲು ಚಂದಾದಾರರು, ಅಂಚೆ ಪಿನ್‌ಕೋಡ್ ಒಳಗೊಂಡ ತಮ್ಮ ಪೂರ್ಣ ವಿಳಾಸ ಒದಗಿಸಬೇಕು.



ಕ್ರಾಂತಿ ಕಹಳೆ

# ಸ್ವಾತಂತ್ರ್ಯೋತ್ಸವ; ನುಡಿ ನಮನ



**ದೇಶವನ್ನು ದಾಸ್ಯದ ಶೃಂಖಲೆಗಳಿಂದ ಮುಕ್ತಗೊಳಿಸಲು ನಡೆದ ಶತಮಾನಗಳ ಹೋರಾಟದಲ್ಲಿ ತ್ಯಾಗ ಬಲಿದಾನ ಮಾಡಿದ ಮಹನೀಯರು ಅನೇಕ. 70ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಅವರಲ್ಲಿ ಕೆಲವರ ಕಿರುಪರಿಚಯ – ಸ್ಮರಣೆ – ಮುಂದಿದೆ.**

## ಕಿತ್ತೂರು ರಾಣಿ ಚೆನ್ನಮ್ಮ



ಕಿತ್ತೂರು ರಾಣಿ ಚೆನ್ನಮ್ಮ (1778–1829) ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಮೊದಲು ಸೊಲ್ಲೆತ್ತಿದ ವೀರ ಮಹಿಳೆ. ಮೊದಲನೆ ಸ್ವಾತಂತ್ರ್ಯ ಸಂಗ್ರಾಮ 1857 ಕ್ಕಿಂತ ಸುಮಾರು 56 ವರ್ಷಗಳ ಮೊದಲೆ, ದಾಸ್ಯದ ವಿರುದ್ಧ ಸ್ವಾಭಿಮಾನದ ಕಹಳೆಯೂದಿದ ಕನ್ನಡತಿ. ಬೆಳಗಾವಿ ಸಮೀಪದ ಕಾಕತಿಯಲ್ಲಿ ಜನಿಸಿದ ಚೆನ್ನಮ್ಮ ಎಳೆಯ ವಯಸ್ಸಿನಲ್ಲಿ ಕತ್ತಿವರಸೆ, ಕುದುರೆ ಸವಾರಿ, ಬಿಲ್ವಿದ್ಯೆ ಯುದ್ಧ ತಂತ್ರಗಳನ್ನು ಕಲಿತ ಚಾಣಾಕ್ಷ ಮತಿ. ದೇಸಾಯಿ ಮನೆತನದ ರಾಜಾಮಲ್ಲಸರ್ಜನೊಂದಿಗೆ ವಿವಾಹ. ಹುಟ್ಟಿದ ಮಗ ದುರದೃಷ್ಟವಶಾತ್ 1824ರಲ್ಲಿ ಗತಿಸಿದ. ಆಗ ಚೆನ್ನಮ್ಮ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡಾಗ ಈಸ್ಟ್ ಇಂಡಿಯಾ ಕಂಪನಿ ಒಪ್ಪಲಿಲ್ಲ. ರಾಣಿ ಚೆನ್ನಮ್ಮ ತನ್ನ ಬಲಗೈ ಬಂಟ ಸಂಗೊಳ್ಳರಾಯಣ್ಣನ ಜೊತೆಗೂಡಿ ಯುದ್ಧ ಮಾಡಿದಳು. ಕೊನೆಗೆ ಬೈಲುಹೊಂಗಲದ ಕೋಟೆಯಲ್ಲಿ ಸೆರೆಯಾಗಿರಬೇಕಾಯಿತು. 21 ಫೆಬ್ರವರಿ 1829 ರಲ್ಲಿ ಚೆನ್ನಮ್ಮ ಇನ್ನಿಲ್ಲವಾದಳು. ಆಕೆಯ, ಕೆಚ್ಚು, ಸ್ವಾಭಿಮಾನ, ಛಲ ದೇಶಾಭಿಮಾನ ಇಂದಿಗೂ ಸ್ಫೂರ್ತಿಯ ಸೆಲೆಯಾಗಿವೆ. ದೇಶದ ಸ್ವಾತಂತ್ರ್ಯಕ್ಕಾಗಿ ಕನ್ನಡ ನಾಡಿನ ಅನೇಕ ಮಹಿಳೆಯರು ತಮ್ಮ ತನು ಮನ ಸಮರ್ಪಿಸಿ ಹೋರಾಡಿದ್ದಾರೆ. ಉಮಾಬಾಯಿ ಕುಂದಾಪುರ್, ಬಳ್ಳಾರಿ ಸಿದ್ದಮ್ಮ, ಟಿ ಸುನಂದಮ್ಮ, ಕಮಲಾದೇವಿ ಚಟ್ಟೋಪಾಧ್ಯಾಯ, ನಾಗಮ್ಮ ಪಾಟೀಲ್, ಕೃಷ್ಣಾಬಾಯಿ ಪಂಜೀಕರ್, ಸುಬ್ಬಮ್ಮ ಜೋಯಿಸ್, ಯಶೋಧರಮ್ಮ ದಾಸಪ್ಪ, ಪದ್ಮಾವತಿ ಬಿದರಿ, ಜಯದೇವಿ ತಾಯಿ ಲಿಗಾಡೆ, ಸೀತಾಬಾಯಿ ರಾಮಚಂದ್ರ, ಶಕುಂತಲಾ ಕುರ್ತಕೋಟಿ...... ಇವರೆಲ್ಲ ಚಿರಸ್ಮರಣೀಯರು.

## ಝಾನ್ಸಿ ರಾಣಿ ಲಕ್ಷ್ಮೀಬಾಯಿ




'ಕೆಚ್ಚಿನಿಂದ ಹೋರಾಡಿದ ಗಂಡೆದೆಯ ವೀರ ಮಹಿಳೆಯೇ ಝಾನ್ಸಿ ರಾಣಿ ಲಕ್ಷ್ಮೀಬಾಯಿ' – ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಸರ್ವಸ್ವವನ್ನು ಪಣಕ್ಕಿಟ್ಟು ಹೋರಾಡಿದ ಮಹನೀಯರಲ್ಲಿ ಝಾನ್ಸಿಯ ರಾಣಿ ಅವರ ಹೆಸರು ಉಲ್ಲೇಖನೀಯ. ಸ್ವಾತಂತ್ರ್ಯಕ್ಕಾಗಿ ಆಂಗ್ಲರೊಂದಿಗೆ ಯುದ್ಧ ಮಾಡುತ್ತಾ ಪ್ರಾಣಬಲಿದಾನ ಮಾಡಿದ ಈ ವೀರ ಮಹಿಳೆ ಅಂತ್ಯದವರೆಗೂ ಸೋಲೊಪ್ಪದ ಸೇನಾನಿ. ದೇಶದ ರಕ್ಷಣೆಗಾಗಿ ಜೀವನವನ್ನೇ ಮುಡುಪಾಗಿಟ್ಟ ಇವರ ಸಮರ್ಪಣಾ ಹೋರಾಟ ಅನುಪಮ.

## ಚಂದ್ರಶೇಖರ ಆಜಾದ್



1921ರ ಡಿಸೆಂಬರ್ ತಿಂಗಳು. ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ 14–15ರ ಹರೆಯದ ಚಂದ್ರಶೇಖರ್ ಆಜಾದ್ ಅವರನ್ನು ಬ್ರಿಟಿಷರು ಬಂಧಿಸಿದ್ದರು. ಅವರನ್ನು ಬ್ರಿಟಿಷ್ ಮ್ಯಾಜಿಸ್ಟ್ರೇಟರ್ ಮುಂದೆ ಹಾಜರು ಪಡಿಸಿದರು. ಮಾಜಿಸ್ಟ್ರೇಟರು ನಿನ್ನ ಹೆಸರೇನು ಎಂದು ಕೇಳಿದಾಗ ಚಂದ್ರಶೇಖರ್ ಉತ್ತರಿಸಿದ್ದು **ಆಜಾದ್ (ವಿಮೋಚನೆ)**. ತಂದೆ ಹೆಸರು? **ಸ್ವಾತಂತ್ರ್ಯ**. ನೀನಿರುವುದೆಲ್ಲಿ? **ಜೈಲುಖಾನೆ**.... ಇಂತಹ ಉತ್ತರಕ್ಕಾಗಿ 15 ದಿನಗಳ ಕಠಿಣ ಸೆರೆವಾಸ ವಿಧಿಸಿದರು – ಮತ್ತೆ ಹಾಜರು ಪಡಿಸಿದಾಗ ಚಂದ್ರಶೇಖರ್ ಮತ್ತೆ ಉತ್ತರಿಸಿದ್ದು "ನನ್ನನ್ನು ಜೈಲಿಗೆ ಕಳಸುತ್ತೀರೆಂದು ಗೊತ್ತಿತ್ತು ಅದಕ್ಕೆ ಹಾಗೆ ಉತ್ತರಿಸಿದೆ" ಉತ್ತರ ಕೇಳಿದ ಇತರ ನ್ಯಾಯಾಧೀಶರು ನಗಲಾರಂಭಿಸಿದರು. ಸಿಟ್ಟಿಗೆದ್ದ ಮ್ಯಾಜಿಸ್ಟ್ರೇಟರು 15 ಛಡಿಯೇಟು ಶಿಕ್ಷೆ ಪ್ರಕಟಿಸಿದರು. ಪ್ರತಿ ಹೊಡೆತಕ್ಕೂ ಚಂದ್ರಶೇಖರ್ ಅವರ ಬಾಯಿಂದ ಹೊರಹೊಮ್ಮಿದ ಸಿಂಹ ಘೋಷಣೆ – **ಭಾರತ್ ಮಾತಾ ಕೀ ಜೈ.**

## ಭಗತ್ ಸಿಂಗ್



ಭಗತ್ ಸಿಂಗ್ ಬಾಲಕನಾಗಿದ್ದಾಗಲೇ ಕ್ರಾಂತಿಕಾರಿ ಚಟುವಟಿಕೆಗಳತ್ತ ಆಕರ್ಷಿತರಾಗಿದ್ದರು. ಹಿಂದೂಸ್ತಾನ ಸೋಷಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್‌ದ ಧುರೀಣರಾಗಿ, ಕ್ರಾಂತಿಕಾರಿ ನಡೆಗೆ ಹೆಸರಾದವರು. ಬ್ರಿಟಿಷರು ಜೈಲಿಗೆ ಹಾಕಿದಾಗ ಅಲ್ಲಿಯೂ ಭಾರತೀಯ – ಬ್ರಿಟಿಷ್ ರಾಜಕೀಯ ಕೈದಿಗಳಿಗೆ ಸಮಾನ ಹಕ್ಕಿಗಾಗಿ ಹೋರಾಟ ನಡೆಸಿದರು. ಹಿರಿಯ ಸ್ವಾತಂತ್ರಯೋಧ ಲಾಲಾ ಲಜಪತ್‌ರಾಯ್ ಅವರ ಅಗಲಿಕೆ ಕಾರಣವಾದ ಲಾಠಿಛಾರ್ಜ್ ಮಾಡಿದ ಪೊಲೀಸ್ ಅಧಿಕಾರಿಯನ್ನು ಗುಂಡಿಟ್ಟು ಕೊಂದಿದ್ದಕ್ಕಾಗಿ ಭಗತ್‌ಸಿಂಗ್ ಅವರಿಗೆ ಬ್ರಿಟಿಷರು ಗಲ್ಲು ಶಿಕ್ಷೆ ವಿಧಿಸಿದರು.

ಶಾಂತಿ ದೂತ

# ಮಹಾತ್ಮಾ ಗಾಂಧೀಜಿಯವರ ದಿಗ್ದರ್ಶನ

ಅಸಹಕಾರ
ತಂತ್ರ



ಅಹಿಂಸೆ
ಮಂತ್ರ



ಸ್ವಾವಲಂಬನೆ


ಚಿತ್ರ
ನಮನ



ದಂಡಿ ಮಾರ್ಚ್



ಸಾಕಾರ



ನಮ್ಮ ಗುರಿ

ಸಡಗರ



ಸಂಭ್ರಮ

ಆಗಸ್ಟ್ 15, 1947 ಭಾರತ ಸ್ವತಂತ್ರ – ಅಧಿಕಾರ ಹಸ್ತಾಂತರ

ಸ್ವಾತಂತ್ರ್ಯೋತ್ಸವ ವಿಶೇಷ

**ಯೋಜನಾ – ಕನ್ನಡ**
**ಪ್ರಕಾಶನ ವಿಭಾಗ**
**ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ**
**ಮೊದಲನೆಯ ಅಂತಸ್ತು, 'ಎಫ್'ವಿಂಗ್, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 560 034.**
**ದೂರವಾಣಿ : 080 – 25537244. E-mail : kannada-yojana@gov.in**
**ಸ್ವಾತಂತ್ರ್ಯ ಸಂಗ್ರಾಮ, ಅದರಲ್ಲಿ ಹೋರಾಡಿದ ಮಹನೀಯರ ಜೀವನ–ಕೊಡುಗೆ, ಕುರಿತಂತೆ ಪ್ರಕಾಶನ ವಿಭಾಗ ಹೊರತಂದಿರುವ ಪುಸ್ತಕಗಳು ಮಾರಾಟಕ್ಕೆ ರಿಯಾಯ್ತಿ ದರದಲ್ಲಿ ಲಭ್ಯ.**
**(ವ್ಯಾಪಾರದ ವೇಳೆ : ಸೋಮವಾರದಿಂದ – ಶುಕ್ರವಾರ. ಬೆಳಿಗ್ಗೆ 11 ರಿಂದ ಸಂಜೆ 4)**

| ಕ್ರಮ | ಶೀರ್ಷಿಕೆ | ಬೆಲೆ | ಕ್ರಮ | ಶೀರ್ಷಿಕೆ | ಬೆಲೆ |
|---|---|---|---|---|---|
| 1 | ಮದನ ಮೋಹನ ಮಾಳವೀಯ | 60 | 9 | ಲಜಪತ್ ರಾಯ್: ಜೀವನ ಮತ್ತು ಸಾಧನೆ | 145 |
| 2 | ಮಹಾನ್ ವ್ಯಕ್ತಿಗಳು ಮಹಾನ್ ಕಾರ್ಯಗಳು | 55 | 10 | ಲಾಲ್ ಬಹದ್ದೂರ್ ಶಾಸ್ತ್ರಿ | 90 |
| 3 | ನಮ್ಮ ರಾಷ್ಟ್ರಧ್ವಜ | 110 | 11 | ಅಬುಲ್ ಕಲಮ್ ಆಜಾದ್ | 15 |
| 4 | ಭಾರತದ ಸಂಸತ್ತು | 5 | 12 | ಗಣೇಶ್ ವಾಸುದೇವ ಮಾವಳಂಕರ್ | 100 |
| 5 | ಕ್ರಾಂತಿವೀರ ಆಜಾದ್ | 14 | 13 | ದಿವಾನ್ ರಂಗಾಚಾರ್ಲು | 8 |
| 6 | ವೀರ ದೇಶಾಭಿಮಾನಿ ಜನರಲ್ ತಿಮ್ಮಯ್ಯ | 14 | 14 | ರವೀಂದ್ರನಾಥ ಟಾಗೋರ್ | 20 |
| 7 | ಸ್ವಾಮಿ ವಿವೇಕಾನಂದ | 16.5 | 15 | ನೆಹರು ಕಥೆ | 3.5 |
| 8 | ಲೋಕಮಾನ್ಯ ಬಾಲಗಂಗಾಧರ ತಿಲಕ್ | 13 | | | |

# Gandhi Titles

| Sl.No. | TITLES | Price (Rs.) |
|---|---|---|
| 1 | All are equal in the eyes of God | 75 |
| 2 | A thought for the Day M.K.Gandhi | 170 |
| 3 | Epigrams from Gandhi | 130 |
| 4 | Gandhi A Patriot in South Africa | 80 |
| 5 | Gandhi the Man and his thought | 25 |
| 6 | Gandhi the Man and his thought | 35 |
| 7 | Gandhi in Champaharan | 35 |
| 8 | Gandhi in Champaharan (HB) | 95 |
| 9 | Gandhi ordatined in South Africa | 165 |
| 10 | Gandhi in Champaharan (New) | 150 |
| 11 | In the Footsteps of Mahatma | 100 |
| 12 | Let us Know Gandhi * | 80 |
| 13 | Mahatma Gandhi A Choronology | 100 |
| 14 | Mahatma Gandhi A Great Life in Brief * | 80 |
| 15 | Mahatma Gandhi and One World * | 30 |
| 16 | Mahatma Gandhi as a Student | 100 |
| 17 | Romain Rolland and Gandhi Correspondence (old) | 87 |
| 18 | Romain Rolland and Gandhi Correspondence (new) | 480 |
| 19 | Significance of Gandhi as a Man and Thinker | 40 |
| 20 | BMI- Gandhi His life and thought * | 200 |
| 21 | Mahatma by D.G.Tendulkar- Vol 1-8 (set) | 2325 |
| 22 | Homage to the Mahatma | 40 |
| 23 | The Chakra & Rose | 75 |

## List DPD books Available – Freedom Fighters, Martyrs & Bravery Award Winners

### ENGLISH

| Sl. No. | Titles | | Price |
|---|---|---|---|
| 01. | History of the Freedom Movement in India | Vol I | Rs.180.00 |
| 02. | History of the Freedom Movement in India | Vol II | Rs. 300.00 |
| 03. | History of the Freedom Movement in India | Vol III | Rs. 300.00 |
| 04. | History of the Freedom Movement in India | Vol IV | Rs.325.00 |
| 05. | Who's Who of Indian Martyrs | Vol 1 (Del) | Rs.355.00 |
| 06. | Who's Who of Indian Martyrs | Vol II (Del) | Rs.315.00 |
| 07. | Who's Who of Indian Martyrs | Vol III (Del) | Rs.180.00 |
| 08. | Who's Who of Indian Martyrs | Vol 1 (Pop) | Rs.270.00 |
| 09. | Who's Who of Indian Martyrs | Vol II (Pop) | Rs.250.00 |
| 10. | Who's Who of Indian Martyrs | Vol III (Pop) | Rs.150.00 |
| 11. | Tatya Tope- Immortal Fighter of 1857 | | Rs. 80.00 |
| 12. | Saga of Valour (Del) | | Rs.670.00 |
| 13. | Saga of Valour (Pop) | | Rs.600.00 |
| 14. | Sardar Patel – A pictorial Biography (P) | | Rs.200.00 |
| 15. | Sardar Patel | | Rs.135.00 |
| 16. | 1857 The Uprising | | Rs.225.00 |
| 17. | Sir Chhotu Ram | | Rs.190.00 |
| 18. | Sathyagraha | | Rs.560.00 |
| 19. | 1857- A Pictorial Presentation | | Rs.150.00 |
| 20. | Remember us Once in a while | | Rs.130.00 |
| 21. | India : Before the After Mutiny | | Rs.100.00 |
| 22. | Story of The INA | | Rs. 25.00 |
| 23. | The Charkhra & The Rose | | Rs. 75.00 |
| 24. | The Story of India's Struggle for Freedom | | Rs. 75.00 |
| 25 | Satguru Ram Singh & Kuka Movement | | Rs.170.00 |
| 26. | Nana Saheb Peshwa-Immortal Fighter of 1857 | | Rs. 75.00 |

ಕೇಂದ್ರ ಪ್ರಶ್ನೆ

ಹಂಚಿಕೆ

# ಒಕ್ಕೂಟ ಆರ್ಥಿಕ ಸಂಬಂಧಗಳ ಸಮತೋಲನ

* ಜಯಂತ್ ರಾಯ್ ಚೌಧುರಿ




**ಜಿಎಸ್‌ಟಿ ಜಾರಿಗೆ ಬಂದ ನಂತರ ಕೆಲವು ಕ್ಷೇತ್ರಗಳಲ್ಲಿ ಪರೋಕ್ಷ ತೆರಿಗೆ ವಿಧಿಸುವ ಅಧಿಕಾರವನ್ನು ರಾಜ್ಯಗಳು ಹೊಂದಿದ್ದರೂ, ಕೆಲವು ತೆರಿಗೆಗಳನ್ನು ವಿಧಿಸುವ ಮತ್ತು ಹೆಚ್ಚಿಸುವ ಅಧಿಕಾರದ ವಿಷಯಗಳಲ್ಲಿ ಅವುಗಳ ಅಧೀನದಲ್ಲಿರುವ ಸ್ಥಳೀಯ ಸಂಸ್ಥೆಗಳಾದ ನಗರಸಭೆಗಳು, ನಗರಪಾಲಿಕೆಗಳಿಗಿರುವ ಅಧಿಕಾರದಷ್ಟೂ ರಾಜ್ಯಗಳಿಗೆ ಇಲ್ಲದಾಗಿದೆ.**

ಸಂವಿಧಾನಾತ್ಮಕವಾಗಿ ತೆರಿಗೆ ವಿಧಿಸುವ ಸಾಮರ್ಥ್ಯವನ್ನು ಬಿಟ್ಟುಕೊಟ್ಟು, ರಾಜ್ಯಗಳು ದೇಶದಲ್ಲಿ ಜಾರಿಗೆ ಬಂದಿರುವ ಸರಕು ಮತ್ತು ಸೇವಾ ತೆರಿಗೆಯ ಯಶಸ್ಸಿನ ಮೇಲೆ ದೊಡ್ಡ ಭರವಸೆಯನ್ನು ಹೊಂದಿವೆ. ಆದರೂ, ಜಿಎಸ್‌ಟಿಯಿಂದ ತಮ್ಮ ಆದಾಯದಲ್ಲಿ ಹೆಚ್ಚಳವಾಗುತ್ತದೆ ಎಂದು ಹೇಳುತ್ತಿರುವುದು ನಿಜವಾಗದಿದ್ದರೆ ಅದರಿಂದ ರಕ್ಷಣೆ ಪಡೆದುಕೊಳ್ಳಲು ಸತತವಾಗಿ ಹೋರಾಟ ನಡೆಸಿ ತೆರಿಗೆಯ ಜೊತೆಗೆ ಸೆಸ್ ವಿಧಿಸಿ ವಾರ್ಷಿಕ ಸುಮಾರು 50,000 ಕೋಟಿ ರೂ. ಸಂಗ್ರಹಿಸಿ ತಮ್ಮ ಆದಾಯದಲ್ಲಿ ಆಗಬಹುದಾದ ಕೊರತೆಯನ್ನು ಸರಿದೂಗಿಸಿಕೊಳ್ಳಲು ಅವಕಾಶ ಮಾಡಿಕೊಂಡಿವೆ.

ಕಚ್ಚಾ ತೈಲದ ಬೆಲೆಯ ಕುಸಿತದ ಪರಿಣಾಮದಿಂದ ಜಾಗತಿಕ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆಯಲ್ಲಿ ಹಿಂಜರಿತ ಉಂಟಾಗಿ ದೇಶದ ಆರ್ಥಿಕ ಬೆಳವಣಿಗೆಯ ವೇಗ ನಿರೀಕ್ಷೆಯಂತೆ ಶೇಕಡಾ 7.5 ರಿಂದ 8 ರಷ್ಟಾಗದೆ, ಕುಂಠಿತಗೊಂಡು ನಿರೀಕ್ಷಿಸಿದ ಆದಾಯ ಬರದೆ ಹೋದರೆ ಪರಿಸ್ಥಿತಿಯನ್ನು ಎದುರಿಸುವುದು ಕಷ್ಟವಾಗುತ್ತದೆ ಎಂಬ ಭಾವನೆ ಹಿನ್ನೆಲೆಯಲ್ಲಿ ಸೆಸ್ ರಕ್ಷಣಾತ್ಮಕ ಕ್ರಮವಾಗುತ್ತದೆ.

ದೇಶದ ಆರ್ಥಿಕ ಚಟುವಟಿಕೆ ಹೇಗೆ ಕೆಲಸ ಮಾಡುತ್ತಿವೆ ಎಂಬುದರ ಮೇಲೆ ಎಲ್ಲ ತೆರಿಗೆಗಳು ಕೆಲಸ ಮಾಡುತ್ತವೆ. ಅದೇ ರೀತಿ ಜಿಎಸ್‌ಟಿಯೂ ಸಹ ಕೆಲಸ ಮಾಡುತ್ತದೆ. ಇತರೆ ತೆರಿಗೆಗಳಿಗಿಂತ ಜಿಎಸ್‌ಟಿ ಹೆಚ್ಚು ವಿಶಾಲವಾದ ತಳಹದಿಯ ಮೇಲೆ ಕಾರ್ಯ ನಿರ್ವಹಿಸುತ್ತದೆ ಎಂಬ ಕಲ್ಪನೆ ಮೇಲೆ ರೂಪಿತವಾಗಿದೆ. ಜಿಎಸ್‌ಟಿ ಜಾರಿಗೆ ಬಂದ ನಂತರ ಈಗಿರುವ ತೆರಿಗೆಯ ಪ್ರಮಾಣ ಜಿಡಿಪಿಯ ಶೇಕಡಾ 10 ರಿಂದ 16 ಕ್ಕೆ ಹೆಚ್ಚುತ್ತದೆ ಎಂದು ಹೇಳಲಾಗುತ್ತಿದೆ. ಈ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆಯೊ ಇಲ್ಲವೊ ಎಂಬುದು ಮುಂದಿನ ಒಂದು ವರ್ಷದಲ್ಲಿ ಸರ್ಕಾರ, ಕೈಗಾರಿಕಾ ವಲಯ ಜಿಎಸ್‌ಟಿಯನ್ನು ಹೇಗೆ ಕಾರ್ಯರೂಪಕ್ಕೆ ತರುತ್ತವೆ ಹಾಗೂ ಅದನ್ನು ಹೇಗೆ ಅಳವಡಿಸಿಕೊಂಡು ನಿಭಾಯಿಸಲಾಗುತ್ತದೆ ಎಂಬುದರ ಮೇಲೆ ಗೊತ್ತಾಗುತ್ತದೆ.

ರಾಜ್ಯಗಳ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕ್‌ನ ವರದಿಯಲ್ಲಿ, ಜಿಎಸ್‌ಟಿ ಜಾರಿಗೊಳಿಸಿದ ನಂತರ ರಾಜ್ಯಗಳ ಆದಾಯ ಎಷ್ಟಿರುತ್ತದೆ ಎಂಬುದರ ಬಗ್ಗೆ ಅನಿಶ್ಚತತೆ ಇರುವುದರಿಂದ ಅವುಗಳ ಆದಾಯದ ಬೆಳವಣಿಗೆಯಲ್ಲೂ ಅನಿಶ್ಚತತೆ ತಲೆದೋರುತ್ತದೆ ಎಂದು ತಿಳಿಸಲಾಗಿದೆ.

ರಾಜ್ಯಗಳು ಹಿಂದೆಂದಿಗಿಂತಲೂ ಹೆಚ್ಚಿನ ರೀತಿಯಲ್ಲಿ ಖರ್ಚಿನ ಬಾಬತ್ತಿನಲ್ಲಿ ಹೆಚ್ಚಳವನ್ನೇ ಎದುರಿಸುತ್ತಿವೆ. ಏಳನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಿದ ನಂತರ, ರಾಜ್ಯಗಳು ತನ್ನ ನೌಕರರಿಗೆ ಸಂಬಳದ ರೂಪದಲ್ಲಿ ಮಾಡುವ ವೆಚ್ಚ ಗಣನೀಯವಾಗಿ ಹೆಚ್ಚಾಗಲಿದೆ. ರೈತರ ಸಾಲ ಮನ್ನಾ ಮಾಡುವ ಪ್ರಕ್ರಿಯೆ ಉತ್ತರ ಪ್ರದೇಶ ರಾಜ್ಯದಿಂದ ಪ್ರಾರಂಭವಾಗಿ ಅದರ ಜಾಡನ್ನು ಈಗಾಗಲೇ ಮೂರು ರಾಜ್ಯಗಳು ತುಳಿದಿವೆ.

* ಆರ್ಥಿಕ ವಿಷಯ ಪತ್ರಕರ್ತರು. E-mail : jrchowdhury@yahoo.com

ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಗಾಗಲೇ ಸಾಲದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದು ಈ ಅಪಾಯಕಾರಿ ಬೆಳವಣಿಗೆಯಿಂದ ಭಾರತ ಇನ್ನೊಂದು ಗ್ರೀಸ್ ಆಗದಂತೆ ನೋಡಿಕೊಳ್ಳುವ ಸವಾಲು ಮುಂದಿದೆ. ಭಾರತದ ಸಾರ್ವಜನಿಕ ಸಾಲ (ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಟ್ಟು ಸಾಲ) ದೇಶದ ಜಿಡಿಪಿಯ ಶೇಕಡಾ 67 ರಷ್ಟನ್ನು ಮುಟ್ಟಿದ್ದು, ಜಪಾನ್ ದೇಶವನ್ನು ಹೊರತು ಪಡಿಸಿ ಏಶಿಯಾದ ಪ್ರಮುಖ ದೇಶಗಳ ಸಾಲದ ಹೊರೆಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ.

ಒಂದು ಪಕ್ಷ ದೇಶದ ಎಲ್ಲ ರಾಜ್ಯಗಳು ಕೃಷಿ ಸಾಲವನ್ನು ಮನ್ನಾ ಮಾಡಿ, ಮನ್ನಾ ಮಾಡಿದ ಸಾಲವನ್ನು ತೀರಿಸಲು ಹೊಸದಾಗಿ ಮೂರು ಲಕ್ಷ ಕೋಟಿ ರೂಪಾಯಿ ಹೊಸ ಸಾಲ ಮಾಡಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯ ಅಧಿಕಾರಿಗಳು ಈಗಾಗಲೇ ಲೆಕ್ಕ ಹಾಕಿದ್ದಾರೆ. ಈ ರೀತಿ ಸಾಲ ಮನ್ನಾ ಮಾಡುವುದು ಯಾವ ಕಾಲಕ್ಕೂ ಸರಿಹೊಂದುವುದಿಲ್ಲ. ಅದರಲ್ಲೂ ಜಿಎಸ್‌ಟಿ ಜಾರಿಯಾಗಿರುವ ಈಗಿನ ಸಂದರ್ಭದಲ್ಲಿ ಹೊಸ ತೆರಿಗೆ ಪದ್ಧತಿಯಲ್ಲಿ ರಾಜ್ಯಗಳ ಹಣಕಾಸಿನ ಪರಿಸ್ಥಿತಿ ಹೇಗಿರುತ್ತದೆ, ಅವುಗಳ ಆದಾಯ ಹೆಚ್ಚಾಗುದತ್ತದೊ ಅಥವಾ ಕಡಿಮೆಯಾಗುತ್ತದೊ ಎಂಬುದು ಇನ್ನೂ ಅನಿಶ್ಚತೆಯಲ್ಲಿರುವಾಗ, ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಹೆಚ್ಚಿನ ಎಚ್ಚರಿಕೆ ಮತ್ತು ಮುಂಜಾಗರೂಕತೆ ತೆಗೆದುಕೊಳ್ಳಬೇಕಾಗುತ್ತದೆ ಅಧಿಕಾರಿಗಳು ಎಚ್ಚರಿಕೆಯನ್ನೂ ನೀಡಿದ್ದಾರೆ.

ದೇಶದ 17 ರಾಜ್ಯಗಳ ಸಾಲ, ಆ ರಾಜ್ಯಗಳ ಹಿಂದಿನ ವರ್ಷದ ಜಿಡಿಪಿ ಅನುಪಾತಕ್ಕೆ ಹೋಲಿಸಿದಾಗ ಹೆಚ್ಚಾಗಿದೆ ಎಂದು ಭಾರತೀಯ ರಿಜರ್ವ್ ಬ್ಯಾಂಕ್‌ನ ವರದಿ ತಿಳಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ರಾಜ್ಯಗಳ ಒಟ್ಟಾರೆ ಹಣಕಾಸಿನ ಪರಿಸ್ಥಿತಿ ಕ್ಷೀಣಿಸುತ್ತದೆ ಎಂದು ಆರ್‌ಬಿಐನ ವರದಿ ಹೇಳಿದ್ದು, 25 ರಾಜ್ಯಗಳಲ್ಲಿ ಅವುಗಳು 2016–17 ನೇ ಸಾಲಿನಲ್ಲಿ ತಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಹೇಳಿಕೊಂಡಿದ್ದರೂ ವಾಸ್ತವದಲ್ಲಿ ಅದು ಆ ರೀತಿ ಆಗಿಲ್ಲ. ವಿತ್ತೀಯ ಕೊರತೆ ಒಟ್ಟಾರೆ ಜಿಡಿಪಿಯ ಶೇಕಡಾ 3 ಕ್ಕಿಂತ ಹೆಚ್ಚಾಗಬಾರದು ಎಂಬ ನಿಯಮ 2004–05 ರ ನಂತರ 2015–16 ನೇ ಸಾಲಿನಲ್ಲಿ ಮುರಿದು ಬಿದ್ದಿದೆ.

ಈ ಹಿನ್ನೆಲೆಯಲ್ಲಿ ರಾಜ್ಯಗಳ ಸಂಬಳದ ಬಿಲ್ ಪಾವತಿಸಲು, ಅಭಿವೃದ್ಧಿ ಕಾರ್ಯಗಳ ವೆಚ್ಚಗಳಿಗೆ ಮತ್ತು ಈಗಾಗಲೇ ಪ್ರಕಟಿಸಿರುವ ಸಾಲ ಮನ್ನಾಗಳಿಗೆ ಹಣ ಒದಗಿಸಬೇಕೆಂಬ ರಾಜ್ಯಗಳ ಬೇಡಿಕೆ ಕೇಂದ್ರದ ವಿರುದ್ಧ ಯುದ್ಧವನ್ನೇ ಸಾರಿದಂತಿದೆ.

ಅಧಿಕಾರಿಗಳು ಹೇಳುತ್ತಿರುವಂತೆ, ಪೆಟ್ರೋಲಿಯಂ ಉತ್ಪನ್ನಗಳು, ಮದ್ಯ ಮತ್ತಿತರ ಬಾಬತ್ತುಗಳು ಸೇರಿದಂತೆ ಶೇಕಡಾ 45 ಕ್ಕಿಂತ ಹೆಚ್ಚಿನ ಪರೋಕ್ಷ ತೆರಿಗೆಗಳು ಜಿಎಸ್‌ಟಿ ವ್ಯಾಪ್ತಿಗೆ ಒಳಪಟ್ಟಿಲ್ಲ. ಈ ಬಾಬುಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರ ರಾಜ್ಯಗಳ ಕೈನಲ್ಲೇ ಇದ್ದು, ಅವುಗಳ ತೆರಿಗೆಯನ್ನು ಹೆಚ್ಚಿಸಲೂ ಅವಕಾಶವಿದೆ.

ಜಿಎಸ್‌ಟಿ ಕಾನೂನಿನಲ್ಲಿ ಹೇಳಿರುವಂತೆ ಈಗ ಜಿಎಸ್‌ಟಿಯ ವ್ಯಾಪ್ತಿಯಿಂದ ಹೊರಗಿರುವ ಬಾಬತ್ತುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಜಿಎಸ್‌ಟಿ ಪರಿಷತ್ ಆಶ್ವಾಸನೆ ನೀಡಿರುವಂತೆ ನಡೆದುಕೊಂಡರೂ, ನಂತರ ರಾಜ್ಯಗಳು ತಮಗೆ ಹಣಕಾಸಿನ ಸ್ವಾತಂತ್ರ್ಯ ಬೇಕು ಎಂಬ ಬೇಡಿಕೆಯನ್ನು ಮುಂದಿಡಬಹುದು. ಈ ಹಿನ್ನೆಲೆಯಲ್ಲಿ ಈಗ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿರುವ ಬಾಬತ್ತುಗಳನ್ನು ತಮ್ಮ ಕೈಲೇ ಇರಿಸಿಕೊಳ್ಳುವುದರಿಂದ ನಮಗೆ ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯ ದೊರೆಯಬಹುದು ಎಂದು ಅವು ಭಾವಿಸಬಹುದು ಎಂದು ಹೇಳಲಾಗುತ್ತಿದೆ.

ಸಂವಿಧಾನ ರಚನಾ ಸಭೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣಕಾಸಿನ ಅಧಿಕಾರವನ್ನು ಹಂಚಿಕೆ ಮಾಡುವ ಬಗ್ಗೆ ಚರ್ಚೆ ಬಂದಾಗ ಆ ಸಭೆಯಲ್ಲಿ ಅನೇಕ ಸಂಸತ್ ಸದಸ್ಯರು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು ಎಂದು ವಾದಿಸಿದರು. ಆದರೆ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟರೆ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬಂದು ಒಂದು ರಾಷ್ಟ್ರದ ಪರಿಕಲ್ಪನೆಗೆ ಧಕ್ಕೆಯಾಗುತ್ತದೆ ಎಂಬ ವಾದ ಮುನ್ನೆಲೆಗೆ ಬಂದಿದ್ದರಿಂದ ತೆರಿಗೆ ವಿಧಿಸುವ ಹೆಚ್ಚಿನ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಜಿಎಸ್‌ಟಿ ಜಾರಿಗೆ ಬಂದಿರುವುದರಿಂದ ತೆರಿಗೆ ವಿಧಿಸುವಲ್ಲಿ ಕೇಂದ್ರ ಸರ್ಕಾರಕ್ಕೆ




ಹೆಚ್ಚಿನ ಅಧಿಕಾರ ದೊರಕಿದಂತಾಗಿದೆ ಎಂದು ಸಂವಿಧಾನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಸರಕುಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರವನ್ನು ಬಿಟ್ಟುಕೊಟ್ಟಿರುವುದರಿಂದ ಕೆಲವು ರಾಜ್ಯಗಳು ಎದುರಿಸುತ್ತಿರುವ ವಿಶಿಷ್ಟವಾದ ಸಮಸ್ಯೆಗಳಿಗೆ ಸಂಪನ್ಮೂಲ ರೂಢಿಸಿಕೊಳ್ಳುವುದರಿಂದ ವಂಚಿತವಾಗಿವೆ ಎಂಬುದನ್ನು ಕೆಲವು ತಜ್ಞರು ಎತ್ತಿತೋರಿಸಿದ್ದಾರೆ.

ಜಿಎಸ್‌ಟಿಯ ಕೆಲವು ಅಂಶಗಳನ್ನು ವಿರೋಧಿಸಿರುವ ತಮಿಳುನಾಡು ಹೇಳಿದ್ದೇನೆಂದರೆ, ತಾನು ಈಗಾಗಲೇ ಸಾಮಾಜಿಕ ಕ್ಷೇತ್ರದಲ್ಲಿ ಜಾರಿಗೆ ತಂದಿರುವ ಅನೇಕ ಕಾರ್ಯಕ್ರಮಗಳಿಗೆ ತನ್ನದೇ ಸಂಪನ್ಮೂಲಗಳಿಂದ ಹಣ ಸಂಗ್ರಹಿಸುತ್ತಿದ್ದುದು ಜಿಎಸ್‌ಟಿ ಯ ಜಾರಿಯಿಂದ ಹಣ ಸಂಗ್ರಹಿಸುವ ಅವಕಾಶ ತಪ್ಪಿಹೋಗಿದೆ ಎಂದು ವಾದಿಸಿದೆ.

ಸಾಮಾಜಿಕ ಮಾನದಂಡದಲ್ಲಿ ದಕ್ಷಿಣದ ರಾಜ್ಯಗಳು ದೇಶದ ಇತರೆ ರಾಜ್ಯಗಳಿಗಿಂತ ಉತ್ತಮವಾದ ಕೆಲಸ ಮಾಡಿವೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಈ ರಾಜ್ಯಗಳು ದೇಶದ ಇತರೆ ರಾಜ್ಯಗಳಿಗಿಂತ ಮುಂದಿರುವುದರ ಜೊತೆಗೆ ಅವುಗಳ ಸಾಧನೆಯನ್ನು ಒಇಸಿಡಿ ದೇಶಗಳ ಜೊತೆಗೆ ಹೋಲಿಸಬಹುದಾಗಿದೆ. ಅರ್ಥಶಾಸ್ತ್ರಜ್ಞ ಜೀನ್ ಡ್ರೇಝಿ ಹೇಳುವ ಪ್ರಕಾರ "ಕೇರಳ ಮತ್ತು ತಮಿಳುನಾಡು ರಾಜ್ಯಗಳು ಈ ಕ್ಷೇತ್ರಗಳ ಅಭಿವೃದ್ಧಿಯ ವೇಗದಲ್ಲಿ ಇತರೆ ರಾಜ್ಯಗಳಿಗೆ ಹೋಲಿಸಿದಾಗ ಯಾವಾಗಲೂ ಮುಂಚೂಣಿಯಲ್ಲಿವೆ."

ಕಾನೂನು ಪ್ರಕಾರ ಹೇಳುವುದಾದರೆ, ಜಿಎಸ್‌ಟಿಯ ಸಂವಿಧಾನ ತಿದ್ದುಪಡಿ ಕಾನೂನಿನ ಪ್ರಕಾರ ದೊಡ್ಡ ಪ್ರಮಾಣದ ತೆರಿಗೆಯನ್ನು ವಿಧಿಸುವ ಅಧಿಕಾರ ಚುನಾಯಿತವಾಗದ ಸಮಿತಿಯ ಕೈಗೆ ಹೋಗಿದೆ.ಈ ಕಾನೂನಿನ ಪ್ರಕಾರ

**(35ನೇ ಪುಟಕ್ಕೆ)**

ವಿಶೇಷ

# ಜಿಎಸ್‌ಟಿ – ನವ ಯುಗದ ಉದಯ

* ಸಿ ಎ ಉಪೇಂದ್ರ ಗುಪ್ತಾ




**ಸಮಗ್ರ ದೃಷ್ಟಿಕೋನದಿಂದ ನೋಡಿದರೆ ಇದೊಂದು ಸ್ಥಿತ್ಯಂತರ ತರುವ ಸುಧಾರಣೆಯಾಗಿರುತ್ತದೆ. ವ್ಯಾಪಾರ–ವ್ಯವಹಾರದಲ್ಲಿ ಅಭೂತಪೂರ್ವ ಬದಲಾವಣೆ, ಸಾಮಾಜಿಕ ಪುನರುತ್ಥಾನ, ಕ್ರಾಂತಿಕಾರಿ ನೀತಿಯ ಮೂಲಕ ಮುಂದಿನ ದಿನಗಳಲ್ಲಿ ಆರ್ಥಿಕ ಪ್ರಗತಿಗೆ ನಾಂದಿ ಹಾಡಲಿದೆ.**

**ಜೂ**ನ್ 30, 2017ರ ಮಧ್ಯರಾತ್ರಿ ಸಂಸತ್ ಭವನದಲ್ಲಿ ಮೊಳಗಿದ ಘಂಟೆಯ ಶಬ್ದ ಭಾರತದ ರಾಜಕೀಯ ಪ್ರಬುದ್ಧತೆ ಮತ್ತು ಒಗ್ಗಟ್ಟಿನ ಘೋಷಣೆಯಾಗಿ ವಿಶ್ವದೆಲ್ಲೆಡೆ ಪ್ರತಿಧ್ವನಿಸಿತು. ಅರಾಜಕ ಮತ್ತು ಸಂಕೀರ್ಣ ತೆರಿಗೆ ವ್ಯವಸ್ಥೆಯಿಂದ ಸರಕು ಮತ್ತು ಸರಳ ತೆರಿಗೆ ವ್ಯವಸ್ಥೆಗೆ ಸ್ಥಿತ್ಯಂತರ ಹೊಂದಲು ಭಾರತದ ಆರ್ಥಿಕತೆಯಲ್ಲಿ ಸ್ವರ್ಣಾಕ್ಷರಗಳಲ್ಲಿ ಬರೆದಿಡುವ ನಿಟ್ಟಿನಲ್ಲಿ ಇಡೀ ದೇಶವು ಒಗ್ಗಟ್ಟಿನಿಂದ ಮಾಡಿದ ಪ್ರಯತ್ನದ ಫಲವಿದು. ಭಾರತದ ರಾಜಕೀಯ ವರ್ಗಕ್ಕೆ ಯಶಸ್ಸಿನ ಹೊಸ ಭದ್ರಕೋಟೆಯಾಗಿ ಜಿಎಸ್‌ಟಿ ಹೊರಹೊಮ್ಮಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇದರ ಜೊತೆಗೆ ವ್ಯಾಪಾರಿ ವರ್ಗ ಮತ್ತು ಕೈಗಾರಿಕಾ ಕ್ಷೇತ್ರ ಮತ್ತು ಆ ಮೂಲಕ ಜನರು ಇದುವರೆಗೆ ತೊಂದರೆ ಎದುರಿಸಿದ ಅಸಂಖ್ಯಾತ, ಸಂಕೀರ್ಣವಾದ ಚಕ್ರವ್ಯೂಹದಂತಹ ತೆರಿಗೆಗಳಿಂದ ಜಿಎಸ್‌ಟಿ ವಿಮುಕ್ತಿ ನೀಡಿದೆ ಎನ್ನುವುದರಲ್ಲಿ ಅನುಮಾನಕ್ಕೆ ಎಡೆಯಿಲ್ಲ.

ಭಾರತವು ಒಕ್ಕೂಟ ರಾಜ್ಯಗಳ ವ್ಯವಸ್ಥೆಯನ್ನು ಅಳವಡಿಸಿಕೊಂಡು ರಾಜಕೀಯವಾಗಿ 1947ರಿಂದ ಒಂದು ದೇಶವಾಗಿ ಮುನ್ನಡೆಯುತ್ತಿದೆ. ಆದರೆ ನಾವು ಆರ್ಥಿಕ ಒಕ್ಕೂಟವನ್ನು ಮಾಡಿಕೊಂಡಿದ್ದೇವೆಯೇ? ತಮಿಳುನಾಡಿನಲ್ಲಿ ಕುಳಿತುಕೊಂಡು ವ್ಯಾಪಾರಿಯೊಬ್ಬ ಹಿಮಾಚಲ ಪ್ರದೇಶದಲ್ಲಿ ತನ್ನ ಸರಕುಗಳನ್ನು ಪ್ರತಿ ರಾಜ್ಯದ ತೆರಿಗೆ ದರದ ಬಗ್ಗೆ ಆತಂಕವಿಲ್ಲದೆ ಮಾರಾಟ ಮಾಡಲು ಸಾಧ್ಯವೇ? ಪ್ರತಿ ರಾಜ್ಯದ ಗಡಿಯಲ್ಲಿರುವ ಪರೀಕ್ಷಾ ಠಾಣೆಗಳಲ್ಲಿ ವಾಹನವನ್ನು ನಿಲ್ಲಿಸದೆ ಒಂದು ಸರಕು ವಾಹನ ಜಮ್ಮು–ಕಾಶ್ಮೀರದಿಂದ ಕನ್ಯಾಕುಮಾರಿಗೆ ನಿರಾತಂಕವಾಗಿ ಪ್ರಯಾಣಿಸಲು ಸಾಧ್ಯವೇ? ಇಂತಹ ಎಲ್ಲಾ ಅಡೆತಡೆಗಳನ್ನು ನಿವಾರಿಸುವ ಸಾಮರ್ಥ್ಯ ಜಿಎಸ್‌ಟಿಗೆ ಇದೆ. ಆ ಮೂಲಕ ಭಾರತವನ್ನು ಏಕ ಆರ್ಥಿಕತೆಯ ದೇಶವನ್ನಾಗಿ ಅಥವಾ ಯಾವುದೇ ಆತಂಕವಿಲ್ಲದೆ ಒಂದೇ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಲು ಅಥವಾ ದೇಶದ ಯಾವುದೇ ಒಂದು ರಾಜ್ಯದಲ್ಲಿ ತನಗೆ ಅನುಕೂಲವಾಗುವಂತೆ ಮಾಡಿಕೊಳ್ಳುವುದನ್ನು ತಡೆಯುವ ಸಾಮರ್ಥ್ಯವನ್ನು ಜಿಎಸ್‌ಟಿ ಹೊಂದಿದೆ.

ಈಗ ಜಿಎಸ್‌ಟಿ ಎಂದರೆ ಏನು ಎನ್ನುವ ಪ್ರಶ್ನೆಗೆ ಇನ್ನು ದೀರ್ಘ ಕಾಲ ಜಾಗವಿಲ್ಲ. ಜಿಎಸ್‌ಟಿಯ ಕುರಿತ ಅರಿವಿನ ಅಲೆ ದೇಶಾದ್ಯಂತ ಹರಡಿದೆ ಮತ್ತು ಚಿಕ್ಕ ಮಗು ಕೂಡ ಜಿಎಸ್‌ಟಿ ಎಂದರೆ ಸರಕು ಮತ್ತು ಸೇವಾ ತೆರಿಗೆ ಎಂಬುದನ್ನು ಕೂಡ ತಿಳಿದಿದೆ ಎನ್ನುವುದು ನಿಜವಾಗುತ್ತಿದೆ. ಆದರೆ ಇಂತಹ ಐತಿಹಾಸಿಕ ಸುಧಾರಣಾ ಕ್ರಮವನ್ನು ದೇಶದಲ್ಲಿ ಪರಿಚಯಿಸುವ ಅವಶ್ಯಕತೆಯೇನು ಎಂಬುದರ ಬಗ್ಗೆ ನಮಗೆ ಅರಿವು ಇಲ್ಲದಿರಬಹುದು. ಇಂತಹ ತೆರಿಗೆಯ ಹೊಸ ಯುಗ ಸಾಕಾರಗೊಳ್ಳಲು ಹತ್ತು ವರ್ಷಗಳಿಗೂ ಹೆಚ್ಚು ಕಾಲ ಏಕೆ ಬೇಕಾಯಿತು? ಇದಕ್ಕೆ ಉತ್ತರವು ನಮ್ಮ ದೇಶದ ತೆರಿಗೆ ವ್ಯವಸ್ಥೆಯ ಇತಿಹಾಸದ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಐತಿಹಾಸಿಕವಾಗಿ ಕೇಂದ್ರ ಸರ್ಕಾರವು ಉತ್ಪಾದನೆಯ ಮೇಲೆ ತೆರಿಗೆ (ಕೇಂದ್ರ ಅಬಕಾರಿ ಸುಂಕ), ಸೇವಾ ಶುಲ್ಕ ಮತ್ತು ಅಂತಾರಾಜ್ಯ ಸರಕು ಮಾರಾಟ (ಸಿಎಸ್‌ಟಿ– ಕೇಂದ್ರದ ತೆರಿಗೆ ಆದರೆ ರಾಜ್ಯ ಸರ್ಕಾರ ವಿಧಿಸಿ ಸಂಗ್ರಹಿಸುತ್ತವೆ) ಮತ್ತು ರಾಜ್ಯ ಸರ್ಕಾರಗಳು ವಿಧಿಸುವ ಚಿಲ್ಲರೆ ಮಾರಾಟದ ಮೇಲಿನ ತೆರಿಗೆ (ವ್ಯಾಟ್), ರಾಜ್ಯಗಳ ಸರಕು ಪ್ರವೇಶ ತೆರಿಗೆ (ಪ್ರವೇಶ

* ಆಯುಕ್ತರು, (ಜಿಎಸ್‌ಟಿ), ಸಿಬಿಇಸಿ, ಭಾರತ ಸರ್ಕಾರ. E-mail : gst-cbec@nic.in

ತೆರಿಗೆ), ಐಷಾರಾಮಿ ತೆರಿಗೆ, ಖರೀದಿ ತೆರಿಗೆ ಇತ್ಯಾದಿ ತೆರಿಗೆಗಳಿವೆ. ಇಂತಹ ಹಲವಾರು ತೆರಿಗೆಗಳು ಗೊಂದಲ ಮೂಡಿಸುವುದು ಮಾತ್ರವಲ್ಲ ಕ್ಲಿಷ್ಟಕರ ವ್ಯವಸ್ಥೆಯನ್ನು ಒಳಗೊಂಡಿರುವುದರಿಂದ ಯಾವುದೇ ತೆರಿಗೆ ಪಾವತಿದಾರರಿಗೆ ದು:ಸ್ವಪ್ನದಂತೆ ಭಾಸವಾಗುವುದರಲ್ಲಿ ಆಶ್ಚರ್ಯವಿಲ್ಲ. ಅದು ಮೇಲ್ನೋಟಕ್ಕೆ ಗೋಚರವಿಲ್ಲದಿರುವುದೂ ಇನ್ನಷ್ಟು ಸಮಸ್ಯೆಯನ್ನು ತಂದಿಟ್ಟಿತ್ತು. ಅಂದರೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಪಾವತಿಸಿದ ತೆರಿಗೆಯ ನಡುವೆ ಯಾವುದೇ ರೀತಿಯ ಮರು ಪಾವತಿಯ ಸರಣಿ ಇಲ್ಲದಿರುವುದು ಇದಕ್ಕೆ ಕಾರಣ. ಇದರ ಫಲಿತಾಂಶವಾಗಿ ಅಗಾಧ ಪ್ರಮಾಣ ತೆರಿಗೆಗಳು, ರಾಜ್ಯಗಳೊಳಗೆ ಮತ್ತು ಅಂತಾರಾಜ್ಯ ಮಾರಾಟ ತೆರಿಗೆ ಮಧ್ಯವರ್ತಿತನ ಹುಟ್ಟಿಕೊಂಡು ಈ ಕೃತಕ ಅಡೆತಡೆಗಳ ದುರುಪಯೋಗ ಮಾಡಿಕೊಳ್ಳುವ ಶಕ್ತಿಗಳು ಲಾಭ ಮಾಡಿಕೊಳ್ಳುತ್ತವೆ. ನಾನಾ ರೀತಿಯ ಅರ್ಜಿ ನಮೂನೆಗಳು, ಸಂಕೀರ್ಣವಾದ ವ್ಯಾಪಾರ ನಿಯಮಗಳು ಮತ್ತು ಪರಿಣಾಮಕಾರಿಯಲ್ಲದ ವ್ಯವಸ್ಥೆಯಿಂದಾಗಿ ಭಾರತದಲ್ಲಿ ವ್ಯಾಪಾರ ಮಾಡುವುದು ಬಹುತೇಕ ವ್ಯಾಪಾರಿಗಳು ಮತ್ತು ಕೈಗಾರಿಕೆಗಳು ಹರ ಸಾಹಸವೇ ಆಗಿ ಪರಿಣಮಿಸಿತ್ತು. ಇಂತಹ ಅಸಹನೀಯ ಅನುಭವಗಳು ಇನ್ನು ಮುಂದೆ ಕೆಟ್ಟ ದುಃಸ್ವಪ್ನದಂತೆ ಮರೆತು ಹೋಗಲಿದೆ ಮತ್ತು ನ್ಯಾಯಯುತ, ನೈತಿಕ ಉತ್ತರದಾಯಿತ್ವ, ಸ್ಪಂದನಶೀಲ ಮತ್ತು ಪಾರದರ್ಶಕತೆಯ ಜಿಎಸ್‌ಟಿ ಯುಗದಿಂದಾಗಿ ಸ್ಮಾರ್ಟ್ ಆಡಳಿತ ಸಾಕಾರಗೊಳ್ಳಲಿದೆ.

ಹಲವಾರು ತೆರಿಗೆಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹೆಸರಿನಲ್ಲಿ ಸಮ್ಮಿಳನಗೊಳಿಸಲಾಗಿದೆ. ಇದನ್ನು ಸರಕು ಮತ್ತು ಸೇವೆಗಳ ಪೂರೈಕೆ ಅಥವಾ ಎರಡರ ಮೇಲೆ ಉತ್ಪಾದನೆಯಿಂದ ಅಥವಾ ಆಮದಿನಿಂದ ಹಿಡಿದು ಚಿಲ್ಲರೆ ಮಾರಾಟದ ಕೊನೆಯ ಹಂತದವರೆಗೆ ಪೂರೈಕೆ ಸರಣಿಯ ಪ್ರತಿ ಹಂತದಲ್ಲೂ ವಿಧಿಸಲಾಗುತ್ತದೆ. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ತೆರಿಗೆ ವಿಧಿಸುವ ಸ್ವತಂತ್ರ ಅಧಿಕಾರವಿದೆ. ಆದ್ದರಿಂದ ಭಾರತದಲ್ಲಿ ಜಿಎಸ್‌ಟಿಯನ್ನು ಕೇಂದ್ರ ಸರ್ಕಾರ ವಿಧಿಸುವ ಮತ್ತು ಸಂಗ್ರಹಿಸುವ ಕೇಂದ್ರ ಜಿಎಸ್‌ಟಿ (ಇನ್ನು ಮುಂದೆ ಅದನ್ನು ಸಿಜಿಎಸ್‌ಟಿ ಅಥವಾ ಕೇಂದ್ರ ತೆರಿಗೆ ಎಂದು ಕರೆಯಲಾಗುತ್ತದೆ) ಮತ್ತು ಸರಕು ಅಥವಾ ಸೇವೆಗಳ ಅಂತರ್ ರಾಜ್ಯ ಪೂರೈಕೆಯ ಮೇಲೆ ರಾಜ್ಯಗಳು ವಿಧಿಸಿ ಸಂಗ್ರಹಿಸುವ ರಾಜ್ಯ ಜಿಎಸ್‌ಟಿ (ಇನ್ನು ಮುಂದೆ ಅದನ್ನು ಎಸ್‌ಜಿಎಸ್‌ಟಿ ಅಥವಾ ರಾಜ್ಯ ತೆರಿಗೆ ಎಂದು ಕರೆಯಲಾಗುತ್ತದೆ). ಅಂತಾರಾಜ್ಯ ಸರಕು ಅಥವಾ ಸೇವೆ ಪೂರೈಕೆಯ ಮೇಲೆ ಕೇಂದ್ರವು ಏಕೀಕೃತ ಜಿಎಸ್‌ಟಿ (ಇನ್ನು ಮುಂದೆ ಇದನ್ನು ಐಜಿಎಸ್‌ಟಿ ಅಥವಾ ಏಕೀಕೃತ ಜಿಎಸ್‌ಟಿ ಎಂದು ಕರೆಯಲಾಗುತ್ತದೆ)ಯನ್ನು ಕೂಡ ವಿಧಿಸಿ ಸಂಗ್ರಹಿಸಬಹುದು. ಇವುಗಳನ್ನು ಹೊರತು ಪಡಿಸಿ ಅಂತರ್ ಕೇಂದ್ರಾಡಳಿತ ಪ್ರದೇಶಗಳ ಪೂರೈಕೆಗೆ ಶಾಸನವಿಲ್ಲದೆ ಕೇಂದ್ರಾಡಳಿತ ಪ್ರದೇಶಗಳ ಜಿಎಸ್‌ಟಿ (ಯುಜಿಎಸ್‌ಟಿ ಅಥವಾ ಕೇಂದ್ರಾಡಳಿತ ತೆರಿಗೆ) ವಿಧಿಸಬಹುದಾಗಿದೆ. ಇಷ್ಟೇ ಅಲ್ಲ ಜಿಎಸ್‌ಟಿ ಜಾರಿಯಿಂದ ರಾಜ್ಯಗಳು ಎದುರಿಸಬಹುದಾದ ತೆರಿಗೆ ನಷ್ಟವನ್ನು ಭರ್ತಿ ಮಾಡಲು ಕೂಡ ಕೇಂದ್ರ ಸರಕಾರ ಸಹಾಯಧನ ಒದಗಿಸಬೇಕಾಗುತ್ತದೆ. ಇದಕ್ಕಾಗಿ ಕೆಲವೊಂದು ನಿರ್ದಿಷ್ಟ ಜಿಎಸ್‌ಟಿ ಸಹಾಯಧನ ತೆರಿಗೆಯನ್ನು ಐಷಾರಾಮಿ ಮತ್ತು ಸಮಾಜಕ್ಕೆ ಹಾನಿಕಾರಕವಾಗಬಹುದಾದ ಸರಕು ಮತ್ತು ಸೇವೆಯ ಮೇಲೆ ವಿಧಿಸಲಾಗುವುದು.

**ಜಿಎಸ್‌ಟಿಯ ಪ್ರಮುಖಾಂಶಗಳು**

ಭಾರತದಲ್ಲಿ ಜಿಎಸ್‌ಟಿ ಮಾದರಿಯನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಅದರ ಪ್ರಮುಖ ಅಂಶಗಳನ್ನು ಮನಗಾಣುವುದು ಮುಖ್ಯವಾಗಿದ್ದು, ಅವುಗಳು ಈ ಮುಂದಿನಂತಿವೆ :

* ಜಮ್ಮು-ಕಾಶ್ಮೀರ ಸೇರಿದಂತೆ ದೇಶದ ಎಲ್ಲಾ ಭೌಗೋಳಿಕ ಪ್ರದೇಶ ಜಿಎಸ್‌ಟಿ ವ್ಯಾಪ್ತಿಗೆ ಬರುತ್ತದೆ. * ಈಗಿರುವ ಸರಕು ಉತ್ಪಾದನೆ ಅಥವಾ ಸರಕು ಮಾರಾಟ ಅಥವಾ ಸೇವೆಯ ಮೇಲಿನ ತೆರಿಗೆ ಬದಲಾಗಿ ಜಿಎಸ್‌ಟಿ ಎಲ್ಲಾ ಸರಕು ಅಥವಾ ಸೇವೆಯ ಪೂರೈಕೆ'ಗೆ ಅನ್ವಯವಾಗುತ್ತದೆ. * ಈಗಿರುವ ಉತ್ಪನ್ನ ಉತ್ಪಾದನೆಯಾದ ಮೂಲ ಪ್ರದೇಶದ ಹೊರತಾಗಿ ಎಲ್ಲಿ ಅದರ ಬಳಕೆಯಾಗುತ್ತದೆಯೊ ಅದರ ಆಧಾರದಲ್ಲಿ ತೆರಿಗೆ ವಿಧಿಸಲಾಗುತ್ತದೆ. * ಆಮದು ಆದ ಸರಕುಗಳನ್ನು ಅಂತರ್‌ರಾಜ್ಯ ಪೂರೈಕೆ ಎಂದು ಪರಿಗಣಿಸಲಾಗುತ್ತದೆ ಮತ್ತು ಇದು



ಐಜಿಎಸ್‌ಟಿ ವ್ಯಾಪ್ತಿಯಲ್ಲಿ ಹೆಚ್ಚುವರಿ ಸೀಮಾ ಸುಂಕದ ವ್ಯಾಪ್ತಿಗೆ ಬರುತ್ತದೆ. * ಆಮದು ಸೇವೆಯನ್ನು ಅಂತಾರಾಜ್ಯ ಪೂರೈಕೆ ಎಂದು ಪರಿಗಣಿಸಲಾಗುತ್ತದೆ ಮತ್ತು ಇದು ಮೀಸಲು ಐಜಿಎಸ್‌ಟಿ ತೆರಿಗೆ ಆಧಾರಕ್ಕೆ ಒಳಪಡುತ್ತದೆ. * ಕೇಂದ್ರ ಮತ್ತು ರಾಜ್ಯಗಳು ಒಪ್ಪಿರುವ ಜಿಎಸ್‌ಟಿ (ಜಿಎಸ್‌ಟಿಸಿ) ಆಯೋಗವು ಸಮ್ಮತಿ ಸೂಚಿಸಿರುವ ದರದಲ್ಲಿ ಸಿಜಿಎಸ್‌ಟಿ, ಎಸ್‌ಜಿಎಸ್‌ಟಿ/ ಯುಟಿಜಿಎಸ್‌ಟಿ ಮತ್ತು ಐಜಿಎಸ್‌ಟಿ ಗಳನ್ನು ನಿಗದಿ ಪಡಿಸಲಾಗುತ್ತದೆ. * ನಾಲ್ಕು ಸ್ತರಗಳ ಜಿಎಸ್‌ಟಿ ನಿಗದಿಯಾಗಿದ್ದು, ಅವುಗಳೆಂದರೆ ಎಲ್ಲಾ ಸರಕು ಮತ್ತು ಸೇವೆಗಳ ಮೇಲೆ ಶೇ. 5, ಶೇ. 12, ಶೇ. 18 ಮತ್ತು ಶೇ. 28 ನಿಗದಿಯಾಗಿದೆ. ದುಬಾರಿ ಲೋಹಗಳು ಶೇ. 3 ಹಾಗೂ ಕಚ್ಚಾ ಲೋಹಗಳು ಶೇ. 0.25ರ ತೆರಿಗೆ ವ್ಯಾಪ್ತಿಗೆ ಒಳಪಡುತ್ತವೆ. ಕೆಲವು ನಿರ್ದಿಷ್ಟ ಸರಕು ಮತ್ತು ಸೇವೆಗಳು ತೆರಿಗೆಯಿಂದ ವಿನಾಯಿತಿ ಪಡೆದಿವೆ. * ಮಾನವ ಸೇವನೆಯ ಮದ್ಯಸಾರ (ಆಲ್ಕೋಹಾಲ್)ವನ್ನು ಹೊರತು ಪಡಿಸಿ ಎಲ್ಲಾ ಸರಕು ಮತ್ತು ಸೇವೆಗಳು ಸಾಂವೈಧಾನಿಕವಾಗಿ ಜಿಎಸ್‌ಟಿ ವ್ಯಾಪ್ತಿಗೆ ಬರುತ್ತವೆ. ಇದನ್ನು ಹೊರತು ಪಡಿಸಿ ಐದು ಪೆಟ್ರೋಲಿಯಂ ಉತ್ಪನ್ನಗಳು (ಕಚ್ಚಾ ತೈಲ, ಪೆಟ್ರೋಲ್, ಡೀಸೆಲ್, ಎಟಿಎಫ್ ಮತ್ತು ನೈಸರ್ಗಿಕ ಅನಿಲ) ಪ್ರಸಕ್ತ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗುಳಿದಿವೆ ಮತ್ತು ಜಿಎಸ್‌ಟಿಸಿ ಸಮಿತಿಯ ಶಿಫಾರಸಿನ ಅನ್ವಯ ಅವುಗಳನ್ನು ಕೂಡ ಜಿಎಸ್‌ಟಿ ವ್ಯಾಪ್ತಿಗೆ ತರಬಹುದಾಗಿದೆ. * 20 ಲಕ್ಷ ರೂಪಾಯಿ (ವಿಶೇಷ ರಾಜ್ಯ ಸ್ಥಾನಮಾನದಂತೆ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತು ಪಡಿಸಿ ಇದುವರೆಗೆ ಸಂವಿಧಾನದ 279 ಎ ವಿಧಿಯ ಪ್ರಕಾರ 10 ಲಕ್ಷ ರೂ.ವರೆಗೆ ವಿಶೇಷ ವಿನಾಯಿತಿ) ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ / ಯುಟಿಜಿಎಸ್‌ಟಿಯನ್ನು ಒಟ್ಟಾರೆ ಸಾಮಾನ್ಯ ಜಿಎಸ್‌ಟಿ ವಿನಾಯಿತಿಯನ್ನು ಒದಗಿಸಲಾಗಿದೆ. ಇದರ ಹೊರತಾಗಿ ಸಂಯೋಜಿತ ಯೋಜನೆಯಡಿ

ತೆರಿಗೆ ಪಾವತಿ (ಅಂದರೆ, ಯಾವುದೇ ಪುನರ್ ಪಾವತಿಯಿಲ್ಲದೆ ಏಕ ರೂಪದ ದರದಲ್ಲಿ ತೆರಿಗೆ ಪಾವತಿ) ಅವಕಾಶವು ಚಿಕ್ಕ ತೆರಿಗೆ ಪಾವತಿದಾರರಿಗೆ (ನಿರ್ದಿಷ್ಟ ಉತ್ಪಾದಕರು ಮತ್ತು ಸೇವಾದಾರರನ್ನು ಹೊರತು ಪಡಿಸಿ) ವಾರ್ಷಿಕ 75 ಲಕ್ಷ ರೂ. ವ್ಯವಹಾರ ಹೊಂದಿರುವ (ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರಾ ಖಂಡದಂತಹ ಸಂವಿಧಾನದ 279ಎ ವಿಧಿಯಡಿ ಕಲ್ಪಿಸಿರುವ ವಿಶೇಷ ಸ್ಥಾನಮಾನದ ರಾಜ್ಯಗಳಿಗೆ ಇದು ವಾರ್ಷಿಕ 50 ಲಕ್ಷ ರೂ.) ಮಾಡಲು ಅವಕಾಶ ಒದಗಿಸಲಾಗಿದೆ. * ಎಸ್‌ಇಝಡ್ ರಫ್ತು ಮತ್ತು ಪೂರೈಕೆಗೆ ಶೂನ್ಯ ತೆರಿಗೆ ವಿಧಿಸಲಾಗುತ್ತದೆ. * ಸಾಮಗ್ರಿಗಳಿಗೆ ಪಾವತಿ ಮಾಡಲಾದ ಸಿಜಿಎಸ್‌ಟಿ ಕೇವಲ ಉತ್ಪನ್ನಗಳಿಗೆ ಸಿಜಿಎಸ್‌ಟಿ ಪಾವತಿಗೆ ಅನ್ವಯವಾಗುತ್ತದೆ (ಕ್ರೆಡಿಟ್ ಆಫ್ ಸಿಜಿಎಸ್‌ಟಿ ಕೇವಲ ಸಿಜಿಎಸ್‌ಟಿ ಔಟ್ ಪುಟ್–ಐಟಿಸಿ) ಮತ್ತು ಎಸ್‌ಜಿಎಸ್‌ಟಿ /ಯುಟಿಜಿಎಸ್‌ಟಿ ಪಾವತಿಯನ್ನು ಕೇವಲ ಎಸ್‌ಜಿಎಸ್‌ಟಿ/ ಯುಟಿಜಿಎಸ್‌ಟಿಗೆ ಮಾತ್ರ ಬಳಕೆ ಮಾಡಲು ಸಾಧ್ಯವಾಗುತ್ತದೆ. ಇದನ್ನು ವಿವರವಾಗಿ ಹೇಳುವುದಾದರೆ, ಉತ್ಪಾದನಾ ಸಾಮಗ್ರಿಗಳಿಗೆ ಪಾವತಿ ಮಾಡಿದ ತೆರಿಗೆಯನ್ನು ಕೆಲವೊಂದು ನಿರ್ದಿಷ್ಟ ಅಂತಾರಾಜ್ಯ ಐಜಿಎಸ್‌ಟಿಗೆ ಪಾವತಿ ಮಾಡಿದ ತೆರಿಗೆಗಳ ಮೂಲಕ ಬಳಕೆ ಮಾಡಿಕೊಳ್ಳಲು ಸಾಧ್ಯವಾಗದು. ಇವುಗಳ ಲಾಭವನ್ನು ಈ ಮುಂದಿನ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ :

* ಸಿಜಿಎಸ್‌ಟಿ ಮೇಲೆ ಪಾವತಿ ಮಾಡಿದ ಐಟಿಸಿಯನ್ನು ಸಿಜಿಎಸ್‌ಟಿ ಮತ್ತು ಐಜಿಎಸ್‌ಟಿ ಮೇಲೆ ಪಾವತಿ ಮಾಡಲು ಅವಕಾಶ ನೀಡಲಾಗಿದೆ. * ಎಸ್‌ಜಿಎಸ್‌ಟಿ ಮೇಲೆ ಮಾಡಿದ ಪಾವತಿಯನ್ನು ಎಸ್‌ಜಿಎಸ್‌ಟಿ ಮತ್ತು ಐಜಿಎಸ್‌ಟಿ ವಿರುದ್ಧ ಪಾವತಿ ಮಾಡಲು ಅವಕಾಶ ನೀಡಲಾಗಿದೆ. * ಯುಟಿಜಿಎಸ್‌ಟಿ ಮೇಲೆ ಮಾಡಿದ ಐಟಿಸಿಯನ್ನು ಯುಟಿಜಿಎಸ್‌ಟಿ ಮತ್ತು ಐಜಿಎಸ್‌ಟಿ ಮೇಲೆ ಪಾವತಿ ಮಾಡಲು




ಅವಕಾಶ ನೀಡಲಾಗಿದೆ. * ಐಜಿಎಸ್‌ಟಿ ಮೇಲಿನ ಐಟಿಸಿಯನ್ನು ಐಜಿಎಸ್‌ಟಿ, ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ / ಯುಟಿಜಿಎಸ್‌ಟಿ ವಿರುದ್ಧ ಪಾವತಿ ಮಾಡಲು ಅವಕಾಶ ನೀಡಲಾಗಿದೆ. * ನಾನಾ ವರ್ಗದ ಜನರು ನಾನಾ ರೀತಿಯ ವಿನಾಯಿತಿ ಜೊತೆಗೆ ಇಲೆಕ್ಟ್ರಾನಿಕ್ ಫೈಲಿಂಗ್ ಮಾಡಬಹುದಾಗಿದೆ. * ಇಂಟರ್ನೆಟ್ ಬ್ಯಾಂಕಿಂಗ್, ಡೆಬಿಟ್/ಕ್ರೆಡಿಟ್ ಕಾರ್ಡ್, ನ್ಯಾಷನಲ್ ಇಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ (ಎನ್‌ಇಎಫ್‌ಟಿ)/ ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್ (ಆರ್‌ಟಿಜಿಎಸ್) ಸೇರಿದಂತೆ ನಾನಾ ಮಾದರಿಯಲ್ಲಿ ತೆರಿಗೆದಾರರಿಗೆ ತೆರಿಗೆ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. * ಪಾವತಿಸಿದ ತೆರಿಗೆಯನ್ನು ಸೂಕ್ತ ದಿನಾಂಕಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳ ಒಳಗೆ ಪಡೆಯಲು ತೆರಿಗೆದಾರರಿಗೆ ಅಥವಾ ಸಂಬಂಧಪಟ್ಟ ವ್ಯಕ್ತಿಗೆ ಅವಕಾಶ ಒದಗಿಸಲಾಗಿದೆ. * ನೊಂದಾಯಿತ ತೆರಿಗೆದಾರರಿಗೆ ಸ್ವಯಂ ತೆರಿಗೆ ಮೌಲ್ಯಮಾಪನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. * ನೊಂದಾಯಿತ ವ್ಯಕ್ತಿಗಳ ಲೆಕ್ಕಪತ್ರ ಪರಿಶೀಲನೆಯನ್ನು ಮಾಡುವ ಮೂಲಕ ಅವರು ನೀಡಿದ ವಿವರಗಳ ದೃಢೀಕರಣವನ್ನು ಮಾಡುವ ಅವಕಾಶ ಕಾಯ್ದೆಯಡಿ ಬರುತ್ತದೆ. * ಸಂಬಂಧಪಟ್ಟ ಇಲಾಖೆಯಿಂದ ತೆರಿಗೆಯ ಕುರಿತು ಸ್ಪಷ್ಟೀಕರಣ ಪಡೆಯಲು ಪ್ರತಿ ರಾಜ್ಯದಲ್ಲೂ ಪ್ರಾಧಿಕಾರ ನೆರವು ನೀಡುತ್ತದೆ. ಸಿಜಿಎಸ್ ಟಿ ಕಾಯ್ದೆಯಡಿ ಅಂತಹ ಪ್ರಾಧಿಕಾರವನ್ನು ಕೇಂದ್ರ ಸರಕಾರ ಅಳವಡಿಸಿಕೊಂಡಿರುತ್ತದೆ. * ಲಾಭಕೋರತನ ತಡೆ ವಿಧಿಯನ್ನು ಅಳವಡಿಸಿಕೊಳ್ಳಲಾಗಿದ್ದು, ಇದು ಸರಕು ಮತ್ತು ಸೇವೆಯ ತೆರಿಗೆ ಇಳಿಕೆಯಿಂದಾಗುವ ಲಾಭವನ್ನು ಗ್ರಾಹಕರಿಗೆ ಒದಗಿಸುವುದು ಕಡ್ಡಾಯ ಮಾಡುವ ಮೂಲಕ ಸರಕು ಅಥವಾ ಸೇವೆ ಅಥವಾ ಗ್ರಾಹಕರಿಗೆ ಲಾಭವನ್ನು ವರ್ಗಾಯಿಸಲು ನೆರವಾಗುತ್ತದೆ. * ಈಗಿರುವ ತೆರಿಗೆದಾರರಿಗೆ ಜಿಎಸ್‌ಟಿ ಯುಗದಲ್ಲಿ ತಮ್ಮ ತೆರಿಗೆ ವ್ಯವಹಾರವನ್ನು ಸರಳವಾಗಿ ಸ್ಥಿತ್ಯಂತರ ಮಾಡಿಕೊಳ್ಳುವ ನಿಟ್ಟಿನಲ್ಲಿ ಅವಕಾಶ ಒದಗಿಸಲಾಗಿದೆ.

## ಜಿಎಸ್ ಟಿ ಲಾಭಗಳು

### ಭಾರತದಲ್ಲೇ ತಯಾರಿಸಿ:

* ಇದು ಭಾರತದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಏಕರೂಪದ ತೆರಿಗೆ ವ್ಯವಸ್ಥೆಯನ್ನು



ಜಾರಿಗೆ ತರಲು ನೆರವಾಗುತ್ತಿದ್ದು, ಭಾರತದಲ್ಲೇ ತಯಾರಿಸಿ' ಆಂದೋಲನದ ಅಡಿಯಲ್ಲಿ ವಿದೇಶಿ ಹೂಡಿಕೆಯನ್ನು ಉತ್ತೇಜಿಸಲು ನೆರವಾಗುತ್ತದೆ. * ಪೂರೈಕೆಯ ಪ್ರತಿಯೊಂದು ಹಂತದಲ್ಲೂ ಸರಕು ಮತ್ತು ಸೇವೆಗಳಿಗೆ ತೆರಿಗೆ ಮರು ಪಾವತಿ ಲಾಭವನ್ನು ನೀಡುತ್ತದೆ. * ಕಾನೂನು, ಪ್ರಕ್ರಿಯೆ ಮತ್ತು ತೆರಿಗೆ ದರದಲ್ಲಿ ಸಾಮರಸ್ಯ ಕಾಪಾಡಿಕೊಳ್ಳುತ್ತದೆ. * ಮುಖ್ಯವಾಗಿ ರಫ್ತು ವ್ಯವಹಾರದಲ್ಲಿ ಹೆಚ್ಚು ಪರಿಣಾಕಾರಿಯಾಗುವ ಮೂಲಕ ನಮ್ಮ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ನೀಡುವ ಮೂಲಕ ಭಾರತದ ರಫ್ತು ವಲಯಕ್ಕೆ ಉತ್ತೇಜನ ನೀಡುತ್ತದೆ. * ಕಂಪನಿಗಳ ಮೇಲಿನ ಸರಾಸರಿ ತೆರಿಗೆ ಹೊರೆ ಕಡಿಮೆಯಾಗುವ ಸಾಧ್ಯತೆಯಿದ್ದು, ಈ ಮೂಲಕ ಉತ್ಪನ್ನಗಳ ಬೆಲೆ ಇಳಿಕೆ ಮತ್ತು ಕಡಿಮೆ ಬೆಲೆಯಿಂದ ಹೆಚ್ಚು ಖರೀದಿಯಾಗುವ ಮೂಲಕ ಉತ್ಪಾದನೆ ಹೆಚ್ಚಿ ಒಟ್ಟಾರೆ ಕೈಗಾರಿಕೆಗಳ ಪ್ರಗತಿ ಹೆಚ್ಚಳವಾಗುವ ನಿರೀಕ್ಷೆಯಿದೆ. ಇದು ಭಾರತವನ್ನು 'ಉತ್ಪಾದನಾ ಕೇಂದ್ರ'ವನ್ನಾಗಿ ಪರಿವರ್ತಿಸಲಿದೆ.

### ಸುಗಮ ವ್ಯವಹಾರ :

* ಸರಳ ತೆರಿಗೆ ಯುಗವು ಹಲವು ವಿನಾಯಿತಿಗಳನ್ನು ಒದಗಿಸುತ್ತದೆ. * ಪ್ರಸಕ್ತ ಇರುವ ಪರೋಕ್ಷ ತೆರಿಗೆ ವ್ಯವಸ್ಥೆಯ ಬಹುಸ್ತರದ ತೆರಿಗೆಯನ್ನು ಕಡಿಮೆ ಮಾಡುವ ಮೂಲಕ ಸರಳ ಮತ್ತು ಏಕರೂಪದ ತೆರಿಗೆ ವ್ಯವಸ್ಥೆಗೆ ಅವಕಾಶ ನೀಡುತ್ತದೆ. * ಕಂಪನಿಗಳ ಉತ್ಪಾದನಾ ವೆಚ್ಚ ಇಳಿಕೆ – ತೆರಿಗೆ ಪಾವತಿಯ ದೃಢೀಕರಣಕ್ಕೆ ಬಹು ಸ್ತರ ದಾಖಲೆಗಳ ಅಗತ್ಯವಿಲ್ಲ – ಅದ್ದರಿಂದ ಸಂಪನ್ಮೂಲ ಮೇಲೆ ಹೂಡಿಕೆ ಇಳಿಕೆ ಮತ್ತು ದಾಖಲೆಗಳ ನಿರ್ವಹಣೆಗೆ ಮಾನವ ಸಂಪನ್ಮೂಲದ ಇಳಿಕೆಯಾಗುತ್ತದೆ. * ನೊಂದಣಿ, ತೆರಿಗೆ

ದಾಖಲೆ (ರಿಟರ್ನ್ಸ್), ಮರು ಪಾವತಿ, ತೆರಿಗೆ ಪಾವತಿ ಮೊದಲಾದ ಪ್ರಕ್ರಿಯೆಗಳಿಗೆ ಸರಳ ಮತ್ತು ಸ್ವಯಂ ವಿಧಾನಗಳನ್ನು ಬಳಸಬಹುದಾಗಿದೆ. * ಸಾಮಾನ್ಯ ಜಿಎಸ್‌ಟಿಎನ್ ಜಾಲತಾಣ ಮೂಲಕ ಎಲ್ಲಾ ಸಾಮಾನ್ಯ ಪ್ರಕ್ರಿಯೆಗಳು ನಡೆಯುತ್ತವೆ – ಈ ಮೂಲಕ ತೆರಿಗೆ ಪಾವತಿದಾರರು ಮತ್ತು ತೆರಿಗೆ ಆಡಳಿತಾಧಿಕಾರಿಗಳ ನಡುವೆ ನೇರ ಸಂಪರ್ಕದ ಅವಶ್ಯಕತೆ ಕಡಿಮೆಯಾಗುತ್ತದೆ. * ತೆರಿಗೆ ಪಾವತಿದಾರರ ನೊಂದಣಿ, ತೆರಿಗೆ ಮರು ಪಾವತಿ, ಏಕರೂಪದ ತೆರಿಗೆ ರಿಟರ್ನ್ಸ್, ಸಾಮಾನ್ಯ ತೆರಿಗೆ ನೀತಿ, ಸರಕು ಮತ್ತು ಸೇವೆಗಳ ವರ್ಗೀಕರಣದ ಕುರಿತು ಸಾಮಾನ್ಯ ವ್ಯವಸ್ಥೆಯು ತೆರಿಗೆ ವ್ಯವಸ್ಥೆಯ ಮೇಲೆ ಇನ್ನಷ್ಟು ಹೆಚ್ಚಿನ ಸ್ಥಿರೀಕರಣವನ್ನು ಸಾಧಿಸಲು ನೆರವಾಗುತ್ತದೆ.

**ಗ್ರಾಹಕರಿಗೆ ಲಾಭ :**

* ಉತ್ಪಾದಕರು, ಚಿಲ್ಲರೆ ವ್ಯಾಪಾರಿಗಳು ಮತ್ತು ಪೂರೈಕೆ ಸೇವಾದಾರರಿಗೆ ತೆರಿಗೆ ಪುನರ್ ಪಾವತಿ ಸೌಲಭ್ಯದ ಹಿನ್ನೆಲೆಯಲ್ಲಿ (ಇನ್‌ಪುಟ್ ಕ್ರೆಡಿಟ್) ಒಟ್ಟಾರೆ ಅಂತಿಮ ಸರಕಿನ ಬೆಲೆಯಲ್ಲಿ ಇಳಿಕೆಯಾಗುವ ನಿರೀಕ್ಷೆಯಿದೆ. * ಕಂಪನಿಗಳ ಮೇಲೆ ಆಗುವ ಸರಾಸರಿ ತೆರಿಗೆ ಹೊರೆಯು ಕಡಿಮೆಯಾಗಿ ಆ ಮೂಲಕ ಉತ್ಪನ್ನದ ಬೆಲೆ ಇಳಿಕೆಯಾಗುತ್ತದೆ. ಅದರಿಂದ ಗ್ರಾಹಕರ ಸಂಖ್ಯೆಯೂ ಹೆಚ್ಚಾಗುವ ನಿರೀಕ್ಷೆಯಿದೆ.

**ಉಪಸಂಹಾರ**

ಸ್ಥೂಲ ದೃಷ್ಟಿಕೋನದಿಂದ ನೋಡಿದರೆ ಕೇವಲ ಪರೋಕ್ಷ ತೆರಿಗೆ ಸುಧಾರಣೆ ಮಾತ್ರ ಜಿಎಸ್‌ಟಿಯಿಂದ ಕಂಡು ಬರುತ್ತದೆ. ಆದರೆ ಸಮಗ್ರ ದೃಷ್ಟಿಕೋನದಿಂದ ನೋಡಿದರೆ ಇದೊಂದು ಸ್ಥಿತ್ಯಂತರ ತರುವ ಸುಧಾರಣೆಯಾಗಿರುತ್ತದೆ.

ವ್ಯಾಪಾರ – ವ್ಯವಹಾರದಲ್ಲಿ ಅಭೂತಪೂರ್ವ ಬದಲಾವಣೆ, ಸಾಮಾಜಿಕ ಪುನರುತ್ಥಾನ, ಕ್ರಾಂತಿಕಾರಿ ನೀತಿಯ ಮೂಲಕ ಮುಂದಿನ ದಿನಗಳಲ್ಲಿ ಆರ್ಥಿಕ ಪ್ರಗತಿಗೆ ನಾಂದಿ ಹಾಡಲಿದೆ. ಜೊತೆಗೆ ವಿಶ್ವದ ಎಲ್ಲೆಡೆ ನಡೆಯುವ ಆರ್ಥಿಕ ಬೆಳವಣಿಗೆಗಳಿಂದ ನಮ್ಮ ದೇಶದ ಆರ್ಥಿಕತೆಗೆ ಬೇರೆ ಕಡೆಯಿಂದ ಬರುವ ಬೆದರಿಕೆಗೂ ಭವಿಷ್ಯದಲ್ಲಿ ತಡೆಯೊಡ್ಡಲಿದು, ಭಾರತವು ಉನ್ನತ ಹಾಗೂ ಸ್ವತಂತ್ರ ಆರ್ಥಿಕ ನೀತಿಯಲ್ಲಿ ಉಜ್ವಲವಾಗಿ ಬೆಳಗಲು ಅವಕಾಶ ನೀಡಲಿದೆ. ❑

(31ನೇ ಪುಟದಿಂದ)

## ಒಕ್ಕೂಟ ಆರ್ಥಿಕ ಸಂಬಂಧಗಳ ಸಮತೋಲನ

ರಚನೆಯಾಗಿರುವ ಜಿಎಸ್‌ಟಿ ಕೌನ್ಸಿಲ್ ತೆರಿಗೆದರವನ್ನು ನಿಗದಿ ಪಡಿಸುವ ಅಧಿಕಾರವನ್ನು ಸಂಸತ್ ಮತ್ತು ರಾಜ್ಯಗಳ ವಿಧಾನಸಭೆಗಳ ಅಧಿಕಾರವನ್ನು ಕಿತ್ತುಕೊಂಡಿದೆ. ಹಾಗಾಗಿ ಇಡೀ ದೇಶದ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದ ಎಲ್ಲ ರೀತಿಯ ತೆರಿಗೆಯ ದರಗಳನ್ನು ನಿಗದಿಪಡಿಸುವ ಅಧಿಕಾರ ಈಗ ಕೌನ್ಸಿಲ್ ಕೈನಲ್ಲಿದೆ. ಈ ಅಧಿಕಾರ ಚುನಾಯಿತರಾದ ಸಂಸತ್ ಮತ್ತು ರಾಜ್ಯಗಳ ವಿಧಾನಸಭೆಗಳ ಸದಸ್ಯರಿಗಿತ್ತು. ಈಗ ಕೌನ್ಸಿಲ್‌ಗೆ ತೆರಿಗೆ ದರ ನಿಗದಿಪಡಿಸುವಲ್ಲಿ ಸರ್ವೋಚ್ಚ ಸ್ಥಾನದಲ್ಲಿದೆ. ಈ ಕೌನ್ಸಿಲ್‌ಗೆ ಒಂದು ರೀತಿಯಲ್ಲಿ ಹಿರಿಯರು ಆಯ್ಕೆ ಮಾಡಿದ ಸರ್ವೋಚ್ಚ ಸಮಿತಿಯಾಗಿದ್ದು ದೇಶದ ಮತದಾರರಿಗೆ ನೇರವಾದ ಉತ್ತರದಾಯಿಯಾಗಿರುವುದಿಲ್ಲ.

ಜಿಎಸ್‌ಟಿ ಜಾರಿಗೆ ಬಂದ ನಂತರ ಕೆಲವು ಕ್ಷೇತ್ರಗಳಲ್ಲಿ ಪರೋಕ್ಷ ತೆರಿಗೆ ವಿಧಿಸುವ ಅಧಿಕಾರವನ್ನು ರಾಜ್ಯಗಳು ಹೊಂದಿದ್ದರೂ, ಕೆಲವು ತೆರಿಗೆಗಳನ್ನು ವಿಧಿಸುವ ಮತ್ತು ಹೆಚ್ಚಿಸುವ ಅಧಿಕಾರದ ವಿಷಯಗಳಲ್ಲಿ ಅವುಗಳ ಅಧೀನದಲ್ಲಿರುವ ಸ್ಥಳೀಯ ಸಂಸ್ಥೆಗಳಾದ ನಗರಸಭೆಗಳು, ನಗರಪಾಲಿಕೆಗಳಿಗಿರುವ ಅಧಿಕಾರದಷ್ಟೂ ರಾಜ್ಯಗಳಿಗೆ ಇಲ್ಲದಾಗಿದೆ. ಸ್ಟ್ಯಾಂಪ್ ಡ್ಯೂಟಿ, ಮದ್ಯ, ಇಂಧನಗಳು ಮತ್ತು ವಿದ್ಯುತ್ ಸೆಸ್‌ಗಳು ಇನ್ನೂ ಜಿಎಸ್‌ಟಿ ವ್ಯಾಪ್ತಿಗೆ ಬಂದಿಲ್ಲ. ಈ ತೆರಿಗೆಗಳನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳು ಹೊಂದಿದ್ದು ಹೆಚ್ಚು ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಲು ಅವುಗಳು ಹೆಚ್ಚಿನ ಅಧಿಕಾರ ಹೊಂದಿವೆ.

ಬಹುತೇಕ ರಾಷ್ಟ್ರಗಳಲ್ಲಿ ಫೆಡರಲ್ ಸರ್ಕಾರಗಳು ಬಹುತೇಕ ಪರೋಕ್ಷ ತೆರಿಗೆ ವಿಧಿಸುವ ಅಧಿಕಾರವನ್ನು ಹೊಂದಿದ್ದು, ಪ್ರಾದೇಶಿಕ ಸರ್ಕಾಗಳು ನೇರ ತೆರಿಗೆಗಳನ್ನು ವಿಧಿಸುವ ಅಧಿಕಾರ ಹೊಂದಿವೆ. ಕಳೆದ ಶತಮಾನದಲ್ಲಿ ಜಿಎಸ್‌ಟಿಯನ್ನು ಜಾರಿಗೆ ತಂದಿರುವ ಕೆನಡಾ ದೇಶದಲ್ಲಿ, ಪ್ರಾದೇಶಿಕ ಸರ್ಕಾರಗಳು ನೇರ ತೆರಿಗೆಯ ಮೇಲೆ ಸಂಪೂರ್ಣ ಅಧಿಕಾರ ಹೊಂದಿದ್ದು, ಫೆಡರಲ್ ಸರ್ಕಾರ ಪರೋಕ್ಷ ತೆರಿಗೆ ವಿಧಿಸುವ ಅಧಿಕಾರ ಹೊಂದಿದೆ. ಹಾಗಾಗಿ ಜಿಎಸ್‌ಟಿ ಜಾರಿಗೊಳಿಸಿದ ನಂತರ ಪ್ರಾದೇಶಿಕ ಸರ್ಕಾರಗಳ ಮೇಲೆ ಅದರ ಪ್ರಭಾವ ಬೀರಲಿಲ್ಲ. ಆದರೆ ಭಾರತದಲ್ಲಿ ಕೇಂದ್ರ ಸರ್ಕಾರ ನೇರ ತೆರಿಗೆ ವಿಧಿಸುವ ಎಲ್ಲ ಅಧಿಕಾರವನ್ನು ಹೊಂದಿದ್ದು, ಈ ತೆರಿಗೆಯಲ್ಲಿ ಸ್ವಲ್ಪ ಭಾಗವನ್ನು ರಾಜ್ಯಗಳಿಗೆ ಹಂಚಿಕೆಯಾಗುತ್ತಿದ್ದರೂ, ಈಗ ಜಿಎಸ್‌ಟಿಯ ವ್ಯಾಪ್ತಿಗೆ ಬರುವ ಅರ್ಧದಷ್ಟು ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ಹೊಂದಿದೆ. ಜಿಎಸ್‌ಟಿಯನ್ನು ಕಾರ್ಯರೂಪಕ್ಕೆ ತಂದು ಜಾರಿಗೊಳಿಸುವಲ್ಲಿ ಭಾರತದ ರಾಜಕೀಯ ಯಾವ ರೀತಿ ಸ್ಪಂದಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ರಾಜ್ಯಗಳಿಗೆ ತೆರಿಗೆ ಹಾಕುವ ಅಧಿಕಾರದಲ್ಲಿ ಸ್ವಲ್ಪ ಕಡಿತವಾಗಿದ್ದರೂ, ಅದನ್ನು ಒಪ್ಪಿಕೊಂಡು ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವ ಸಾಧ್ಯತೆಗಳು ರೂಪುಗೊಳ್ಳಬಹುದು. ಅಥವಾ ಆಸ್ಟ್ರೇಲಿಯಾ ದೇಶದಲ್ಲಿರುವಂತೆ, ಎಲ್ಲ ರೀತಿಯ ತೆರಿಗೆಗಳನ್ನು ಶೇಕಡಾ 75 ರಷ್ಟು ಪ್ರಮಾಣದಲ್ಲಿ ಫೆಡರಲ್ ಸರ್ಕಾರ ಸಂಗ್ರಹಿಸಿ ಅತ್ಯಂತ ಸಮರ್ಪಕವಾಗಿ ಪ್ರಾದೇಶಿಕ ಸರ್ಕಾರಗಳಿಗೆ ಹಂಚುವ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಸಾಧ್ಯತೆಗಳೂ ಇವೆ. ಭಾರತದ ಮಟ್ಟಿಗೆ ಹೇಳುವುದಾದರೆ, ತೆರಿಗೆಯ ವ್ಯವಸ್ಥೆ ಮತ್ತು ಅಧಿಕಾರದ ಸಮೀಕರಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಯಾವ ರೀತಿ ನಡೆಯಬಹುದು ಎಂಬುದು ದೇಶದ ರಾಜಕಾರಣ ಮತ್ತು ಕಾಲವೇ ನಿರ್ಧರಿಸುತ್ತದೆ.

ಜಿಎಸ್‌ಟಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಜಿಎಸ್‌ಟಿ ಕಾನೂನಿಗೆ ತಿದ್ದುಪಡಿ ತರುವ ಕಾಲ ದೂರವಿಲ್ಲ ಎಂದು ಹೇಳಬಹುದು. ❑

# ಸರಕು ಸೇವಾ ತೆರಿಗೆ–ವಿಪುಲ ಸಾಮರ್ಥ್ಯದ ಅದ್ಭುತ ನಡಿಗೆ

* ದೇವರಾಜ ರೆಡ್ಡಿ



**ಜಿ.ಎಸ್.ಟಿ. ಯು ಉತ್ಪಾದಕ ವಸ್ತುವಿನ ಮೇಲೆ ವಿಧಿಸುವ ತೆರಿಗೆಗಳ ಅಳತೆಗೋಲನ್ನು ಪಾರದರ್ಶಕವಾಗಿಸಿದೆ, ಅದರಿಂದ ಇದುವರೆಗೂ ಪಾವತಿಮಾಡುತ್ತಿದ್ದ, ಸುಪ್ತ ಮತ್ತು ಮಿಶ್ರ ರೀತಿಯ ತೆರಿಗೆಯ ಕ್ರಮಕ್ಕೆ ಒಂದು ಕೊನೆಯನ್ನು ತಂದಂತೆ ಆಗಿದೆ. ಜಿ.ಎಸ್.ಟಿ. ಯು ದೇಶದಾದ್ಯಂತ ಸರಕು ಹಾಗೂ ಸೇವೆಗಳಿಗೆ ಸಂಬಂಧಿಸಿದಂತೆ ಸರಾಗವಾಗಿ ಸಾಗುವಂತಹ ಸೌಲಭ್ಯಗಳನ್ನು ಒದಗಿಸುವುದೆಂದು ನಿರೀಕ್ಷಿಸಲಾಗಿದೆ.**

ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದ ತೆರಿಗೆ ವ್ಯವಸ್ಥೆ (ಜಿ.ಎಸ್.ಟಿ) ಯು, ಜಾರಿಗೆ ಬಂದಿದ್ದು ತೆರಿಗೆ ಸುಧಾರಣೆಗೆ ಸಂಬಂಧಿಸಿದಂತೆ ಚರಿತ್ರಾರ್ಹ ಮಹತ್ವ ಪಡೆದುಕೊಂಡಿದೆ. ಕೇಂದ್ರ ಹಾಗೂ ರಾಜ್ಯಗಳ ತೆರಿಗೆಗಳನ್ನೊಳಗೊಂಡಂತೆ, ದೇಶದ ಪರೋಕ್ಷ ತೆರಿಗೆ ವ್ಯವಸ್ಥೆಯ ನಕ್ಷೆಯನ್ನೇ ಸಂಪೂರ್ಣವಾಗಿ ಸುಧಾರಣೆಗೊಳಿಸಬೇಕು ಎನ್ನುವ ಉದ್ದೇಶವನ್ನು ಇದು ಹೊಂದಿದೆ. ಜಿ.ಎಸ್.ಟಿ. ವ್ಯವಸ್ಥೆಯು, ಸ್ವಾತಂತ್ರ್ಯ ನಂತರದ ತೆರಿಗೆಗೆ ಸಂಬಂಧಪಟ್ಟಂತೆ, ಅತಿ ದೊಡ್ಡ ಸುಧಾರಣೆಯಾಗಿದ್ದು, ಒಂದು ದೇಶ – ಒಂದೇ ತೆರಿಗೆ – ಒಂದೇ ಮಾರುಕಟ್ಟೆ ಎನ್ನುವ ಧ್ಯೇಯವೊಂದನ್ನು ಸಾಕಾರಗೊಳಿಸುವುದಕ್ಕೆ ದಾರಿಮಾಡಿಕೊಡುತ್ತದೆ. ಇದರಿಂದ ಕೈಗಾರಿಕೆ, ಸರ್ಕಾರ ಹಾಗೂ ಬಳಕೆದಾರರೆಲ್ಲರಿಗೂ ಅನುಕೂಲ ಆಗಬಹುದೆಂದು ನಿರೀಕ್ಷಿಸಲಾಗಿದೆ.

ಜಿ.ಎಸ್.ಟಿ.ಯಂಥ ವ್ಯವಸ್ಥೆಯಲ್ಲಿ ಸರಕು ಮತ್ತು ಸೇವೆಗಳ ಬೆಲೆಗಳು ಇಳಿಕೆಯಾಗಲಿದ್ದು, ಆರ್ಥಿಕ ವ್ಯವಸ್ಥೆಯು ಬಲಿಷ್ಟಗೊಂಡು, ಭಾರತೀಯ ಉತ್ಪಾದಕ ವಸ್ತುಗಳು ಮತ್ತು ಸೇವೆಗಳು ಜಾಗತಿಕವಾಗಿ ಸ್ಪರ್ಧಾತ್ಮಕತೆಯನ್ನು ಪಡೆದುಕೊಂಡು, 'ಮೇಕ್ ಇನ್ ಇಂಡಿಯಾ' ಉತ್ತಮ ಬೆಂಬಲ ನೀಡಲಿವೆ. ರಫ್ತು ಕ್ಷೇತ್ರದ ಪರಿಗಣನೆ ಪ್ರಸ್ತುತ ಪರಿಗಣನೆ ಪ್ರಸ್ತುತ ಮಾದರಿಗಿಂತ ವಿಭಿನ್ನವಾಗಿರುತ್ತದೆ. ಕೇಂದ್ರ ಹಾಗೂ ರಾಜ್ಯಗಳಲ್ಲಿ ಈಗಿರುವ ತೆರಿಗೆ ವ್ಯವಸ್ಥೆಯಲ್ಲಿ, ಪರೋಕ್ಷ ತೆರಿಗೆಗಳು ವಿಘಟನಾ ಸ್ವರೂಪ ಹೊಂದಿದ್ದು, ಹಲವು ತೆರಿಗೆಗಳು ಪುನರಾವರ್ತನೆಯಾಗುತ್ತಿಲ್ಲ. ಈಗ ಜಾರಿಗೆ ಬಂದಿರುವ ಜಿ.ಎಸ್.ಟಿ. ಯು ಇಡೀ ಭಾರತ ದೇಶಕ್ಕೆ ಏಕ ರೀತಿಯ ಮಾರುಕಟ್ಟೆ ಮಾಡುವುದಕ್ಕೋಸ್ಕರ ಏಕ ರೀತಿಯ ತೆರಿಗೆ ದರ, ಏಕ ರೀತಿಯ ಪ್ರಕ್ರಿಯೆ ಹಾಗೂ ಆರ್ಥಿಕ ಅಡಚಣೆಗಳನ್ನು ನಿವಾರಿಸುವ ಉದ್ದೇಶ ಹೊಂದಿದೆ.

ಜಿ.ಎಸ್.ಟಿ. ಯು ಬೃಹತ್ತಾದ ತಾಂತ್ರಿಕ ವ್ಯವಸ್ಥೆಗೆ ಒಳಪಟ್ಟಿದ್ದು, ವ್ಯಕ್ತಿ ವ್ಯಕ್ತಿಗಳು ಮುಖಾಮುಖಿಯಾಗುವುದನ್ನು ಬಹುಮಟ್ಟಿಗೆ ಕಡಿಮೆ ಮಾಡಿದೆ ಮತ್ತು ಭಾರತದಲ್ಲಿ ವಾಣಿಜ್ಯ ವ್ಯವಹಾರ ಮಾಡುವುದನ್ನು ಸುಲಭಗೊಳಿಸಿದೆ. ಉದಾ : ಪದಾರ್ಥವೊಂದರ ಬೆಲೆ 100 ರೂ ಇದೆ. ಅದಕ್ಕೆ ಅಬಕಾರಿ ಸುಂಕ ಎಂದು 12% ಅನ್ನು ಅಳವಡಿಸಿದಾಗ (ಊಹೆ ಅಷ್ಟೇ), ಆ ವಸ್ತುವಿನ ಬೆಲೆ ರೂ 112 ಆಯಿತು. ಅವುಗಳನ್ನು ಮಾರಾಟ ಮಾಡುವಾಗ ಅದಕ್ಕೆ 12.5% ರಷ್ಟು ವ್ಯಾಟ್ ಅನ್ನು ಸೇರಿಸಿದಾಗ, ಕಡೆಯಲ್ಲಿ ಗ್ರಾಹಕನಿಗೆ ಕಾಣಿಸುವ ಬೆಲೆ ರೂ 126 ಆಗುತ್ತದೆ. ಈಗ ಉದ್ದೇಶಿಸಿರುವ ಜಿ.ಎಸ್.ಟಿ. ವ್ಯವಸ್ಥೆಯಲ್ಲಿ, ಮೂಲಬೆಲೆ ರೂ 100 ಇದ್ದಾಗ, ಕೇಂದ್ರ ಹಾಗೂ ರಾಜ್ಯಗಳೆರಡರ ತೆರಿಗೆ ಹಾಕಲಾಗಿ, ಅದು ಪ್ರತಿ ವಸ್ತುವಿಗೆ 9% ಇರುವುದರಿಂದ, ಕಡೆಯಲ್ಲಿ ಗ್ರಾಹಕನ ಹತ್ತಿರಕ್ಕೆ ಬರುವ ಹೊತ್ತಿಗೆ ಅದರ ಬೆಲೆ ರೂ 118 ಆಗಿರುತ್ತದೆ. ಹಾಗಾಗಿ ಕೈಗಾರಿಕೋದ್ಯಮದ ಜಾಗತಿಕ ಸನ್ನಿವೇಶದಲ್ಲಿ ಅತ್ಯುತ್ತಮವಾಗಿ ಪೈಪೋಟಿ ನಡೆಸಬಹುದಾಗಿದೆ. ಆದ್ದರಿಂದಲೇ ಜಿ.ಎಸ್.ಟಿ. ಎನ್ನುವುದು ವಿಶಾಲ ತಳಹದಿ ಹೊಂದಿರುವ ವ್ಯವಸ್ಥೆಯಾಗಿದೆ ಹಾಗೂ

* ಮಾಜಿ ಅಧ್ಯಕ್ಷರು, ಐಸಿಎಐ. E-mail : devarajareddy@yahoo.com

ಆರ್ಥಿಕ ವ್ಯವಸ್ಥೆಯೊಂದರಲ್ಲಿ ವಿಧಿಸುವಂಥ ತೆರಿಗೆಯು ಏಕರೀತಿಯ ವ್ಯಾಪಕತೆಯನ್ನು ಒಳಗೊಂಡಿರುತ್ತದೆ. ಜಿ.ಎಸ್.ಟಿ. ಯು ಉತ್ಪಾದನೆ ಹಾಗೂ ಹಂಚಿಕೆಯ ಸರಪಳಿಗೆ ಸಂಬಂಧ ಪಟ್ಟಂತೆ, ಪ್ರತಿ ಘಟ್ಟದಲ್ಲೂ ವಿಧಿಸುವಂಥದ್ದಾಗಿದ್ದು, ಹಿಂದಿನ ಘಟ್ಟಗಳಲ್ಲಿ ಕ್ರಮಿಸುತ್ತಾ ಪಾವತಿಸಿದ ತೆರಿಗೆಗೆ ಅನುಗುಣವಾಗಿ ಅದು ಅನ್ವಯಗೊಳ್ಳುತ್ತದೆ. ಇದು ಮೂಲಭೂತವಾಗಿ, ಅಂತಿಮವಾಗಿ ಬಳಕೆಗೆ ಒಳಪಡುವುದರ ಮೇಲೆ ಹಾಕಲಾದ ತೆರಿಗೆಯಾಗಿರುತ್ತದೆ. ಆ ತೆರಿಗೆಯನ್ನು ವಸ್ತುವೊಂದನ್ನು ಪೂರೈಕೆ ಮಾಡುವ ಪ್ರತಿ ಘಟ್ಟದಲ್ಲೂ ವಿಧಿಸಲಾಗುತ್ತದೆ. (ಅಂದರೆ ಅದು ಸರಕು ಮಾಡುವುದಿರಬಹುದು ಇಲ್ಲವೇ ಸೇವೆ ಒದಗಿಸುವುದಿರಬಹುದು.) ಅದು ಸರಕು ಮಾರಾಟ ಮಾಡುವಾಗ ಇಲ್ಲವೇ ಸೇವಾ ಸೌಲಭ್ಯ ಒದಗಿಸುವವನು, ಆ ಸೇವೆ ಒದಗಿಸುವುದಕ್ಕೆ ತಾನು ಸರಕು ಕೊಳ್ಳುವಾಗ ನೀಡಿರುವ ತೆರಿಗೆಯನ್ನು ಹಿಂಪಡೆಯುತ್ತಿದ್ದೇನೆ ಎನ್ನುವ ಅರ್ಥವೂ ಇರಬಹುದಾಗಿದೆ.

**ಜಿ.ಎಸ್.ಟಿ. ಯ ಪ್ರಧಾನ ಲಕ್ಷಣಗಳು ಕೆಳಕಂಡಂತೆ ಇರುತ್ತವೆ**

1. ಜಿ.ಎಸ್.ಟಿ. ಎನ್ನುವುದು ಮೌಲ್ಯ ಸೇರ್ಪಡೆ ತೆರಿಗೆಯ ತತ್ವವನ್ನು ಒಳಗೊಂಡಿದೆ ಹಾಗೂ ಅದು ಹೂಡಿಕೆಗೆ ಸಂಬಂಧಪಟ್ಟ ತೆರಿಗೆ ಪದ್ಧತಿಯಾಗಿರಲಿ ಅಥವಾ ವ್ಯವಕಲನ ಪದ್ಧತಿಯಾಗಿರಲಿ, ಸ್ವತಃ ತಾವೇ ಮಾಡಿಕೊಳ್ಳಬಹುದಾದ ಮತ್ತು ಲೆಕ್ಕಗಳನ್ನು ಆಧರಿಸಿದ ವ್ಯವಸ್ಥೆಗೆ ಒತ್ತುನೀಡುವುದಾಗಿರುತ್ತದೆ.

2. ಇದು ಸರಕು ಮತ್ತು ಸೇವೆಗಳೆರಡಕ್ಕೂ ತೆರಿಗೆ ಹಾಕುವ ಹಾಗೆ ಸಂಗ್ರಹಿಸುವುದಕ್ಕೆ ಸಂಬಂಧಪಟ್ಟಿದ್ದು ,ವಿಶಾಲ ತಳಹದಿಯನ್ನು ಒಳಗೊಂಡಂತೆ ಒಂದೇ ರೀತಿಯ ದರವನ್ನೊಳಗೊಂಡಿರುತ್ತದೆ.

3. ಹೂಡಿಕೆಯ ತೆರಿಗೆ ಜಮಾ ಅಥವಾ ಉಪಾಂತ್ಯ ವಹಿವಾಟಿನ ಮೌಲ್ಯ ಕಳೆಯುವಿಕೆಯೇ, ಮೌಲ್ಯದ ಲಾಭವನ್ನು ನೀಡುವು ದಾಗಿರುತ್ತದೆ.

4. ಸಾಮಾನ್ಯವಾಗಿ ಎರಡಕ್ಕಿಂತ ಹೆಚ್ಚು ದರಗಳನ್ನು ಮೀರದ, ಕನಿಷ್ಠ ಸಂಖ್ಯೆಯ ತೆರಿಗೆಯ, ಕನಿಷ್ಠ ಮಿತಿಯ ದರಗಳನ್ನು ಹೊಂದಿರುತ್ತದೆ.




5. ಸೆಸ್ಸ್, ಮರುಮಾರಾಟ ತೆರಿಗೆ, ಹೆಚ್ಚುವರಿ ತೆರಿಗೆ, ವಿಶೇಷ ತೆರಿಗೆ ,ಒಟ್ಟು ವಹಿವಾಟು ಮೊತ್ತದ ತೆರಿಗೆ – ಇವುಗಳನ್ನು ವಿಧಿಸುವುದಕ್ಕೆ ಅವಕಾಶವಿಲ್ಲ.

6. ಮಾರಾಟ ತೆರಿಗೆ, ಪ್ರವೇಶ ತೆರಿಗೆ, ಆಕ್ಟ್ರಾಯ್, ಮನೋರಂಜನೆ ತೆರಿಗೆ, ಐಷರಾಮಿ ತೆರಿಗೆ ಎನ್ನುವಂಥ ವಿಭಿನ್ನ ತೆರಿಗೆಗಳನ್ನು ವಿಧಿಸುವುದಕ್ಕೆ ಜಿ.ಎಸ್.ಟಿ.ಯಲ್ಲಿ ಅವಕಾಶವಿಲ್ಲ.

7. ರಫ್ತುಗಳೆಲ್ಲ ಶೂನ್ಯ ದರವನ್ನೊಳಗೊಂಡಿದ್ದು, ಅಂತಾರಾಜ್ಯ ಮಾರಾಟದಲ್ಲಿ ಸರಕು – ಸೇವಾ ಪೂರೈಕೆ ದರವೂ ಶೂನ್ಯ.

8. ಕಡಿಮೆ ದರದಲ್ಲಿ ಉತ್ಪಾದಿತವಾಗುವುದಕ್ಕೆ ಸಂಬಂಧಿಸಿದ ಸರಕೇ ಇರಲಿ, ಸೇವೆಯೇ ಇರಲಿ, ಅವುಗಳಿಗೆ ಬಂಡವಾಳ ಸರಕುಗಳ ಮತ್ತು ಹೂಡಿಕೆಗೆ ಸಂಬಂಧಿಸಿದ ತೆರಿಗೆ ಹಾಕಲಾಗುವುದು. ಹಾಗೆ ಮಾಡುವುದರಿಂದ ಸರಕು ದಾಸ್ತಾನನ್ನು ಹೊತ್ತು ಸಾಗುವ ವೆಚ್ಚ ಹಾಗೂ ಉತ್ಪಾದನಾ ವೆಚ್ಚವನ್ನು ತಗ್ಗಿಸಬಹುದೆನ್ನುವುದಾಗಿದೆ.

9. ಏಕರೀತಿಯ ಕಾನೂನು ಮತ್ತು ಪ್ರಕ್ರಿಯೆಗಳು, ಏಕರೀತಿಯ ಆಡಳಿತ ವ್ಯವಸ್ಥೆ ದೇಶದುದ್ದಕ್ಕೂ ಇರುತ್ತದೆ.

10. ಜಿ.ಎಸ್.ಟಿ. ಎನ್ನುವುದು ಒಂದು ಗುರಿಯಾಧಾರಿತ ತೆರಿಗೆಯಾಗಿದ್ದು, ಸರಕು ಬಳಕೆ ಮಾಡುವ ಇಲ್ಲವೇ ಸೇವೆ ಪಡೆಯುವ ಅಂತಿಮ ಘಟ್ಟದ ಬಳಕೆದಾರನಿಗೆ, ಒಂದು ಪಾಯಿಂಟ್‌ನಲ್ಲಿ ಮಾತ್ರ ತೆರಿಗೆಯನ್ನು ವಿಧಿಸಲಾಗುತ್ತದೆ.

**ಜಿ.ಎಸ್.ಟಿ. ಯಿಂದಾಗುವ ಪ್ರಯೋಜನಗಳು**

ಜಿ.ಎಸ್.ಟಿ.ಯು ಏಕೈಕ ಹಾಗೆ ಸಮಗ್ರವೆನ್ನುವಂಥ ಭಾರತೀಯ ಮಾರುಕಟ್ಟೆಯನ್ನು ಹುಟ್ಟುಹಾಕಲಿದ್ದು, ಇದು ನಮ್ಮ ಆರ್ಥಿಕತೆಯನ್ನು ಬಲಗೊಳಿಸುತ್ತದೆ. ಒಟ್ಟಾರೆ ಜಿ.ಎಸ್.ಟಿ. ಯು ಸರ್ಕಾರ ಹಾಗೆ ಬಳಕೆದಾರರಿಬ್ಬರಿಗೂ ದೀರ್ಘಾವಧಿಯಲ್ಲಿ ಪ್ರಯೋಜನಕಾರಿಯಾಗಿದ್ದು, ಈ ರೀತಿ ಇಬ್ಬರಿಗೂ ಏಳಿಗೆಯನ್ನು ತರುವಂಥದ್ದಾಗಿದೆ. ಜಿ.ಎಸ್.ಟಿ.ಯ ಹಲವು ರೀತಿಯ ಪ್ರಯೋಜನಗಳು ಈ ಮುಂದಿನಂತೆ ಇವೆ :

ಅ) ವಿವಿಧ ರೀತಿಯ ತೆರಿಗೆ ಹೇರಿಕೆಯನ್ನು ನಿರ್ಮೂಲನಗೊಳಿಸುವುದು

ಜಿ.ಎಸ್.ಟಿ.ಯು ಭಾರತದಲ್ಲಿ ಜಾರಿಗೊಳ್ಳುತ್ತಿರುವುದರಿಂದ, ಈಗ ಅಸ್ತಿತ್ವದಲ್ಲಿರುವ ವಿವಿಧ ತೆರಿಗೆಗಳಾದ ಸೆಂಟ್ರಲ್ ಎಕ್ಸೈಜ್, ಸೇವಾ ತೆರಿಗೆ, ಸೇಲ್ಸ್ ಟ್ಯಾಕ್ಸ್, ಮೌಲ್ಯಾಧಾರಿತ ತೆರಿಗೆ ಇನ್ನೂ ಮೊದಲಾದವು ರದ್ದಾಗಿ, ಜಿ.ಎಸ್.ಟಿ. ಎಂಬ ಒಂದು ತೆರಿಗೆಯಾಗಿ ವಿಲೀನಗೊಳ್ಳುತ್ತದೆ.

ಈಗ ಪ್ರಸ್ತುತದಲ್ಲಿರುವ ಉತ್ಪಾದನೆ ಹಾಗೂ ಸೇವೆಗಳಿಗೆ ಹೇರಲಾಗುತ್ತಿರುವ ವಿವಿಧ ರೀತಿಯ ತೆರಿಗೆಗಳನ್ನು ತಡೆಗಟ್ಟಲು ಇದು ಸಾಧ್ಯ ಮಾಡಿಕೊಡುತ್ತದೆ. ಉದಾಹರಣೆಗೆ : ರೆಸ್ಟೋರೆಂಟ್ ಸೇವೆಗಳಿಗೆ ಸಂಬಂಧಪಟ್ಟಂತೆ ನಾವು ಸೇವಾ ತೆರಿಗೆ ಮತ್ತು ಮೌಲ್ಯಾಧಾರಿತ ತೆರಿಗೆ ಎರಡನ್ನೂ ಕಟ್ಟುತ್ತಿದ್ದು, ಇದು ಒಟ್ಟು ಮೊತ್ತದಲ್ಲಿ ಅಂದಾಜು ಪ್ರಕಾರ 140% ತೆರಿಗೆ ಮೊತ್ತವನ್ನೊಳಗೊಂಡಿರುತ್ತದೆ. (ವ್ಯಾಟ್ 100%, ಮೌಲ್ಯ ಮತ್ತು ಸೇವಾ ತೆರಿಗೆ 40% ಮೌಲ್ಯ)

ಬ) ತೆರಿಗೆ ಹೇರಿಕೆಯ ಬಲು ಭಾರವನ್ನು ತಗ್ಗಿಸುವುದು. ಜಿ.ಎಸ್.ಟಿ. ವ್ಯವಸ್ಥೆಯ ಅಡಿಯಲ್ಲಿ, ಸರಕು ಹಾಗೂ ಸೇವೆಗಳಿಗೆ ತೆರಿಗೆ ಕಟ್ಟಬೇಕಾದವನು ಅಂತಿಮವಾಗಿ ಗ್ರಾಹಕನೇ ಆದರೂ ಕೂಡ, ಅವನ ಮೇಲೆ ತೆರಿಗೆಗಳ ದೊಡ್ಡ ಹೊರೆ ಇಲ್ಲವೆಂಬುದನ್ನು ಖಚಿತಪಡಿಸಲು, ಹೂಡಿಕೆ ತೆರಿಗೆ ಜಮಾ ಪದ್ಧತಿ ಇರುತ್ತದೆ. ಪ್ರತಿ ಘಟ್ಟದಲ್ಲೂ ಮೌಲ್ಯಸೇರ್ಪಡೆಗೊಂಡಿದ್ದರ ಮೇಲೆ ಮಾತ್ರ ತೆರಿಗೆ ಹೇರಲಾಗುವುದು .

ಆದರೆ ಈಗ ಪ್ರಸ್ತುತದಲ್ಲಿ ಇದ್ದ ತೆರಿಗೆ ವ್ಯವಸ್ಥೆಯಲ್ಲಿ, ಕೆಲವು ಸಂದರ್ಭಗಳಲ್ಲಿ ತೆರಿಗೆಯ ಮೇಲೆ ತೆರಿಗೆಯನ್ನು ಕಟ್ಟಬೇಕಾಗುತ್ತಿತ್ತು. ಉದಾ : ಎಕ್ಸೈಜ್ ಸುಂಕದ ಮೇಲೆ ಮತ್ತೆ ವ್ಯಾಟ್ ಕಟ್ಟುವಂಥದ್ದು. ಈಗಿನ ಜಿ.ಎಸ್.ಟಿಯಲ್ಲಿ ಅದೆಲ್ಲಾ ಇರುವುದಿಲ್ಲ.

ಕ) ಸರ್ವಾನ್ವಯ ರಾಷ್ಟ್ರೀಯ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವುದು :

ಜಿ.ಎಸ್.ಟಿ. ಯು ಎಲ್ಲಾ ರಾಜ್ಯಗಳುದ್ದಕ್ಕೂ ಹಾಗೂ ವಿಭಿನ್ನ ಕ್ಷೇತ್ರಗಳಿಗೆ ಪರೋಕ್ಷ ತೆರಿಗೆಗೆ ಸಂಬಂಧಿಸಿದಂತೆ ಒಂದೇ ರೀತಿಯ ತೆರಿಗೆ ಕಾನೂನನ್ನು ಪ್ರಾರಂಭಿಸಲಿದ್ದು, ದೇಶದುದ್ದಕ್ಕೂ ಯಾವ ಅಡಚಣೆಯಿಲ್ಲದೆ ಸರಕು ಹಾಗೂ ಸೇವೆಗಳನ್ನೊದಗಿಸುವುದು ಬಹಳ ಸುಲಭವಾಗುತ್ತದೆ. ಇದರಿಂದ ಆರ್ಥಿಕತೆಗೆ ಸಂಬಂಧಪಟ್ಟ ನ್ಯೂನತೆಗಳನ್ನು ನಿವಾರಿಸಿ, ರಫ್ತುಗಳನ್ನು ಉತ್ತೇಜಿಸುವ ಮೂಲಕ ಸರ್ವಾನ್ವಯ ರಾಷ್ಟ್ರೀಯ ಮಾರುಕಟ್ಟೆಯೊಂದನ್ನು ಹುಟ್ಟುಹಾಕಬಹುದಾಗಿದೆ. ಇದು ಭಾರತದ ಸಮಗ್ರ ಪ್ರಾದೇಶಿಕ ಉತ್ಪಾದನಾ ಅನುಪಾತ ತೆರಿಗೆಗೆ ಸಂಬಂಧಪಟ್ಟಂತೆ, ಖಂಡಿತವಾಗಿ ಬಲವರ್ಧನೆಯನ್ನು ನೀಡುವುದಾಗಿದೆ ಮತ್ತು ಆರ್ಥಿಕತೆಗೆ ಸಂಬಂಧಿಸಿದಂತೆ ಕಾರ್ಯದಕ್ಷತೆಯನ್ನು ಉತ್ತೇಜಿಸಿ, ಆರ್ಥಿಕ ಬೆಳವಣಿಗೆಯಲ್ಲಿ ದೀರ್ಘ ಕಾಲ ಒಂದು ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ.

ಡ) ಸ್ವತಃ ಅನುಸರಣೆ ಮಾಡುವಂಥದ್ದನ್ನು ಹೆಚ್ಚಿಸುವುದು ಜಿ.ಎಸ್.ಟಿ. ವ್ಯವಸ್ಥೆಯ ಅಡಿಯಲ್ಲಿ, ಬಹಳ ಸರಳವಾಗಿದ್ದು, ತಪ್ಪುಗಳು ಆಗುವ ಸಾಧ್ಯತೆ ತುಂಬಾ ಕಡಿಮೆ ಇರುವಂತೆ ಸ್ಪಷ್ಟತೆಯನ್ನು ನೀಡಲಾಗಿದೆ. ಇದಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳೂ ಜಿ.ಎಸ್.ಟಿ. ಸರ್ವಾನ್ವಯ ಅಂತರ ಜಾಲದಿಂದ ದೊರಕುವುದರಿಂದ, ತೆರಿಗೆ ಪಾವತಿ ಹಾಗೂ ಇದರ ಅನುಸರಿಸುವಿಕೆ ಒಂದು ಕ್ರಮಬದ್ಧ ಅಭ್ಯಾಸವಾಗಲಿದ್ದು ತಪ್ಪಾಗುವ ಸಾಧ್ಯತೆ ತುಂಬಾ ಕಡಿಮೆ ಇರುತ್ತದೆ.

**ಇಳಿಕೆಗೊಂಡ ಕಾನೂನು ಮೊಕದ್ದಮೆಗಳು**

ತೆರಿಗೆ ವ್ಯವಸ್ಥೆಯ ಕಾನೂನಿನ ವ್ಯಾಪ್ತಿಯಲ್ಲಿ ಈಗಿರುವ ತೆರಿಗೆ ವ್ಯವಸ್ಥೆಯ ಸ್ಪಷ್ಟತೆಗೆ ಸಂಬಂಧಿಸಿದಂತೆ, ಜಿ.ಎಸ್.ಟಿ. ಅಡಿಯಲ್ಲಿ ಬರುವ ತೆರಿಗೆ ವ್ಯವಸ್ಥೆಯು ಕಾನೂನು ಮೊಕದ್ದಮೆಗಳನ್ನು ಕಡಿಮೆ ಮಾಡುತ್ತದೆ. ಪ್ರಸ್ತುತ ಇರುವ ವ್ಯವಸ್ಥೆಯಲ್ಲಿ, ಕೇಂದ್ರ ಹಾಗೂ ರಾಜ್ಯಗಳ ತೆರಿಗೆಗೆ ಸಂಬಂಧಿಸಿದ ಕಾನೂನು ವ್ಯಾಪ್ತಿಯು ಅನೇಕ ಪ್ರಕರಣಗಳಲ್ಲಿ ಅನಿಶ್ಚಿತತೆಯನ್ನು ಹೊಂದಿತ್ತು. ಉದಾ : ಸಾಫ್ಟ್ ವೇರ್, ಸರಕು ಬಳಕೆಯ ಹಕ್ಕಿಗೆ ಸಂಬಂಧಪಟ್ಟವು. ಜಿ.ಎಸ್.ಟಿ. ವ್ಯವಸ್ಥೆಯು ಏಕರೀತಿಯ ತೆರಿಗೆ ಕಾನೂನು ಹೊಂದಿದ್ದು ವಿಭಿನ್ನ ತೆರಿಗೆ ಕಾನೂನನ್ನು ಒಳಗೊಂಡಿರುವ ಪ್ರಸ್ತುತ ಹಲವಾರು ಲೆಕ್ಕಾಚಾರಗಳನ್ನು ತುಲನೆ ಮಾಡಿ ನೋಡಿದಾಗ, ಈಗಿನದು ಬಹು ಸರಳ ರೀತಿಯದ್ದಾಗಿರುತ್ತದೆ.

ಇದುವರೆಗೂ ವಿಭಿನ್ನ ರೀತಿಯ ಹಲವಾರು ತೆರಿಗೆಗಳು ಇದ್ದ ಕಾರಣದಿಂದಾಗಿ ಮತ್ತು ತುಂಬಾ ಹೊರೆಯೆನ್ನಿಸುವ ಪರಿಣಾಮಗಳು ಮತ್ತು ಸಂಯೋಜಿತ ಅಂತರ್ಜಾಲದ ಕೊರತೆಗಳಿಂದಾಗಿ, ಪರೋಕ್ಷ ತೆರಿಗೆಗೆ ಸಂಬಂಧಿಸಿದ ಆಡಳಿತವು ಸರ್ಕಾರಕ್ಕೆ ಬಹು ದೊಡ್ಡ ಸಮಸ್ಯೆಯಾಗಿತ್ತು. ಇವುಗಳೇ ಸ್ವ-ಇಚ್ಛಾ ಅನುಸರಣೆ ಮತ್ತು ಆಡಳಿತ ವೆಚ್ಚಗಳಿಗೆ ಕಾರಣವಾಗುತ್ತಿದ್ದವು. ಈಗ ಉದ್ದೇಶಿಸಿರುವ ಜಿ.ಎಸ್.ಟಿ. ವ್ಯವಸ್ಥೆಯಲ್ಲಿ ಏಕೀಕೃತ ದರವಿದ್ದು, ಸರಳ ರೀತಿಯ ಹೂಡಿಕೆ ತೆರಿಗೆ ಜಮಾದ ಯಾಂತ್ರಿಕ ರಚನೆಯಿದ್ದು, ಸಂಯೋಜಿತ ಜಿ.ಎಸ್.ಟಿ.ಯು ಅಂತರ್ಜಾಲ ಹೊಂದಿರುವ ಕಾರಣದಿಂದ, ಮಾಹಿತಿಯು ಆ ಕೂಡಲೇ ಲಭ್ಯವಿದ್ದು, ಸಂಪನ್ಮೂಲಗಳ ಆಡಳಿತ ಸರ್ಕಾರಕ್ಕೆ ಸುಲಭ ಮತ್ತು ಸಮರ್ಥನೀಯವಾಗಿರುತ್ತದೆ .ಒಂದೇ ಒಂದು ತೆರಿಗೆಯಿದ್ದು, ದೋಷಗಳು ಕಡಿಮೆಯಾಗಿ, ಕಾನೂನು ಮೊಕದ್ದಮೆಗಳು ಕಡಿಮೆಯಾಗಿ, ಆಡಳಿತ ವೆಚ್ಚ ಇಳಿಕೆಗೊಳ್ಳುವುದರಲ್ಲಿ ಪರಿಣಾಮಗೊಳ್ಳುತ್ತದೆ.

**ಜಿ.ಎಸ್.ಟಿ.ಗೆ ಸಂಬಂಧಿಸಿದ ಸವಾಲುಗಳು**

ಪ್ರಸ್ತುತ ಜಿ.ಎಸ್.ಟಿ. ಯು ದೇಶದುದ್ದಕ್ಕೂ ಇರುವ ಉದ್ದಿಮೆಗಳು, ಉತ್ಪಾದನಾ ಘಟಕಗಳು, ವಾಣಿಜ್ಯೋದ್ಯಮಿಗಳು ಮತ್ತು ಸೇವಾ ಸೌಲಭ್ಯ ನೀಡುವವರ ಮೇಲೆ ಅಗಾಧ ಪ್ರಭಾವ ಬೀರಲಿದ್ದು, ಆ ಕಾರಣದಿಂದಲೇ 'ಶ್ರೇಷ್ಠ ಒಳಸಾಮರ್ಥ್ಯವುಳ್ಳ ಬದಲಾವಣೆಯ ಹರಿಕಾರ' ಎನ್ನಿಸಿಕೊಂಡಿದೆ. ಸಂಯೋಜಿತ ವ್ಯವಸ್ಥೆಯ ಕೆಳಗೆ ಈ ಅನುಕೂಲ ಒದಗಿಬಂದಿದ್ದು, ಹಿಂದೆ ಇದ್ದ ವಿಭಿನ್ನ ರೀತಿಯ ತೆರಿಗೆಗಳಂತೆ ಪರದಾಡಬೇಕಾಗಿಲ್ಲ. ಸ್ವಾತಂತ್ರ್ಯ ಬಂದಎಪ್ಪತ್ತು ವರ್ಷಗಳ ನಂತರ ಎನ್.ಡಿ.ಎ. ಸರ್ಕಾರ ತೆಗೆದುಕೊಂಡ ಬೃಹತ್ತಾದ ಏಕೀಕೃತ ತೆರಿಗೆ ಸುಧಾರಣೆ



ಇದಾಗಿದೆ. ಇದರ ಘೋಷ ವಾಕ್ಯವು 'ಒಂದು ದೇಶ, ಒಂದು ಮಾರುಕಟ್ಟೆ, ಒಂದು ತೆರಿಗೆ' ಎಂಬುದೇ ಆಗಿದೆ. ಆದಾಗ್ಯೂ ಪ್ರತಿಯೊಂದು ಹೊಸ ಕಾನೂನು ವ್ಯವಸ್ಥೆಯೂ ಹೊಸ ಸಮಸ್ಯೆಗಳನ್ನು ಅದರ ಜೊತೆಯಲ್ಲೇ ಹೊಂದಿರುತ್ತದೆ.

**ಎದುರಿಸಬೇಕಾಗಿರುವ ಕೆಲವು ಸವಾಲುಗಳು**

**ಮಾಹಿತಿ ತಂತ್ರಜ್ಞಾನ ಮತ್ತು ಒಳಸೌಕರ್ಯಗಳು :** ಜಿ.ಎಸ್.ಟಿ. ವ್ಯವಸ್ಥೆಯು ಮೂಲಭೂತವಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಕಾನೂನಾಗಿದೆ. ಆ ಕಾರಣದಿಂದಲೇ, ಎಲ್ಲಾ ರಾಜ್ಯಗಳೂ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲೆಲ್ಲ ಇದಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಪ್ರಸ್ತುತದಲ್ಲಿ ಅಡವಡಿಸಿಕೊಳ್ಳಲಾಗಿದೆಯೇ ಹಾಗೂ ಈ ಕಾನೂನನ್ನು ಅಳವಡಿಸಿಕೊಳ್ಳಲು ಅಗತ್ಯವಿರುವ ಮಾನವ ಸಂಪನ್ಮೂಲ ಅವಶ್ಯವಿರುವಷ್ಟು ಬಳಕೆಯಾಗುತ್ತಿದೆಯೇ? ಎಂಬುದಕ್ಕೆ ಇನ್ನೂ ಭರವಸೆ ದೊರಕಿಲ್ಲ .

ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ನಂಥಾ ಹಲವು ರಾಜ್ಯಗಳನ್ನು ಹೊರತುಪಡಿಸಿ, ಇತರೆ ರಾಜ್ಯ ಹಾಗೂ ಕೇಂದ್ರ ಆಡಳಿತ ಪ್ರದೇಶಗಳು ಹೊಂದಿವೆಯೇ ಎಂಬುದು ನಮಗೆ ತಿಳಿದುಬಂದಿಲ್ಲ. ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಇ-ಗವರ್ನೆನ್ಸ್ ಮಾದರಿಯನ್ನು ಉತ್ಕೃಷ್ಟ ರೀತಿಯಲ್ಲಿ ಹೊಂದಿವೆ. ಹಲವು ರಾಜ್ಯಗಳಲ್ಲಿ, ಈ ದಿನಗಳಲ್ಲಿ ಕೂಡ ಕೈ ಬಳಕೆಯ ವ್ಯಾಟ್ ರಿಟರ್ನ್ಸ್ ಬಳಕೆಯಲ್ಲಿವೆ, ಇಂಥವುಗಳನ್ನು ಗಮನಿಸುವ ಅಗತ್ಯವಿದೆ.

**ಅಧಿಕಾರಿಗಳ ತರಬೇತಿ :** ಯಾವುದೇ ಹೊಸ ಕಾನೂನು ಜಾರಿಗೆ ಬಂದಾಗ, ಹಳೆಯ ಕಾನೂನನ್ನು ಹೊರತುಪಡಿಸಿ, ಹೊಸದಕ್ಕೆ ವಿಶ್ವಾಸ ಗಳಿಸುವ ಹೊಸ ಆಲೋಚನಾ ಕ್ರಮಗಳನ್ನು ಅಂತರ್ಗತ ಮಾಡಿಕೊಳ್ಳಬೇಕಾಗುತ್ತದೆ. ಹಳೆಯದನ್ನು ಪಕ್ಕಕ್ಕಿಟ್ಟು, ಜಿ.ಎಸ್.ಟಿ.

ಸೌಲಭ್ಯಗಳನ್ನು ಕಲಿಯಬೇಕು ಎನ್ನುವುದು ಅತಿಮುಖ್ಯವಾದದ್ದು. ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಧಿಕಾರಿಗಳು, ಅವರು ವ್ಯಾಟ್, ಸರ್ವಿಸ್ ಟ್ಯಾಕ್ಸ್, ಎಕ್ಸೈಜ್ ಅಥವಾ ಕಸ್ಟಮ್ಸ್ – ಎಲ್ಲೇ ಕೆಲಸ ಮಾಡುತ್ತಿರಲಿ ಅವರು ಜಿ.ಎಸ್.ಟಿ. ನಿಯಮಾವಳಿಗಳನ್ನು ಹಾಗೂ ಅದರ ಸಂಭಾವ್ಯ ಪರಿಣಾಮಗಳನ್ನು ಉದಾ : ತೆರಿಗೆ ಸಂಬಂಧದ ಪ್ರಸ್ತುತ ಶ್ರೇಣೀಕೃತ ರಚನೆಯನ್ನು ಕಲಿಯಲೇಬೇಕಾಗುತ್ತದೆ. ಮುಂದೆ ಕಾಣಿಸಿಕೊಳ್ಳುವ ಜಿ.ಎಸ್.ಟಿ. ಕಾನೂನು ಸಂಪೂರ್ಣವಾಗಿ ಮಾಹಿತಿ ತಂತ್ರಜ್ಞಾನವನ್ನು ತುಂಬಾ ಅವಲಂಬಿಸಿರುತ್ತದೆ ಆ ಕಾರಣದಿಂದಲೇ ವಿಭಾಗೀಯ ಅಧಿಕಾರಿಗಳು ಅದರ ಬಳಕೆ ಹಾಗೂ ಜಾರಿಯಾಗುವುದಕ್ಕೋಸ್ಕರ, ಯೋಗ್ಯರೀತಿಯ ತರಬೇತಿ ನೀಡಬೇಕಾಗುತ್ತದೆ.

**ಹೊಸ ನೊಂದಣಿಯ ದಾಖಲಾತಿ:** ಜಿ.ಎಸ್.ಟಿ. ಯು ಅದರ ತೆಕ್ಕೆಗೆ ಅನೇಕ ಹೊಸ ನೊಂದಣಿಗಳನ್ನು ಪಡೆದುಕೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಅನೇಕ ರೀತಿಯ ವಿನಾಯಿತಿಯ ಕಾರಣದಿಂದ ಈ ವರ್ಗ ಈ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿತ್ತು. ಆದರೆ ಜಿ.ಎಸ್.ಟಿ. ನಲ್ಲಿ ತೆರಿಗೆಗೆ ಸಂಬಂಧಪಟ್ಟಂತೆ ವಿಶಾಲವಾದ ವ್ಯಾಪಕತೆಯಿರುವುದರಿಂದ ಇದು ಸಾಧ್ಯವಾಗುತ್ತದೆ. ಅಸ್ತಿತ್ವದಲ್ಲಿರುವ ನೊಂದಾಯಿತ ವ್ಯಾಪಾರಿಗಳ ವಿಷಯದಲ್ಲಿ ಪರಿವರ್ತನೆ, ಹೊಸ ಅಸೆಸ್ಸಿಗಳ ನೊಂದಾವಣೆ ಮತ್ತು ಸ್ಥಳಾಂತರಗೊಂಡವುಗಳನ್ನು ಪರಿಹರಿಸುವ ವಿಷಯಗಳು ದೊಡ್ಡ ಸವಾಲಾಗುತ್ತವೆ.


**ಸ್ಥಿತ್ಯಂತರ ಸಮಸ್ಯೆಗಳು :** ಜಿ.ಎಸ್.ಟಿ. ಸ್ಥಿತ್ಯಂತರಗೊಳ್ಳುವ ಸಲುವಾಗಿ ಪ್ರಸ್ತಾಪ ಮಾಡಬೇಕಾದ ಕ್ಷೇತ್ರಗಳು ಹಲವಾರು ಇವೆ.

ದಾಖಲಾತಿಗೆ ಸಂಬಂಧಿಸಿದ್ದು, ಜಮಾವಣೆಯನ್ನು ಪೂರ್ಣಗೊಳಿಸುವುದು ಮತ್ತು ಹೊಸ ಜಮಾವಣೆಯನ್ನು ಸ್ವೀಕರಿಸುವುದು, ವಾಪಾಸಾತಿ / ರಿಯಾಯಿತಿ ಕೋರಿಕೆಗಳನ್ನು ಗಮನಿಸುವುದು, ಒಪ್ಪಂದದ ಪುನರ್ ಪರಿಶೀಲನೆ, ಬಾಕಿ ಇರುವ ವಹಿವಾಟುಗಳಲ್ಲಿ ತೆರಿಗೆ ಬದಲಾವಣೆ, ಬಾಕಿ ಇರುವ ಅಸೆಸ್ಮೆಂಟ್‌ಗಳು, ಜಾಬ್ ವರ್ಕ್ ವಹಿವಾಟುಗಳು, ಹಾಲಿ ಇರುವ ಸ್ಟಾಕ್‌ಗಳ ನಿರ್ವಹಣೆ.ರಿಟರ್ನ್ಸ್ ಫೈಲ್ ಮಾಡುವುದು ಮುಂತಾದವುಗಳನ್ನು ಗಮನಿಸಬೇಕು. ಸರಳ ರೀತಿಯ ಸ್ಥಿತ್ಯಂತರದ ಅಗತ್ಯವು, ಜಿ.ಎಸ್.ಟಿ.ಯ ಸಫಲತೆಗೆ ಅತ್ಯಂತ ಮುಖ್ಯವಾದುದಾಗಿದೆ. ಸ್ಥಿತ್ಯಂತರದ ಕಾಯಿದೆಗಳು ಸಿದ್ಧವಿದ್ದಾಗ್ಯೂ, ಇದಕ್ಕೆ ಸಂಬಂಧಪಟ್ಟಂತೆ ಕೆಲವು ಬೇಡಿಕೆಗಳು ಉಂಟಾಗುವ ಸಂದರ್ಭಗಳಿರಬಹುದು ವೃತ್ತಿನಿರತರುಗಳು ಮತ್ತು ಸಲಹೆಗಾರರು ಖಂಡಿತಾ ಹೀಗೆ ಉದ್ಭವಿಸಬಹುದಾದ ಅಸಂಖ್ಯಾತ ತೊಡಕುಗಳ ನಿವಾರಣೆಗೆ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ.

**ಬಾಕಿ ಇರುವ ಪ್ರಕರಣಗಳು/ಹಿಂದಿನ ವಿವಾದಗಳು**

ಈಗಿರುವ ಪರೋಕ್ಷ ತೆರಿಗೆ ಪದ್ಧತಿಯ ಕಾನೂನು ಸಂಬಂಧದಲ್ಲಿ (ಕೇಂದ್ರ ಹಾಗೂ ರಾಜ್ಯ ಎರಡರಲ್ಲೂ) ಹಲವಾರು ವಿವಾದಗಳು ಹಾಗೆ ಉಳಿದುಕೊಂಡಿವೆ. ಅವು ವಿವಿಧ ಘಟ್ಟಗಳಲ್ಲಿವೆ. ಉದಾ : ನ್ಯಾಯಾಧೀಶರ ತೀರ್ಪು ಇಲ್ಲವೇ ಪುನರ್ ಪರಿಶೀಲನೆಯ ಮೂಲಕ ಮನವಿಗೆ ತೀರ್ಪು ನೀಡುವ ಅಧಿಕಾರ ಮಟ್ಟದಲ್ಲಿ, ಕೋರ್ಟ್‌ಗಳು ಹಾಗೂ ಟ್ರಿಬ್ಯೂನಲ್ ಗಳು ಇತ್ಯರ್ಥವಾಗದ ಪ್ರಕರಣಗಳಿಂದ ತುಂಬಿಹೋಗಿವೆ. ಈಗ ಜಿ.ಎಸ್.ಟಿ. ಜಾರಿಗೊಂಡಿರುವುದರಿಂದ ಸರ್ಕಾರವು ಇದಕ್ಕೆ ದಾರಿ ಕಂಡುಕೊಳ್ಳಬೇಕು ಮತ್ತು ವಿವಾದಗಳನ್ನು ಬಗೆಹರಿಸುವ ಮಾರ್ಗವನ್ನು ಹುಡುಕಬೇಕು.

'ಕರ ವಿವಾದ ಸಮಾಧಾನ ಸ್ಕೀಮ್'ನಂತಹ ರೀತಿಯಲ್ಲಿ ವಿವಾದ ಇತ್ಯರ್ಥಗೊಳಿಸುವ ಪದ್ಧತಿಯೊಂದನ್ನು ಹುಟ್ಟುಹಾಕುವ ಸಾಧ್ಯತೆಯೊಂದನ್ನು ಹುಡುಕಬೇಕಾಗಿದೆ. ಹಾಗೆ ಮಾಡುವುದರಿಂದ, ಹಿಂದಿದ್ದ ಕಾನೂನು ಅಡಿಯಲ್ಲಿ ಉಳಿದುಕೊಂಡಿರುವ ವಿಷಯಗಳನ್ನು ಪರಿಹರಿಸಲು ಸಮರ್ಥವಾಗಬೇಕಾಗಿದೆ. ಆಕಸ್ಮಾತ್ ಇತ್ಯರ್ಥವಾಗದ ಹಳೆಯ ಪ್ರಕರಣಗಳನ್ನು ಹಾಗೆ ಉಳಿಸಿಕೊಂಡಲ್ಲಿ, ನ್ಯಾಯಾಧೀಶರ ತೀರ್ಪು ಅಥವಾ ಪುನರ್ಪರಿಶೀಲನೆಯ ಮೂಲಕ ತೀರ್ಪು ನೀಡುವ ಅಧಿಕಾರ, ಕೋರ್ಟ್ ಮತ್ತು ಟ್ರಿಬ್ಯೂನಲ್‌ಗಳು ಹಳೆಯ ಪ್ರಕರಣಗಳೊಂದಿಗೆ ಪೂರ್ವ ನಿರ್ಧಾರಿತರಾಗಿದ್ದುಕೊಂಡು, ಜಿ.ಎಸ್.ಟಿ. ಮೂಲಕ ಉದ್ಭವಿಸುವ ಯಾವುದೇ ಸಮಸ್ಯೆ /ವಿವಾದಗಳನ್ನು ಬಗೆಹರಿಸಲು ಕಾಲಾವಕಾಶವೇ ಇರುವುದಿಲ್ಲ.




**ತೆರಿಗೆ ಆಡಳಿತ ವ್ಯವಸ್ಥೆ (ಒಗ್ಗೂಡಿಸುವಿಕೆ ಇಲ್ಲವೇ ವಿಲೀನಗೊಳಿಸುವಿಕೆ ) :** ಜಿ.ಎಸ್.ಟಿ. ರಚನೆಯು, ಕೇಂದ್ರ ಹಾಗೂ ರಾಜ್ಯ ಮಟ್ಟದ ಎಲ್ಲಾ ಅಧಿಕಾರಿಗಳನ್ನು ಒಂದೆಡೆ ತಂದಿದ್ದು, ಅವರೆಲ್ಲಾ ಒಂದು ಸೂರಿನಡಿ ಒಗ್ಗೂಡಿ, ತಮ್ಮ ಎಲ್ಲಾ ಭಿನ್ನತೆಗಳನ್ನು ಮತ್ತು ಹಳೆ ವ್ಯವಸ್ಥೆಯಲ್ಲಿದ್ದ ತಾಟಸ್ಥ್ಯ ಭಾವವನ್ನು ಬಿಟ್ಟುಕೊಟ್ಟು ಕೆಲಸ ಮಾಡುವರೆಂದು ನಿರೀಕ್ಷಿಸಲಾಗಿದೆ. ಅಧಿಕಾರಕ್ಕೆ ಸಂಬಂಧಿಸಿದ ಹುದ್ದೆ, ಅಂತಸ್ತುಗಳಲ್ಲಿ ವ್ಯತ್ಯಾಸಗಳು ಕಂಡುಬರಬಹುದಾಗಿದೆ. ಪ್ರಸ್ತುತದಲ್ಲಿ ಸೆಂಟ್ರಲ್ ಎಕ್ಸೈಜ್ ಮತ್ತು ಸರ್ವಿಸ್ ಟ್ಯಾಕ್ಸ್‌ನಂತಹ ವಿಭಾಗಗಳು ಇಂಡಿಯನ್ ರೆವೆನ್ಯೂ ಸರ್ವಿಸ್ ಅಧಿಕಾರಿಗಳಿಂದ ಉನ್ನತಾಧಿಕಾರವನ್ನು ಹೊಂದಿವೆ. ಅದೇ ವಿಷಯಕ್ಕೆ ರಾಜ್ಯ ಸರ್ಕಾರಕ್ಕೆ ಬಂದಾಗ ರಾಜ್ಯ ಕಮರ್ಷಿಯಲ್ ಟ್ಯಾಕ್ಸ್ ವಿಭಾಗಗಳು, ಕಮಿಷನರ್ ಅವರು ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ನಿಂದ ಬಂದವರು (ಐ.ಎ.ಎಸ್.), ಅವರ ಕೆಲ ಹಂತದ ಅಧಿಕಾರಿಗಳು ರಾಜ್ಯಆಡಳಿತದ ಸೇವಾಧಿಕಾರಕ್ಕೆ ಸೇರಿದವರು, ಸೆಂಟ್ರಲ್ ಎಕ್ಸೈಜ್ ಸೇವಾ ತೆರಿಗೆಯ ಹುದ್ದೆಗಳಾದ ಪ್ರಿನ್ಸಿಪಲ್ ಚೀಫ್ ಕಮಿಷನರ್ ಅಥವಾ ಚೀಫ್ ಕಮಿಷನರ್, ಕಮಿಷನರ್ ಇನ್ನೂ ಮುಂತಾದವು. ಇವುಗಳಲ್ಲಿರುವ ಅಂತರವನ್ನು ಜಿ.ಎಸ್.ಟಿ. ವ್ಯವಸ್ಥೆಯು ಹೇಗೆ ಸರಿಪಡಿಸುತ್ತದೆ ಎಂಬುದನ್ನು ಕಾದುನೋಡಬೇಕಾಗಿದೆ.

**ಸಣ್ಣ ಉದ್ದಿಮೆಗಳವರ ಮೇಲೆ ಆಗುವ ಪರಿಣಾಮ :** ಸಣ್ಣ ಉದ್ದಿಮೆದಾರರ ಮೇಲೆ ಜಿ.ಎಸ್.ಟಿ. ಮಾಡಬಹುದಾದ ಪರಿಣಾಮವು, ಕೆಲವೊಮ್ಮೆ ಆತಂಕದ್ದೆಂದು ಹೇಳಲಾಗುತ್ತಿದೆ. ಜಿ.ಎಸ್.ಟಿ. ವ್ಯವಸ್ಥೆಯಲ್ಲಿ ಸಣ್ಣ ಉದ್ದಿಮೆದಾರರನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. 20 ಲಕ್ಷ ರೂಪಾಯಿಗಳ ಮಿತಿಗಿಂತ ಕೆಳಗಿರುವವರು

(ವಿಶಿಷ್ಟತೆಯುಳ್ಳವರ ಸಂದರ್ಭದಲ್ಲಿ 10 ಲಕ್ಷ ರೂಗಳು). ಇವರು ಜಿ.ಎಸ್.ಟಿ. ಅಡಿಯಲ್ಲಿ ದಾಖಲಾಗುವ ಅವಶ್ಯವಿಲ್ಲ. ಪ್ರಾಯೋಗಿಕವಾಗಿ ಅವರು ಉದ್ದಿಮೆಯಲ್ಲಿದ್ದು ಬಳಕೆದಾರ ವ್ಯಾಪಾರಿಗಳು / ಉತ್ಪಾದಕರು /ಆಹಾರ ಪೂರೈಸುವ ಸೇವೆಯವರಾಗಬಹುದಾಗಿದೆ. ಕನಿಷ್ಠ ಮಿತಿಯಿಂದ 75 ಲಕ್ಷಗಳ ಸಂಯುಕ್ತ ಬಂಡವಾಳ ಹೂಡಿಕೆಯಲ್ಲಿ ಇರುವವರು, ಉತ್ಪಾದಕರಾಗಿದ್ದ ಪಕ್ಷದಲ್ಲಿ 2.5% ಪಾವತಿ ಮಾಡುವ ಐಚ್ಛಿಕತೆಯಿದೆ, ವ್ಯಾಪಾರಿಗಳಾಗಿದ್ದಲ್ಲಿ 1% ಪಾವತಿಮಾಡಬೇಕಾಗಿದೆ. ಹೂಡಿಕೆಯ ತೆರಿಗೆ ಜಮಾವನ್ನು ಗಮನದಲ್ಲಿಟ್ಟುಕೊಂಡು, ಬಿ 2 ಬಿ ವ್ಯಾಪಾರ ಮಾಡುವವರು ಹೂಡಿಕೆ ಆಯ್ಕೆಯನ್ನು ನಿರೀಕ್ಷಿಸಬಹುದು, ಇದನ್ನು ಎಲ್ಲರೂ ಮಾಡಬೇಕಾಗಿಲ್ಲ. ಪ್ರಾಯೋಗಿಕವಾಗಿ ಅವರು ಕೇವಲ ಬಳಕೆದಾರ ವ್ಯಾಪಾರಿಗಳು / ಉತ್ಪಾದಕರು /ಆಹಾರ ಪೂರೈಕೆ ಮಾಡುವವರು ಆಗಿರಬಹುದಷ್ಟೆ.

ಮೂರನೇ ವಿಭಾಗದಲ್ಲಿ, ಸಣ್ಣ ಉದ್ದಿಮೆಯವರು ಮೇಲೆ ಹೇಳಿದ ಹೂಡಿಕೆಯ ಮಿತಿಗಿಂತ ಮೇಲಿದ್ದ ಸಂದರ್ಭದಲ್ಲಿ ಜಿ.ಎಸ್.ಟಿ. ಚೌಕಟ್ಟಿನೊಳಕ್ಕೆ ಬರುವ ಅಗತ್ಯವಿರುತ್ತದೆ.

**ಇತರೆ ಸಮಸ್ಯೆಗಳು**

* ಯಾವುದೇ ವ್ಯಾಪಾರದಲ್ಲಿನ ಸಂಭಾವ್ಯ ಪರಿಣಾಮಗಳಿಗೆ ಜಿ.ಎಸ್.ಟಿ. ಯನ್ನು ಕೂಲಂಕಷವಾಗಿ ಓದಿ ತಿಳಿಯಬೇಕಾಗುತ್ತದೆ. * ಜಿ.ಎಸ್.ಟಿ. ಅಡಿಯಲ್ಲಿ ಅಸ್ಸೆಸ್ಸಿಂಗ್ ಮಾಡಬೇಕಾದ ರೀತಿ ಮತ್ತು ಹೂಡಿಕೆ ಜಮಾದ ಪರಿಮಾಣ. * ಸ್ಪರ್ಧಾತ್ಮಕತೆಯ ಮೌಲ್ಯೀಕರಣ ಮತ್ತು ಉತ್ಪಾದಕ ವಸ್ತುಗಳಿಗಿರುವ ಬೇಡಿಕೆಗಳನ್ನು, ಹೊಸ ಜಿ.ಎಸ್.ಟಿ. ದರ ರಚನೆಯ ಹಿನ್ನೆಲೆಯಲ್ಲಿ ಗಮನಿಸಿ, ಉತ್ಪಾದಕ ವಸ್ತುಗಳ ಬೆಲೆ ಇರಬೇಕಾದಕ್ಕಿಂತ ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. * ಸಂಘಟನೆಯಲ್ಲಿ, ಪ್ರಕ್ರಿಯೆಗಳನ್ನು / ಎಸ್.ಪಿ.ಓ. ಗಳ ಸಿದ್ಧಪಡಿಸುವಿಕೆಯನ್ನು ಅನುಸರಿಸಬೇಕು. * ಅಧಿಕೃತ ದಿನಗಳಿಗೆ ಸರಿಹೊಂದುವಂತೆ ದಾಖಲೆಗಳನ್ನು ಸಿದ್ಧಪಡಿಸಬೇಕು, ಅವಶ್ಯ ಬದಲಾವಣೆಗಳು / ಸೇರ್ಪಡೆ / ತ್ಯಜಿಸುವಿಕೆಗಳನ್ನುದಾಖಲೆಗಳಲ್ಲಿ ಮಾಡಿಕೊಂಡು, ಹೊಸ ಕಾನೂನಿಗೆ ತಕ್ಕಂತೆ ಅಗತ್ಯಗಳನ್ನು ರೂಪಿಸಿಕೊಳ್ಳಬೇಕು. * ಸ್ಥಿತ್ಯಂತರ ಗೊಳ್ಳಬೇಕಾಗಿರುವಂಥವು. * ವಹಿವಾಟಿನ / ವ್ಯಾಪಾರದ ವಿವರಗಳನ್ನೊಳಗೊಂಡ ರಿಟರ್ನ್ಸ್ ಸರಿಯಾಗಿ ಪ್ರತಿಫಲನಗೊಳ್ಳಬೇಕು ಉದಾ : ಸೆಂ. ವ್ಯಾಟ್ ಕ್ರೆಡಿಟ್ 30 ಜೂನ್ 2017 ರ ಅವಧಿಗೆ ಮುಕ್ತಾಯಗೊಳ್ಳುವಂತೆ ರಿಟರ್ನ್ಸ್ ನಲ್ಲಿ ಸೂಚಿತವಾಗಬೇಕು. ಹಾಗಾದಾಗ ಮಾತ್ರ ಅಧಿಕೃತ ದಿನಾಂಕಕ್ಕೆ ಅದನ್ನು ಕೊಂಡೊಯ್ಯುವುದಕ್ಕೆ ಸಾಧ್ಯವಾಗುತ್ತದೆ. * ಸರಕುಪಟ್ಟಿಯ ಪರಿಶೀಲನೆ ಮತ್ತು ನಿಖರ ದಾಖಲೆ. * ಜಿ.ಎಸ್.ಟಿ. ಯ ಅತ್ಯಾಗತ್ಯತೆಗಳನ್ನು ಬೆಂಬಲಿಸುವ, ಐಟಿ ಒಳ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು. * ಎಂ.ಐ.ಎಸ್. ವರದಿಗಳನ್ನು ವಿಶ್ಲೇಷಿಸಬೇಕು, ಅದು ಜಿ.ಎಸ್.ಟಿ. ಯನ್ನು ಜಾರಿಗೊಳಿಸುವುದಕ್ಕೆ ಅಗತ್ಯವಿರುವಂಥದ್ದಾಗಿರುತ್ತದೆ. * ಇತರೆ ಕಾನೂನುಗಳಿಂದಾಗುವ ಪರಿಣಾಮಗಳನ್ನು ವಿಶ್ಲೇಷಿಸಬೇಕು ಮತ್ತು ಕಸ್ಟಮ್ಸ್ ಹಾಗೂ ಎಫ್.ಟಿ.ಪಿ. ಗಳನ್ನು ಸಂಯೋಜಿಸಬೇಕು.

ಮೇಲಿನ ಎಲ್ಲಾ ಸವಾಲುಗಳ ಮತ್ತು ಮೇಲೆ ಚರ್ಚಿಸಿದ ಹಲವಾರು ಸಮಸ್ಯೆಗಳ ಹೊರತಾಗಿಯೂ, ಜಿ.ಎಸ್.ಟಿ. ಯು ಉತ್ಪಾದಕ ವಸ್ತುವಿನ ಮೇಲೆ ವಿಧಿಸುವ ತೆರಿಗೆಗಳ ಅಳತೆಗೋಲನ್ನು ಪಾರದರ್ಶಕವಾಗಿಸಿದೆ, ಅದರಿಂದ ಇದುವರೆಗೂ ಪಾವತಿಮಾಡುತ್ತಿದ್ದ, ಸುಪ್ತ ಮತ್ತು ಮಿಶ್ರ ರೀತಿಯ ತೆರಿಗೆಯ ಕ್ರಮಕ್ಕೆ ಒಂದು ಕೊನೆಯನ್ನು ತಂದಂತೆ ಆಗಿದೆ. ಜಿ.ಎಸ್.ಟಿ. ಯು ದೇಶದಾದ್ಯಂತ ಸರಕು ಹಾಗೂ ಸೇವೆಗಳಿಗೆ ಸಂಬಂಧಿಸಿದಂತೆ ಸ್ವಚ್ಛಂದವಾಗಿ ಸಾಗುವಂತಹ ಸೌಲಭ್ಯಗಳನ್ನು ಒದಗಿಸುವುದೆಂದು ನಿರೀಕ್ಷಿಸಲಾಗಿದೆ. ಇದರಿಂದ ಭಾರತದ ಜಿ.ಡಿ.ಪಿ. ಯನ್ನು ಶೇಕಡಾ 1 ರಿಂದ 1.8 ಕ್ಕೆ ಏರಿಸುವುದೆಂದು ನಿರೀಕ್ಷಿಸಲಾಗಿದೆ. ತೆರಿಗೆಗಳಲ್ಲಿದ್ದ ಬಹುತ್ವವನ್ನು ತಗ್ಗಿಸುವ ಮೂಲಕ, ವಿದೇಶಿ ಬಂಡವಾಳಗಾರರಲ್ಲಿ ವಿಶ್ವಾಸ ಮೂಡಿಸುವುದಕ್ಕೆ ಕಾರಣವಾಗುವ ಮೂಲಕ, ವಿದೇಶಿ ನೇರ ಬಂಡವಾಳ ಹೂಡಿಕೆಗೆ ನಮ್ಮ ದೇಶದಲ್ಲಿ ಒಂದು ಬಲವರ್ಧನೆಯನ್ನು ಉಂಟು ಮಾಡಿದಂತಾಗಿದೆ.

ನಾವು ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಮತ್ತು ಅವರ ತಂಡವನ್ನು, ಸರಕು ಮತ್ತು ಸೇವಾ ತೆರಿಗೆ ಶುಭಾರಂಭ ಮಾಡಲು ತೊಡಗಿರುವುದಕ್ಕೆ ಅಭಿನಂದಿಸಬೇಕಾಗಿದೆ. ಯಾವ ಸುಧಾರಣೆಗಳೂ ಅಲ್ಲಿಯೇ ನಿಲ್ಲುವುದಿಲ್ಲವಾಗಿ, ಮೊದಲ ಹೆಜ್ಜೆಯನ್ನು ಯಶಸ್ವಿಯಾಗಿ ಇಡಲಾಗಿದೆ. ಇನ್ನೂ ಹೆಚ್ಚಿನ ಸುಧಾರಣೆಗಳು, ಮುಂದೆ ಬರುವುದರಲ್ಲಿದ್ದು, ಭಾರತದ ಆರ್ಥಿಕ ವ್ಯವಸ್ಥೆಯು ಹೊಸ ಉತ್ಥಾನವನ್ನು ತೋರುವುದೆಂದು ಆಶಿಸಲಾಗಿದೆ. ❑

## ಚಂಪಾರಣ ಶತಮಾನೋತ್ಸವ

ಚಂಪಾರಣ ಸತ್ಯಾಗ್ರಹದ ಶತಮಾನೋತ್ಸವ ಸ್ಮರಣಾರ್ಥ ವಿವಿಧ ಯೋಜನೆ ಕೈಗೊಳ್ಳಲು ಕೇಂದ್ರ ಸರ್ಕಾರ ಗೃಹಸಚಿವರ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ರಾಷ್ಟ್ರೀಯ ಅನುಷ್ಠಾನ ಸಮಿತಿ ರಚಿಸಿದೆ. ಇದರಲ್ಲಿ ಪ್ರಧಾನಮಂತ್ರಿಯವರು ಬಿಹಾರ್‌ಗಾಗಿ ಪ್ರಕಟಿಸಿದ ಪ್ರವಾಸೋದ್ಯಮದ 'ಗಾಂಧಿ ಸರ್ಕಿಟ್' ಅಭಿವೃದ್ಧಿ ಕಾರ್ಯಕ್ರಮವೂ ಸೇರಿದೆ. ಇದರನ್ವಯ ಸ್ವದೇಶಿ ದರ್ಶನ ಯೋಜನೆಯಡಿ, ಭಿತಿಹರ್ವಾ – ಚಂದ್ರಹಿಯಾ – ತುರ್ಕಲಿಯಾ ಪ್ರವಾಸಿ ಸರ್ಕಿಟ್ ಅಭಿವೃದ್ಧಿಪಡಿಸಲು, ಕೇಂದ್ರಸರ್ಕಾರ ಬಿಹಾರ್‌ಗೆ 4465 ಲಕ್ಷ ರೂ ಧನಸಹಾಯ ಒದಗಿಸಲಿದೆ. ಸಂಸ್ಕೃತಿ ಮತ್ತು ಪ್ರವಾಸೋದ್ದಿಮೆ ಖಾತೆ ಸಚಿವ ಡಾ. ಮಹೇಶ್ ಶರ್ಮಾ ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಈ ವಿಷಯ ತಿಳಿಸಿದ್ದಾರೆ.

# ಗ್ರಾಹಕರಿಗೆ ಆಗುವ ಪ್ರಯೋಜನ

* ಸೂರಜ್ ಜೈಸ್ವಾಲ್




**ಬಹುಚರ್ಚಿತ ವಿಷಯವೇನೆಂದರೆ, ದೇಶದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಜಿಎಸ್‌ಟಿಯಿಂದ ಹೆಚ್ಚಿನ ಅನುಕೂಲವಾಗಲಿದೆ. ಪ್ರಸ್ತುತ, ಭಾರತದಲ್ಲಿ ಬಹುಸಂಖ್ಯೆಯ ಉದ್ದಿಮೆಗಳು ಅನೌಪಚಾರಿಕ ಆರ್ಥಿಕತೆಯಲ್ಲಿ ಕಾರ್ಯಾಚರಿಸುತ್ತಿವೆ. ಈ ಉದ್ಯಮಗಳು ನಿಯಂತ್ರಣ ಮತ್ತು ತೆರಿಗೆ ಕಟ್ಟುಪಾಡುಗಳಿಂದ ತಪ್ಪಿಸಿಕೊಂಡಿವೆ. ಆದರೂ ಸಹ ಈ ಉದ್ದಿಮೆಗಳಿಗೆ ಜಿಎಸ್‌ಟಿ ಜಾರಿ ನಂತರ ಒಟ್ಟಾರೆ ವೆಚ್ಚದಲ್ಲಿ ಇಳಿಕೆ ಆಗಲಿದೆ.**

ತೆರಿಗೆಯನ್ನು ಯಾರು ಪಾವತಿಸುತ್ತಾರೆ ಮತ್ತು ಹೇಗೆ ಇದನ್ನು ಸಂಗ್ರಹಿಸಲಾಗುತ್ತದೆ ಎಂಬ ಆಧಾರದಲ್ಲಿ ದೇಶದ ತೆರಿಗೆ ವ್ಯವಸ್ಥೆಯನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. 1. ನೇರ ತೆರಿಗೆ. 2. ಪರೋಕ್ಷ ತೆರಿಗೆ. ತೆರಿಗೆಗಳನ್ನು ಸಾಮಾನ್ಯವಾಗಿ ಆದಾಯ, ಲಾಭ ಅಥವಾ ಸಂಪತ್ತಿನ(ಸ್ವತ್ತು) ಮೇಲೆ ವಿಧಿಸಲಾಗುತ್ತದೆ. ವರಮಾನ ತೆರಿಗೆ, ಕಾರ್ಪೊರೇಷನ್ ತೆರಿಗೆ, ಸಂಪತ್ತಿನ ತೆರಿಗೆ ಮತ್ತು ಆಸ್ತಿ ತೆರಿಗೆ ಇತ್ಯಾದಿ ನೇರ ತೆರಿಗೆಯ ಕೆಲವು ಉದಾಹರಣೆಗಳು.

ಇದಕ್ಕೆ ವ್ಯತಿರಿಕ್ತ ಎಂಬಂತೆ, ಪರೋಕ್ಷ ತೆರಿಗೆಗಳನ್ನು ಸರಕು ಮತ್ತು ಸೇವೆಗಳ ವಹಿವಾಟಿನ ಮೇಲೆ ವಿಧಿಸಲಾಗುತ್ತದೆ. ಈ ತೆರಿಗೆಗಳನ್ನು ಮಾರಾಟಗಾರ ಮತ್ತು ಖರೀದಿದಾರ ಭರಿಸಬೇಕಾಗುತ್ತದೆ. ಆದಾಗ್ಯೂ, ಸಾಮಾನ್ಯವಾಗಿ ಮಾರಾಟಗಾರರು ಬಹುತೇಕ ಸಂದರ್ಭಗಳಲ್ಲಿ ಖರೀದಿದಾರರಿಗೆ ಈ ತೆರಿಗೆಯನ್ನು ವರ್ಗಾಹಿಸುವ ಸಾಧ್ಯತೆಗಳೇ ಹೆಚ್ಚು. ಪರೋಕ್ಷ ತೆರಿಗೆಗೆ ಕೆಲವು ಉದಾಹರಣೆಗಳನ್ನು ನೀಡುವುದಾದರೆ, ವಿದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ವಿಧಿಸುವ ಸೀಮಾಸುಂಕ, ವಾಣಿಜ್ಯ ಸಂಸ್ಥೆಗಳು ಒದಗಿಸುವ ನಾನಾ ರೀತಿಯ ಸೇವೆಗಳಿಗೆ ವಿಧಿಸುವ ಸೇವಾ ತೆರಿಗೆ, ನಾನಾ ಸ್ವರೂಪದ ಸರಕುಗಳ ತಯಾರಿಕೆಗೆ ವಿಧಿಸುವ ಅಬಕಾರಿ ಸುಂಕ, ಸರಕುಗಳ ಮಾರಾಟದ ಮೇಲೆ ವಿಧಿಸುವ ಮಾರಾಟ ತೆರಿಗೆ ಮತ್ತು ಇತರೆ ತೆರಿಗೆಗಳು ಸೇರುತ್ತವೆ. ಸರಕು ಮತ್ತು ಸೇವಾ ತೆರಿಗೆ 'ಜಿಎಸ್‌ಟಿ' ಭಾರತದಲ್ಲಿ ಜಾರಿಯಾಗುತ್ತಿರುವ ಹೊಸ ಪರೋಕ್ಷ ತೆರಿಗೆ ವ್ಯವಸ್ಥೆಯಾಗಿದ್ದು, ಇದು ಬಹುತೇಕ ಹಳೆಯ ಎಲ್ಲಾ ಪರೋಕ್ಷ ತೆರಿಗೆಗಳ ಬದಲಿಗೆ ಬಂದಿರುವ ವಿನೂತನ ತೆರಿಗೆ ವ್ಯವಸ್ಥೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಈ ವ್ಯವಸ್ಥೆಯನ್ನು ಇತ್ತೀಚೆಗಷ್ಟೇ ಜಾರಿಗೆ ತಂದಿವೆ.

ಭಾರತದಲ್ಲಿ ಜಿಎಸ್‌ಟಿ ತೆರಿಗೆ ವ್ಯವಸ್ಥೆ 2017 ಜುಲೈ 1ರಿಂದ ಜಾರಿಗೆ ಬಂದಿದೆ. ಈ ತೆರಿಗೆ ವ್ಯವಸ್ಥೆಯ ಪ್ರಮುಖ ಎರಡು ಗುಣಲಕ್ಷಣಗಳೆಂದರೆ, ಪ್ರತಿ ಸರಕು ಅಥವಾ ಸೇವೆಗೆ ಒಂದೇ ದರದ ತೆರಿಗೆ ಅನ್ವಯವಾಗಲಿದೆ. ದೇಶದ ಎಲ್ಲಾ ರಾಜ್ಯಗಳಲ್ಲೂ ಒಂದೇ ರೀತಿಯ ತೆರಿಗೆ ಇರಲಿದೆ. ಆದರೆ, ಕೆಲವು ವಲಯಗಳು ಅಂದರೆ ಪೆಟ್ರೋಲಿಯಂ, ಮದ್ಯ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಈ ವಲಯಗಳು ಹಳೆಯ ಪರೋಕ್ಷ ತೆರಿಗೆ ವ್ಯವಸ್ಥೆಯಲ್ಲೇ ಮುಂದುವರಿಯಲಿವೆ. ಸೀಮಾಸುಂಕಗಳು ಸಹ ಹಳೆಯ ತೆರಿಗೆ ವ್ಯವಸ್ಥೆಯಲ್ಲೇ ಮುಂದುವರಿದಿವೆಯಾದರೂ, ಅವುಗಳನ್ನು ಜಿಎಸ್‌ಟಿಯಲ್ಲಿ ಸಮಗ್ರಗೊಳಿಸಲಾಗಿದೆ. ಗ್ರಾಮ ಪಂಚಾಯಿತಿ, ಮುನಿಸಿಪಾಲಿಟಿಯಂತಹ ಸ್ಥಳೀಯ ಸಂಸ್ಥೆಗಳು ವಿಧಿಸುವ ತೆರಿಗೆಗಳನ್ನು ಸಹ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಈ ರೀತಿಯ ಕೆಲವು ಉದಾಹರಣೆಗಳನ್ನು ಹೊರತುಪಡಿಸಿ, ಇನ್ನುಳಿದ ದೇಶದ ಎಲ್ಲಾ ಪರೋಕ್ಷ ತೆರಿಗೆಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲಾಗಿದೆ. ಜಿಎಸ್‌ಟಿ ವ್ಯಾಪ್ತಿಗೆ ತರಲಾಗಿರುವ ಕೆಲವೊಂದು ಪ್ರಮುಖ ಪರೋಕ್ಷ ತೆರಿಗೆಗಳೆಂದರೆ, ಅಬಕಾರಿ ಸುಂಕ, ಸೇವಾ ತೆರಿಗೆ, ವಿಶೇಷ ಹೆಚ್ಚುವರಿ ಸೀಮಾಸುಂಕ,

* 'ಬಜೆಟ್ ಮತ್ತು ಆಡಳಿತ ಉತ್ತರದಾಹಿತ್ವ ಕೇಂದ್ರ'(ಸಿಬಿಜಿಎ) ದೆಹಲಿ. E-mail : suraj@cbgaindia.org

ರಾಜ್ಯಗಳು ವಿಧಿಸುತ್ತಿದ್ದ ವ್ಯಾಟ್, ರಾಜ್ಯಗಳ ಮಾರಾಟ ತೆರಿಗೆ, ಮನರಂಜನಾ ತೆರಿಗೆ, ಪ್ರವೇಶ ತೆರಿಗೆ, ಐಷಾರಾಮಿ ತೆರಿಗೆ ಇತ್ಯಾದಿ.

ಜಿಎಸ್‌ಟಿ ತೆರಿಗೆ ವ್ಯವಸ್ಥೆಯು ಮೂವರು ಪ್ರಮುಖ ಪಾಲುದಾರರ ಮೇಲೆ ಪರಿಣಾಮ ಬೀರುತ್ತದೆ. ಅವರೆಂದರೆ, ಗ್ರಾಹಕರು, ಸರಕಾರಗಳು ಮತ್ತು ವ್ಯವಹಾರಗಳು(ವ್ಯಾಪಾರ ಮತ್ತು ವಹಿವಾಟು). ಈ ಮುನ್ನ ಇದ್ದ ಪರೋಕ್ಷ ತೆರಿಗೆ ಪದ್ಧತಿಗಿಂತ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಹೇಗೆ ಭಿನ್ನ ಹಾಗೂ ಇದರಿಂದ ಗ್ರಾಹಕರ ಮೇಲಾಗುವ ಸಕಾರಾತ್ಮಕ ಪರಿಣಾಮಗಳು ಹೇಗಿರುತ್ತದೆ ಎಂಬುದನ್ನು ತುಲನಾತ್ಮಕವಾಗಿ ವಿಶ್ಲೇಷಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

### ಹಳೆಯ ಪರೋಕ್ಷ ತೆರಿಗೆ ವ್ಯವಸ್ಥೆಗಿಂತ ಜಿಎಸ್‌ಟಿ ಹೇಗೆ ಭಿನ್ನ?

ಯಾವುದೇ ಒಂದು ಸರಕು ಅಥವಾ ಸೇವೆ ಸಾಮಾನ್ಯ ಗ್ರಾಹಕನೊಬ್ಬನ ಬಳಕೆಗೆ ತಲುಪುವ ಮುನ್ನ ಅದು ತಯಾರಿಕೆ, ಪೂರೈಕೆ ಸರಪಳಿ, ಮಾರುಕಟ್ಟೆ ಸೇರಿದಂತೆ ನಾನಾ ಹಂತಗಳನ್ನು ದಾಟಿ ಬರಬೇಕಾಗುತ್ತದೆ. ಆಗ ಪ್ರತಿ ಹಂತದಲ್ಲೂ ಅದಕ್ಕೆ ಪರೋಕ್ಷ ತೆರಿಗೆ ವಿಧಿಸಲಾಗಿರುತ್ತದೆ. ಕೆಲವು ತೆರಿಗೆಗಳನ್ನು ಕೇಂದ್ರ ಸರಕಾರ ವಿಧಿಸಿದರೆ, ಮತ್ತೆ ಕೆಲವನ್ನು ರಾಜ್ಯ ಸರ್ಕಾರ ವಿಧಿಸಿರುತ್ತದೆ. ಉದಾಹರಣೆಗೆ, ಭಾರತದಲ್ಲಿ ತಯಾರದ ಟಿವಿ ಸೆಟ್‌ವೊಂದು ಕಾರ್ಖಾನೆಯಿಂದ ಹೊರ ಬರುವಾಗ ಅದಕ್ಕೆ ಅಬಕಾರಿ ಸುಂಕ ವಿಧಿಸಲಾಗುತ್ತದೆ. ಆ ಟಿವಿಗೆ ವಿದೇಶದ ಬಿಡಿಭಾಗಗಳನ್ನು ಬಳಸಿದ್ದೇ ಆದರೆ, ಅದಕ್ಕೆ ಸೀಮಾಸುಂಕ ಪಾವತಿಸಬೇಕಾಗುತ್ತದೆ. ಅದಾದ ಬಳಿಕ, ತಯಾರಿಕ ಕಂಪನಿಯಿಂದ ಟಿವಿ ಸೆಟ್ ಸಗಟು ಮಾರಾಟಗಾರನ ಬಳಿಗೆ ಬಂದಾಗ, ಆ ಹಂತದಲ್ಲಿ ಮಾರಾಟ ತೆರಿಗೆ ವಿಧಿಸಲಾಗುತ್ತದೆ. ಅಂತಿಮವಾಗಿ, ಟಿವಿ ಸೆಟ್ ಬಿಡಿ ಮಾರಾಟಗಾರನ ಬಳಿ ಬಂದಾಗ, ವ್ಯಾಟ್ ವಿಧಿಸಲಾಗುತ್ತದೆ. ಗಮನಾರ್ಹ ಸಂಗತಿ ಎಂದರೆ, ಯಾವುದೇ ಸರಕು ಒಂದು ರಾಜ್ಯದಿಂದ ಮತ್ತೊಂದು





ರಾಜ್ಯಕ್ಕೆ ಹೋಗಬೇಕೆಂದರೆ, ಅದು ಮತ್ತಷ್ಟು ಸಂಕೀರ್ಣ ಸಮಸ್ಯೆಗಳನ್ನು ಸೃಷ್ಟಿಸುತ್ತಿತ್ತು. ರಾಜ್ಯಗಳ ನಡುವೆ ಸರಕು ಮತ್ತು ಸೇವೆಗಳು ಹರಿದಾಡಿದರೆ, ಅವುಗಳಿಗೆ ಕೇಂದ್ರೀಯ ಮಾರಾಟ ತೆರಿಗೆ ವಿಧಿಸಲಾಗುತ್ತಿತ್ತು. ಈ ತೆರಿಗೆ ದರ ಒಂದೊಂದು ರಾಜ್ಯದಲ್ಲಿ ಬೇರೆ ರೀತಿಯಲ್ಲಿ ಇರುತ್ತಿತ್ತು. ಜಿಎಸ್‌ಟಿ ಜಾರಿಗೆ ಮುನ್ನ ಮಹಾರಾಷ್ಟ್ರದಲ್ಲಿ ಮೌಲ್ಯವರ್ಧಿತ ತೆರಿಗೆ 'ವ್ಯಾಟ್' ದರ 12.5ರಿತ್ತು. ಅದೇ ಗುಜರಾತ್‌ನಲ್ಲಿ ಅದು 15% ಇತ್ತು. ವಾಸ್ತವವಾಗಿ ಈ ತೆರಿಗೆ ಕೊನೆಗೆ ಗ್ರಾಹಕನಿಗೆ ವರ್ಗಾವಣೆ ಆಗಿ, ಆತನ ಪಾಲಿಗೆ ಹೊರೆಯಾಗುತ್ತಿತ್ತು. ಹಲವಾರು ಸಂದರ್ಭಗಳಲ್ಲಿ ರಾಜ್ಯಗಳು ಕೆಲವೊಂದು ಉತ್ಪನ್ನಗಳು ಮತ್ತು ಸೇವೆಗಳನ್ನು ಉತ್ತೇಜಿಸಲು ಮತ್ತು ನಿರುತ್ತೇಜನಗೊಳಿಸಲು ಐಷಾರಾಮಿ ತೆರಿಗೆ ಅಥವಾ ಸಿನ್ ಟ್ಯಾಕ್ಸ್‌ನಂತಹ ಪ್ರತ್ಯೇಕ ತೆರಿಗೆ ವಿಧಿಸುತ್ತಿದ್ದವು.

ತೀರಾ ಸಂಕೀರ್ಣ ಎನಿಸುತ್ತಿದ್ದ ಈ ರೀತಿಯ ನಾನಾ ತೆರಿಗೆಗಳಿಂದ ಎರಡು ರೀತಿಯ ಸಮಸ್ಯೆಗಳನ್ನು ಹುಟ್ಟುಹಾಕಿತ್ತು. ಅದೆಂದರೆ ಮೊದಲನೆಯದಾಗಿ, ತೆರಿಗೆದಾರರಿಗೆ ತೆರಿಗೆ ಅನುಸರಣೆಯು ಕಠಿಣವಾಗಿಸಿತ್ತು. ಜತೆಗೆ, ತೆರಿಗೆ ವಂಚನೆಗೆ ಇದು ಸಾಕಷ್ಟು ಅವಕಾಶ ಕಲ್ಪಿಸಿತ್ತು. ಎರಡನೆಯದಾಗಿ, ಸರಕು ಅಥವಾ ಸೇವೆಯ ಮಾರಾಟ ಬೆಲೆ ಮೇಲೆ ಎಲ್ಲಾ ಹಂತದ ತೆರಿಗೆಗಳು ಅನ್ವಯವಾಗುವ ಜತೆಗೆ, ಇವುಗಳ ಮೇಲೆಹೊಸ ತೆರಿಗೆಯನ್ನೂ ಅನ್ವಹಿಸಲಾಗುತ್ತಿತ್ತು. ಸರಕಿಗೆ ನಾನಾ ಹಂತಗಳಲ್ಲಿ ವಿಧಿಸಲಾಗಿದ್ದ ತೆರಿಗೆಗಳ ಮೇಲೆ ಮತ್ತೆ ಹೊಸ ತೆರಿಗೆ ಹಾಕಲಾಗುತ್ತಿತ್ತು. ಇದರಿಂದ ತೆರಿಗೆಗಳ ಭಾರದ ಪರಿಣಾಮವನ್ನು ಗ್ರಾಹಕ ಹೊರುವಂತಾಗಿತ್ತು. ಈ ತೆರಿಗೆ ವಿಧಾನವನ್ನು ಕೆಳಗಿನ ಚಿತ್ರದಿಂದ ಸರಳವಾಗಿ ವಿವರಿಸಬಹುದು.

ಈ ಚಿತ್ರದಲ್ಲಿ 'ಎ' ಎಂಬಾತ ಸಗಟು ಮಾರಾಟಗಾರ. 'ಬಿ' ಎಂಬಾತ ಬಿಡಿ(ಚಿಲ್ಲರೆ) ಮಾರಾಟಗಾರ. 'ಸಿ' ಎಂಬಾತ ಗ್ರಾಹಕ. 130 ರೂ. ಬೆಲೆಯ ಸರಕು ಅಥವಾ ಸೇವೆ ಖರೀದಿಸಲು 'ಸಿ' ಎಂಬ ಗ್ರಾಹಕ 20% ತೆರಿಗೆ ಪಾವತಿಸುತ್ತಾನೆ. ಬಿ ಎಂಬಾತ ಎ ಎಂಬಾತನಿಂದ ಖರೀದಿಸಿದಾಗ ಕಟ್ಟಿರುವ ತೆರಿಗೆ ಮೊತ್ತವನ್ನು ಸೇರಿಸಿ ಸಿ ಎಂಬಾತ 20% ತೆರಿಗೆ ಕಟ್ಟುತ್ತಾನೆ. ಸಿ ವಾಸ್ತವವಾಗಿ ಮತ್ತು ಪರಿಣಾಮಕಾರಿಯಾಗಿ ಸರಕಿನ ವಾಸ್ತವ ಬೆಲೆ ಮೇಲೆ ತೆರಿಗೆ ಪಾವತಿಸುವ ಜತೆಗೆ(100 ರೂ + 20 ರೂ.), ಬಿ ಕಟ್ಟಿರುವ ತೆರಿಗೆಯ ಮೇಲೂ ತೆರಿಗೆ ಕಟ್ಟುತ್ತಾನೆ(10 ರೂ ಮತ್ತು 10 ರೂ.ಗೆ 20% ತೆರಿಗೆ). ಈ ರೀತಿಯ ತೆರಿಗೆಯ ಮೇಲೆ ತೆರಿಗೆ ವಿಧಿಸುವ ಪದ್ಧತಿಯು ಅಂತಿಮವಾಗಿ ಗ್ರಾಹಕ ಖರೀದಿಸುವ ಸರಕಿನ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಆದರೆ, ಹೊಸ ಜಿಎಸ್‌ಟಿ ಪದ್ಧತಿಯಲ್ಲಿ, ನಿರ್ದಿಷ್ಟ ಸರಕು ಅಥವಾ ಸೇವೆಗೆ ಎಲ್ಲಾ ರಾಜ್ಯಗಳಲ್ಲೂ ಒಂದೇ ದರದ ತೆರಿಗೆ ಅನ್ವಯವಾಗುತ್ತದೆ ಎಂಬುದು ಗಮನಾರ್ಹ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರತಿ ಉತ್ಪಾದಕ(ತಯಾರಿಕಾದಾರ), ಮಾರಾಟಗಾರ, ವ್ಯವಹಾರ ಅಥವಾ ಉದ್ಯಮ ಸಂಸ್ಥೆ ಜಿಎಸ್‌ಟಿಯಲ್ಲಿರುವ 'ಸರಕು/ಸೇವಾ ತೆರಿಗೆ ಸೌಲಭ್ಯ'(ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್–ಐಟಿಸಿ) ಯೋಜನೆಯ ಪ್ರಯೋಜನಗಳನ್ನು ಪಡೆಯುತ್ತಾರೆ. ಮೇಲಿನ ಚಿತ್ರವನ್ನು ವಿವರಿಸಿ ಹೇಳುವುದಾದರೆ, ಬಿ ಎಂಬಾತ 110 ರೂ. ಮೌಲ್ಯದ ಸರಕು ಅಥವಾ ಸೇವೆಯನ್ನು ಖರೀದಿಸುತ್ತಾನೆ ಎಂದಿಟ್ಟುಕೊಳ್ಳಿ. ಇದರಲ್ಲಿ 10 ರೂ. ತೆರಿಗೆಯೂ ಸೇರಿರುತ್ತದೆ. ಎ ಎಂಬಾತ ಬಿ ಎಂಬ ಖರೀದಿದಾರನ ಸಮಗ್ರ ಮಾಹಿತಿಯೊಂದಿಗೆ ಈ ಹಣವನ್ನು ಸರ್ಕಾರಕ್ಕೆ ಕಟ್ಟುತ್ತಾನೆ. ಆಗ ಬಿ ಎಂಬಾತ 10 ರೂ.ಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪ್ರಯೋಜನ ಪಡೆಯುತ್ತಾನೆ. ಬಿ ಎಂಬಾತ



ಆ ಸರಕನ್ನು ಅಂತಿಮವಾಗಿ ಸಿ ಎಂಬಾತನಿಗೆ 130 ರೂ.ಗೆ ಮಾರಾಟ ಮಾಡಿದರೆ, ಬಿ ಎಂಬತನು ಸರ್ಕಾರಕ್ಕೆ 13 ರೂ. ತೆರಿಗೆ ಕಟ್ಟಬೇಕಾಗುತ್ತದೆ(ಈಗ ಏಕರೂಪ ಜಿಎಸ್‌ಟಿ ದರ 10% ಇದೆ). ಆದಾಗ್ಯೂ, ಬಿ ಎಂಬಾತ ಈಗಾಗಲೇ 10 ರೂ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದಿದ್ದಾನೆ. ಹಾಗಾಗಿ ಇನ್ನು 3 ರೂ. ಮತ್ರ ಪಾವತಿಸಬೇಕಾಗುತ್ತದೆ. ಈ ರೀತಿಯಲ್ಲಿ ಜಿಎಸ್‌ಟಿ ಪದ್ಧತಿಯು ಪರೋಕ್ಷ ತೆರಿಗೆಯನ್ನು ಸರಳೀಕರಿಸಿದೆ ಮತ್ತು ಎಲ್ಲಾ ರಾಜ್ಯಗಳಲ್ಲೂ ಏಕರೂಪದ ತೆರಿಗೆ ದರವನ್ನು ನಿಗದಿಪಡಿಸಿದೆ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವ್ಯವಸ್ಥೆಯು ಒಟ್ಟಾರೆ ತೆರಿಗೆ ಹೊರೆಯನ್ನು ಕಡಿಮೆ ಮಾಡಿ, ವ್ಯವಹಾರಗಳ ಅನಗತ್ಯ ವೆಚ್ಚವನ್ನು ನಿಯಂತ್ರಣಕ್ಕೆ ತರುತ್ತದೆ.

### ಗ್ರಾಹಕನಿಗೆ ಜಿಎಸ್‌ಟಿಯಿಂದ ಸಿಗುವ ಸಂಭಾವ್ಯ ಪ್ರಯೋಜನಗಳು ಮತ್ತು ಅಡ್ಡ ಪರಿಣಾಮಗಳು ಏನು?

ಜಿಎಸ್‌ಟಿಯಿಂದ ಗ್ರಾಹಕರ ಮೇಲಾಗುವ ಪರಿಣಾಮಗಳು ಎರಡು ವಿಧಗಳಿಂದ ಕೂಡಿವೆ. ಮೊದಲನೆಯದಾಗಿ, ಜಿಎಸ್‌ಟಿಯ ನೇರ ಮತ್ತು ತಕ್ಷಣದ ಪರಿಣಾಮವೆಂದರೆ, ಪ್ರತಿ ಸರಕು ಮತ್ತು ಸೇವೆಯ ಮೇಲಿನ ಪರಿಣಾಮಕಾರಿ ಹೊಸ ತೆರಿಗೆ ದರ. ಜಿಎಸ್‌ಟಿ ಜಾರಿಗೆ ಮುನ್ನ ಇದ್ದ ತೆರಿಗೆ ದರಗಳಿಗೆ ಹೋಲಿಸಿದರೆ, ಜಿಎಸ್‌ಟಿ ತೆರಿಗೆಗಳು ಹೇಗೆ ಭಿನ್ನವಾಗಿವೆ. ಅವು ಹೆಚ್ಚಿವೆಯೋ ಅಥವಾ ಕಡಿಮೆ ಇವೆಯೋ ಎಂಬುದನ್ನು ಅವಲಂಬಿಸಿದೆ. ಎರಡನೆಯದಾಗಿ, ಜಿಎಸ್‌ಟಿಯ ಪರೋಕ್ಷ ಪರಿಣಾಮವು ಸಹ ಪರಿಗಣನೆಗೆ ಬರುತ್ತದೆ. ಇದನ್ನು ಕಾಣಬೇಕಾದರೆ ಮಧ್ಯಮದಿಂದ ದೀರ್ಘಾವಧಿವರೆಗೆ ಕಾದು ನೋಡಬೇಕು. ಉತ್ಪಾದನೆ(ತಯಾರಿಕೆ) ಮತ್ತು ಪೂರೈಕೆ ಸರಪಣಿಯಲ್ಲಾಗುವ ಬದಲಾವಣೆ ಪ್ರಕ್ರಿಯೆಗಳಿಂದ ಮಾತ್ರ ತಿಳಿಯಲು ಸಾಧ್ಯವಿದೆ. ಇವೆರಡೂ ಸಂಭಾವ್ಯ ಪರಿಣಾಮಗಳನ್ನು ಸುವಿವರವಾಗಿ ಕೆಳಗೆ ಸಮಾಲೋಚಿಸಲಾಗಿದೆ.



ಜಿಎಸ್‌ಟಿ ವ್ಯವಸ್ಥೆಯಲ್ಲಿ, ಪ್ರತಿ ಸರಕು ಅಥವಾ ಸೇವೆಯು ನಿಗದಿತ ನಾಲ್ಕು ಹಂತದ ತೆರಿಗೆ ದರಗಳಲ್ಲಿ ಒಂದಕ್ಕೆ ಸೇರಿರುತ್ತದೆ – 5%, 12%, 18% ಮತ್ತು28% ಅಥವಾ ಇದನ್ನು ತೆರಿಗೆಯಿಂದ ವಿನಾಯಿತಿ ನೀಡಿರಲಾಗುತ್ತದೆ. ಇದರರ್ಥ ಇದು ಸಂಪೂರ್ಣ 0% ತೆರಿಗೆ ದರಕ್ಕೆ ಒಳಪಟ್ಟಿರುತ್ತದೆ. ವಿವಿಧ ಹಂತದ ಜಿಎಸ್‌ಟಿ ತೆರಿಗೆ ದರಗಳನ್ನು ನಿಗದಿ ಮಾಡಿರುವುದರಿಂದ, ಜಿಎಸ್‌ಟಿ ಜರಿಗೆ ಮುನ್ನ ಸರುಕು ಮತ್ತು ಸೇವೆಗಳಿಗೆ ಇದ್ದ ತೆರಿಗೆ ದರ ಮತ್ತು ಜಿಎಸ್‌ಟಿ ಜಾರಿ ನಂತರ ರೂಪಿಸಿರುವ ತೆರಿಗೆ ದರದಲ್ಲಿ ವ್ಯತ್ಯಾಸ ಕಂಡುಬರಬಹುದು. ಉದಾಹರಣೆಗೆ ಹೇಳುವುದಾದರೆ, ಎಕ್ಸ್ ಹೆಸರಿನ ಉತ್ಪನ್ನವೊಂದನ್ನು ತಯಾರಿಸಿ, ನೇರವಾಗಿ ಗ್ರಾಹಕನಿಗೆ ಮಾರಾಟ ಮಾಡಲಾಗುತ್ತದೆ ಎಂದು ಭಾವಿಸಿ. ಹಳೆಯ ತೆರಿಗೆ ಪದ್ಧತಿಯಲ್ಲಿ, ಅಂತಿಮ ಮರಾಟಕ್ಕೆ ಮುನ್ನ ವಿಧಿಸಲಾಗುತ್ತಿದ್ದ ತೆರಿಗೆಗಳೆಂದರೆ, ಅಬಕಾರಿ ಸುಂಕ, ರಾಜ್ಯಗಳ ವ್ಯಾಟ್, ಪ್ರವೇಶ ತೆರಿಗೆ ಇತ್ಯಾದಿ. ಈ ಎಲ್ಲಾ ತೆರಿಗೆಗಳು ಸೇರಿ ಒಟ್ಟಾರೆ ತೆರಿಗೆ ದರ 15% ಎಂದಿಟ್ಟುಕೊಳ್ಳಿ. ಇದೀಗ ಜಿಎಸ್‌ಟಿ ತೆರಿಗೆ ವ್ಯವಸ್ಥೆಯಲ್ಲಿ ಈ ಉತ್ಪನ್ನವನ್ನು 18% ಜಿಎಸ್‌ಟಿ ತೆರಿಗೆ ದರಕ್ಕೆ ಸೇರಿಸಲಾಗಿದೆ. ಹಾಗಾಗಿ, ಈ ಉತ್ಪನ್ನ ಹಿಂದಿಗಿಂತ ದುಬಾರಿ ಆಗುತ್ತದೆ. ಒಂದು ವೇಳೆ ಇದನ್ನು 12% ಅಥವಾ 5% ಹಂತದ ತೆರಿಗೆ ದರಕ್ಕೆ ಸೇರಿಸಿದರೆ, ಇದು ಗ್ರಾಹಕನಿಗೆ ಅಗ್ಗವಾಗುತ್ತದೆ. ಹಿಂದಿನ ತೆರಿಗೆ ದರಗಳ ವ್ಯತ್ಯಾಸದಿಂದಾಗಿ ಉತ್ಪನ್ನಗಳ ಬೆಲೆಯಲ್ಲಿ ಏರುಪೇರು ಉಂಟಾಗಿದೆ. ಎಲ್ಲಾ ರಾಜ್ಯಗಳನ್ನೂ ಪರಿಗಣನೆಗೆ ತೆಗೆದುಕೊಂಡಾಗ, ನಿರ್ದಿಷ್ಟ ಸರಕು ಮತ್ತು ಸೇವೆ ಒಂದು ರಾಜ್ಯದಲ್ಲಿ ಅಗ್ಗವಾದರೆ, ಬೇರೊಂದು ರಾಜ್ಯದಲ್ಲಿ ದುಬಾರಿ ಅಗುವ ಸಾಧ್ಯತೆ ಇದೆ.

ಜಿಎಸ್‌ಟಿ ಅಡಿ, ಕೃಷಿ ಮತ್ತು ಆಹಾರ ಉತ್ಪನ್ನಗಳು ಅಂದರೆ ಆಹಾರ ಧಾನ್ಯಗಳು, ಬೇಳೆ ಕಾಳುಗಳು, ಹಣ್ಣುಗಳು, ತರಕಾರಿ ಮತ್ತು ಹಾಲು, ಜತೆಗೆ ಶಿಕ್ಷಣ ಮತ್ತು ಆರೋಗ್ಯ ಸಂರಕ್ಷಣೆ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಗ್ರಾಹಕ ದರ ಸೂಚ್ಯಂಕ ಆಧರಿಸಿ ಲೆಕ್ಕ ಹಕುವುದಾದರೆ, ಈ ಎಲ್ಲಾ ಉತ್ಪನ್ನಗಳು ಸೇರಿ ಪ್ರತಿ ಕುಟುಂಬದ ಸರಾಸರಿ 40–45%




ವೆಚ್ಚವನ್ನು ಭರಿಸುತ್ತಿವೆ. ಇನ್ನಿತರೆ ಅಗತ್ಯ ವಸ್ತುಗಳಾದ ಕಲ್ಲಿದ್ದಲು, ಸಕ್ಕರೆ, ಖಾದ್ಯ ತೈಲ ಮತ್ತು ಕಾಫಿಗೆ 5% ವೆಚ್ಚ ತಗುಲುತ್ತದೆ. ಅದರೆ, ಸೇವೆಗಳಿಗೆ 18% ಪ್ರಮಾಣಿತ ದರ (ಸ್ಟ್ಯಾಂಡರ್ಡ್ ರೇಟ್) ನಿಗದಿಪಡಿಸಲಾಗಿದ್ದು, ಜಿಎಸ್‌ಟಿ ಜಾರಿಗೆ ಮುನ್ನ ಇದ್ದ 14–15% ತೆರಿಗೆ ದರಕ್ಕಿಂತ ಇದು ಹೆಚ್ಚಿನದಾಗಿದೆ. ಜಿಎಸ್‌ಟಿಗೆ ಮುನ್ನ ಇದ್ದ ಬಹುವಿಧದ ತೆರಿಗೆ ವ್ಯವಸ್ಥೆ ಮತ್ತು ಕರಭಾರದಿಂದಾಗಿ ಪ್ರತಿ ಸರಕು ಮತ್ತು ಸೇವೆಯ ಪರಿಣಾಮಕಾರಿ ತೆರಿಗೆ ದರದಲ್ಲಿ ನಿಖರ ಚಿಲ್ಲರೆ ಹಣ ಲೆಕ್ಕ ಹಾಕುವುದು ಕಷ್ಟವಾಗುತ್ತಿತ್ತು. ಜಿಎಸ್‌ಟಿ ಜರಿಯ ನಂತರ ಗ್ರಾಹಕನ ಮೇಲಾಗುವ ತೆರಿಗೆ ಹೊರೆ ಕುರಿತು ಕೆಲವು ಅರ್ಥಶಾಸ್ತ್ರಜ್ಞರು ಮಾಡಿರುವ ಅಂದಜಿನ ಪ್ರಕಾರ, 50% ಸರಕುಗಳ ಜಿಎಸ್‌ಟಿ ದರ ಬಹುತೇಕ ಹಿಂದಿನ ದರದಷ್ಟೇ ಇರಲಿದೆ. 30% ಸರಕುಗಳ ತೆರಿಗೆ ದರ ಇಳಿಕೆ ಕಂಡರೆ, 20% ವಸ್ತುಗಳ ತೆರಿಗೆ ಏರಿಕೆ ಕಾಣಲಿದೆ.

ಜಿಎಸ್‌ಟಿಯ ಪರಿಣಾಮಕಾರಿ ತೆರಿಗೆ ದರ ಮತ್ತೊಂದು ಮಾರ್ಗದಲ್ಲಿ ಬದಲಾಗುತ್ತದೆ ಅಂದರೆ ಕಡಿಮೆ ಆಗುತ್ತದೆ. ಅದೇಂದರೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಯೋಜನೆ. ಈ ಮುನ್ನ ವಿವರಿಸಿರುವಂತೆ, ಐಟಿಸಿ ಸೌಲಭ್ಯವು ಒಟ್ಟಾರೆ ತೆರಿಗೆ ಹೊರೆಯನ್ನು ಕಡಿಮೆ ಮಾಡುತ್ತದೆ. ಜತೆಗೆ, ಸರಕುಗಳ ಒಟ್ಟಾರೆ ತಯಾರಿಕಾ ಮತ್ತು ಮಾರಾಟ ವೆಚ್ಚವನ್ನು ತಗ್ಗಿಸುತ್ತದೆ. ಈ ವೆಚ್ಚ ನಿಯಂತ್ರಣವು ಅಂತಿಮವಾಗಿ ಗ್ರಾಹಕನ ಖರೀದಿ ಬೆಲೆಯನ್ನು ಕಡಿಮೆ ಮಾಡುತ್ತದೆ. ಜಿಎಸ್‌ಟಿ ತೆರಿಗೆ ವ್ಯವಸ್ಥೆಯಲ್ಲಿ ತಯಾರಕರಿಗೆ ಲಭ್ಯವಾಗುವ ವೆಚ್ಚ ನಿಯಂತ್ರಣ ಸೌಲಭ್ಯಗಳನ್ನು ಗ್ರಾಹಕರಿಗೆ ವರ್ಗಾಯಿಸದ ತಯಾರಿಕಾ ಸಂಸ್ಥೆಗಳು ಅಥವಾ ಕಂಪನಿಗಳ ವಿರುದ್ಧ ಬಿಗಿ ಕ್ರಮಗಳನ್ನು ತೆಗೆದುಕೊಳ್ಳಲು ಕೇಂದ್ರ ಸರಕಾರ ಜಿಎಸ್‌ಟಿ ಕಾಯಿದೆಯಲ್ಲಿ ಲಾಭಗುಳಿತನ–ಪ್ರತಿಬಂಧಕ ನಿಯಮಗಳನ್ನು ಅಳವಡಿಸಿದೆ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್



ಸೌಲಭ್ಯದಿಂದ ತಯಾರಿಕಾ ವೆಚ್ಚ ಉಳಿತಾಯ ಮಾಡುವ ಯಾವುದೇ ಕಂಪನಿ ಅಥವಾ ಸಂಸ್ಥೆ, ಸರ್ಕಾರ ನಿಗದಿಪಡಿಸಿರುವಂತೆ ವೆಚ್ಚ ಉಳಿತಾಯದ ನಿರ್ದಿಷ್ಟ ಮೊತ್ತವನ್ನು ಗ್ರಾಹಕನಿಗೆ ವರ್ಗಾಹಿಸುವುದನ್ನು ಕಡ್ಡಾಯ ಮಾಡಲಾಗಿದೆ. ಆದರೆ, ಸರಕಿನ ಬೆಲೆ ತಗ್ಗಿದ ಸಂದರ್ಭಗಳಲ್ಲಿ, ತಯಾರಕರಿಗೆ ವೆಚ್ಚ ಉಳಿತಾಯ ವರ್ಗಾವಣೆ ಕಷ್ಟವಾಗುತ್ತದೆ, ತಕ್ಷಣಕ್ಕಂತೂ ಸಾಧ್ಯವಾಗದು. ಗರಿಷ್ಠ ಚಿಲ್ಲರೆ ಬೆಲೆಯ ಉತ್ಪನ್ನಗಳ ಸಾಗಾಣಿಕೆ ಸವಾಲನ್ನು ತಯಾರಕರು ಎದುರಿಸುವುದೇ ಇದಕ್ಕೆ ಕಾರಣ. ಜಿಎಸ್‌ಟಿ ಜಾರಿಯಾದ ನಂತರ ಪರಿಣಾಮಕಾರಿ ತೆರಿಗೆ ದರಗಳಲ್ಲಿ ವ್ಯತ್ಯಾಸ ಅಥವಾ ಇಳಿಕೆಯ ಸಂಭಾವ್ಯಗಳಿರುವುದರಿಂದ ಸದ್ಯದಲ್ಲೇ ಹಣದುಬ್ಬರ ಏರಿಕೆ ಆಗಲಿದೆ ಎಂದು ಹಲವಾರು ಅರ್ಥಶಾಸ್ತ್ರಜ್ಞರು ಮತ್ತು ಮಾರುಕಟ್ಟೆ ವಿಶ್ಲೇಷಕರು ಭವಿಷ್ಯ ನುಡಿದಿದ್ದರು. ಈ ಭವಿಷ್ಯದ ಹಿಂದೆ ಎರಡು ಕಾರಣಗಳಿದ್ದವು. ಜಿಎಸ್‌ಟಿ ಜಾರಿ ಮಾಡಿದ ಜಪಾನ್, ಆಸ್ಟ್ರೇಲಿಯಾ, ಕೆನಡಾ ಮತ್ತಿತರೆ ರಾಷ್ಟ್ರಗಳ ಅನುಭವವನ್ನು ನೋಡಿದರೆ, ಆ ದೇಶಗಳಲ್ಲಿ ಜಿಎಸ್‌ಟಿ ಜಾರಿಯಾದ ನಂತರ, ಹಣದುಬ್ಬರ ಹಠಾತ್ ಏರಿಕೆ ಆಗಿತ್ತು. ಅದೇ ಪರಿಸ್ಥಿತಿ ಭಾರತದಲ್ಲೂ ಉದ್ಭವವಾಗಬಹುದೆಂಬುದು ಅವರ ಲೆಕ್ಕಾಚಾರ. ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಜಿಎಸ್‌ಟಿ ತೆರಿಗೆ ಅನುಸರಣಾ ವೆಚ್ಚವೂ ಏರಿಕೆ ಆಗುವುದರಿಂದ ಅಗತ್ಯ ವಸ್ತುಗಳ ಸಂಭಾವ್ಯ ಬೆಲೆ ಏರಿಕೆಯ ಸಾಧ್ಯತೆ ಇದೆ. ಜಿಎಸ್‌ಟಿ ಜಾರಿಯ ನಂತರದ ಮುಂದಿನ ಹಂತದಲ್ಲಿ ಜಿಎಸ್‌ಟಿ ತೆರಿಗೆಯು ತಯಾರಿಕೆ, ಉದ್ಯಮ ಮತ್ತು ಪೂರೈಕೆ ಸರಪಣಿ ಪ್ರಕ್ರಿಯೆಯ ಮೂಲಕ ಗ್ರಾಹಕನ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬುದನ್ನು ನಾವು ನೋಡಲಿದ್ದೇವೆ. ಬಹುಚರ್ಚಿತ ವಿಷಯವೇನೆಂದರೆ, ದೇಶದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಜಿಎಸ್‌ಟಿಯಿಂದ ಹೆಚ್ಚಿನ ಅನುಕೂಲವಾಗಲಿದೆ. ಪ್ರಸ್ತುತ, ಭಾರತದಲ್ಲಿ ಬಹುಸಂಖ್ಯೆಯ ಉದ್ದಿಮೆಗಳು ಅನೌಪಚಾರಿಕ ಆರ್ಥಿಕತೆಯಲ್ಲಿ ಕಾರ್ಯಾಚರಿಸುತ್ತಿವೆ. ಈ ಉದ್ಯಮಗಳು ನಿಯಂತ್ರಣ ಮತ್ತು ತೆರಿಗೆ ಕಟ್ಟುಪಾಡುಗಳಿಂದ ತಪ್ಪಿಸಿಕೊಂಡಿವೆ. ಆದರೂ ಸಹ ಈ ಉದ್ದಿಮೆಗಳಿಗೆ ಜಿಎಸ್‌ಟಿ ಜಾರಿ ನಂತರ ಒಟ್ಟಾರೆ ವೆಚ್ಚದಲ್ಲಿ ಇಳಿಕೆ ಆಗಲಿದೆ. ಜಿಎಸ್‌ಟಿ ಜಾಲದೊಂದಿಗೆ ನೊಂದಣಿ ಆಗಿರುವ ಯಾವುದೇ ಒಂದು ಉದ್ಯಮದ ಜತೆ ಇವು ವ್ಯವಹರಿಸಿದರೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸೌಲಭ್ಯದ ಪ್ರಕಾರ, ಇವಕ್ಕೆ ಜಿಎಸ್‌ಟಿ ಜಾಲದ ಎಲ್ಲಾ ಸೌಲಭ್ಯಗಳು ಲಭ್ಯವಾಗುತ್ತವೆ. ಈ ರೀತಿಯ ಅವಕಾಶ ಕಲ್ಪಿಸಿರುವುದರಿಂದ, ಯಾವುದೇ ಖರೀದಿದಾರ ಜಿಎಸ್‌ಟಿ ಅನುಸರಣಾ ಮಾರಾಟಗಾರನಿಂದಲೇ ಸರಕುಗಳನ್ನು ಖರೀದಿಸುವ ಸಾಧ್ಯತೆಗಳೇ ಹೆಚ್ಚಿರುತ್ತವೆ. ಎಲ್ಲಕ್ಕಿಂತ ವಿಶೇಷವಾಗಿ, ಜಿಎಸ್‌ಟಿ ಜಾಲದಿಂದ ಹೊರಗೆ ಕಾರ್ಯಾಚರಿಸುತ್ತಿರುವ ಉದ್ದಿಮೆಗಳು ಜಿಎಸ್‌ಟಿಯಲ್ಲಿ ನೊಂದಾಯಿಸಲು ಇದು ಪ್ರೇರಣೆ ಒದಗಿಸುತ್ತದೆ. ಒಟ್ಟಾರೆ, ಈ ಎಲ್ಲಾ ಬೆಳವಣಿಗೆಗಳಿಂದ ಜಿಎಸ್‌ಟಿ ತೆರಿಗೆ ಜಾಲ ವಿಸ್ತಾರಗೊಂಡು, ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಕ್ರೋಢೀಕರಣವಾಗಲಿದೆ. ಕೊನೆಯದಾಗಿ, ಜಿಎಸ್‌ಟಿಯ ಮತ್ತೊಂದು ಮಹತ್ವದ ಪರಿಣಾಮವೆಂದರೆ, ಅದು ಸರಕುಗಳ ಸಾಗಣೆಗೆ ಸಂಬಂಧಿಸಿದ್ದಾಗಿದೆ. ವಿಶೇಷವಾಗಿ, ಅಂತಾರಾಜ್ಯ ಸಾಗಣೆ. ರಾಜ್ಯಗಳ ಗಡಿ ಠಾಣಗಳಲ್ಲಿ ಅನುಮತಿಗಾಗಿ ಸಾಲಾಗಿ ನಿಲ್ಲುವ ಟ್ರಕ್‌ಗಳನ್ನು ನಾವು ಸಾಮಾನ್ಯವಾಗಿ ಕಾಣಬಹುದು. ಆದಾಗ್ಯೂ, ಜಿಎಸ್‌ಟಿ ತೆರಿಗೆ ದರ ಎಲ್ಲಾ ರಜ್ಯಗಳಲ್ಲೂ ಏಕರೂಪದಲ್ಲಿರುವುದರಿಂದ, ಈ ರೀತಿಯ ಟ್ರಕ್ ಸಾಲುಗಳು ಕಡಿಮೆ ಆಗುವ ಸಾಧ್ಯತೆಗಳೇ ಹೆಚ್ಚು. ಈಗಾಗಲೇ 22 ರಾಜ್ಯಗಳು ಗಡಿಯಲ್ಲಿನ ಚೆಕ್‌ಪೋಸ್ಟ್‌ಗಳನ್ನು ರದ್ದು ಮಾಡಿವೆ. ದೇಶದ ಗಡಿ ಠಾಣಗಳ ಮೂಲಕ ಸರಕು ಸಾಗಣೆ ವಾಹನಗಳು ಯಾವುದೇ ಅಡೆತಡೆ ಇಲ್ಲದಂತೆ ಸಾಗಲು ವ್ಯವಸ್ಥೆ ಆಗುತ್ತಿರುವುದರಿಂದ, ಸರಕು ಸಾಗಣೆ ವೆಚ್ಚ ಗಣನೀಯವಾಗಿ ಇಳಿಕೆ ಆಗಲಿದೆ. ಜತೆಗೆ, ಸಾಗಣೆ ಸಮಯವೂ ತಗ್ಗಲಿದೆ. ಈ ಎಲ್ಲಾ ಬೆಳವಣಿಗೆಗಳಿಂದ ಒಟ್ಟಾರೆ, ಸರಕುಗಳ ಬೆಲೆ ಇಳಿಕೆ ಕಾಣಲಿದೆ.

**ಮುಕ್ತಾಯದ ಅವಲೋಕನ**

ಸ್ವತಂತ್ರ ಭಾರತದಲ್ಲಿ ಜಿಎಸ್‌ಟಿ ತೆರಿಗೆ ವ್ಯವಸ್ಥೆಯು ಅತಿದೊಡ್ಡ




ಸುಧಾರಣೆ ಎಂದೇ ಬಣ್ಣಿಸಲಾಗುತ್ತಿದೆ. ಇದು ಬಹುದೂರದ ಪರಿಣಾಮಗಳನ್ನು ತಂದುಕೊಡಲಿದೆ ಎಂದೇ ನಿರೀಕ್ಷಿಸಲಾಗಿದೆ. ಆದರೆ, ಗ್ರಾಹಕನ ಹಿತದೃಷ್ಟಿಯಿಂದ, ಜಿಎಸ್‌ಟಿ ಹೇಗೆ ಒಟ್ಟಾರೆಯಾಗಿ ಬೆಲೆಗಳ ಮಟ್ಟವನ್ನು ಬದಲಾಯಿಸುತ್ತದೆ ಎಂಬ ಕೆಲವು ಅನಿಶ್ಚಯಗಳು ಮನೆಮಾಡಿವೆ. ಈ ನಿಟ್ಟಿನಲ್ಲಿ ಬೆಲೆಗಳನ್ನು ತಗ್ಗಿಸುವ ಮತ್ತು ಏರಿಕೆ ಮಾಡುವ ಬಗ್ಗೆಯೂ ಕೆಲಸಗಳು ನಡೆಯುತ್ತಿವೆ.

ಬೃಹತ್ ಪ್ರಮಾಣದ ಸರಕುಗಳ ಪರಿಣಾಮಕಾರಿ ತೆರಿಗೆ ದರಗಳನ್ನು ಕೆಳ ಮಟ್ಟಕ್ಕೆ ಇಳಿಸುವ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸೌಲಭ್ಯ ಒದಗಿಸುವ ಹಾಗೂ ಪೂರೈಕೆ ಸರಪಳಿಯನ್ನು ಸುಧಾರಿಸುವ ಅಂಶಗಳಿಂದ ಸರಕು ಮತ್ತು ಸೇವೆಗಳ ಬೆಲೆಗಳನ್ನು ತಗ್ಗಿಸಬಹುದು. ಇದಕ್ಕೆ ವ್ಯತಿರಿಕ್ತ ಎಂಬಂತೆ, ಸೇವೆಗಳ ಪರಿಣಾಮಕಾರಿ ತೆರಿಗೆ ದರಗಳನ್ನು ಹೆಚ್ಚಿಸುವುದರಿಂದ ಅದರಲ್ಲೂ ವಿಶೇಷವಾಗಿ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ತೆರಿಗೆ ದರ ಮತ್ತು ಅನುಸರಣಾ ದರ ಏರಿಕೆ ಮಾಡಿದರೆ, ಬೆಲೆ ಏರಿಕೆ ಸಂಭವವಿರುತ್ತದೆ. ತಕ್ಷಣದ ಪರಿಸ್ಥಿತಿಯಲ್ಲಿ ಉತ್ಪನ್ನಗಳ ಬೆಲೆ ಮಟ್ಟವನ್ನು ಹೇಳುವುದು ಕಷ್ಟದ ಕೆಲಸ. ಜಿಎಸ್‌ಟಿ ಜಾರಿ ಮಾಡಿರುವ ಇತರೆ ರಾಷ್ಟ್ರಗಳಲ್ಲಿನ ಪರಿಸ್ಥಿತಿ, ಅಲ್ಲಿ ಉತ್ಪನ್ನಗಳ ಬೆಲೆ ಮಟ್ಟವನ್ನು ಹೋಲಿಕೆ ಮಾಡಲು ನಮ್ಮನ್ನು ಪ್ರಲೋಭಗೊಳಿಸುತ್ತಿರುವುದು ಸಹಜ. ಆದರೆ, ಭಾರತದ ಪರಿಸ್ಥಿತಿಯೇ ಭಿನ್ನ. ಇಲ್ಲಿ ವೈವಿಧ್ಯಮಯವಾದ ಮತ್ತು ಬಹುಪದರದ ಆರ್ಥಿಕ ಸಾಮಾಜಿಕ ವ್ಯವಸ್ಥೆ ಇದೆ ಎಂಬುದು ಗಮನಾರ್ಹ. ಜಿಎಸ್‌ಟಿ ಜಾರಿಯ ನಂತರದ ವ್ಯವಸ್ಥೆಯಲ್ಲಿನ ಸಂಕೀರ್ಣತೆಯನ್ನು ನಮೂದಿಸಲಾಗದು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು, ಜಿಎಸ್‌ಟಿ ಹೇಗೆ ಸಾಮಾನ್ಯ ಗ್ರಾಹಕನ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಕಾದು ನೋಡಬೇಕಷ್ಟೆ. ❑

# ಮನ್ ಕೀ ಬಾತ್



ಪ್ರಧಾನ ಮಂತ್ರಿ
ಶ್ರೀ ನರೇಂದ್ರ ಮೋದಿಯವರು
ದಿನಾಂಕ
30-07-2017ರಂದು
ಮಾಡಿದ
'ಮನ್ ಕೀ ಬಾತ್'
34 ನೇ ಭಾಷಣದ
ಕನ್ನಡ ಅವತರಣಿಕೆ.

ನನ್ನ ಪ್ರಿಯ ದೇಶಬಾಂಧವರೇ, ನಮಸ್ಕಾರ. ಮನುಷ್ಯನ ಮನಸ್ಸೇ ಹೀಗೆ, ಮಳೆಗಾಲ ಮನಸ್ಸಿಗೆ ತುಂಬಾ ಮುದ ನೀಡುವಂಥದ್ದು.ಪ್ರಾಣಿ, ಪಕ್ಷಿ, ಗಿಡಮರ, ನಿಸರ್ಗ- ಎಲ್ಲರೂ ಮಳೆಗಾಲ ಬಂತೆಂದರೆ ಉತ್ತೇಜಿತರಾಗುತ್ತಾರೆ. ಆದರೆ ಕೆಲವೊಮ್ಮೆ ಮಳೆಯೂ ವಿಕೃತ ರೂಪ ತಾಳುತ್ತದೆ. ಆಗ ನೀರಿಗೆ ಎಂಥ ವಿನಾಶಕಾರಿ ಶಕ್ತಿ ಇದೆ ಎಂಬುದು ನಮಗೆ ಅರ್ಥವಾಗುತ್ತದೆ.ಪ್ರಕೃತಿ ನಮಗೆ ಜೀವನವನ್ನು ನೀಡುತ್ತದೆ.ನಮ್ಮನ್ನು ಪೋಷಿಸುತ್ತದೆ. ಆದರೆ ಕೆಲವೊಮ್ಮೆ ಪ್ರವಾಹ, ಭೂಕಂಪದಂತಹ ಪ್ರಾಕೃತಿಕ ವಿಕೋಪಗಳು, ಅದರ ಭಯಂಕರ ಸ್ವರೂಪ ವಿನಾಶವನ್ನು ತಂದೊಡ್ಡುತ್ತವೆ. ಬದಲಾಗುತ್ತಿರುವ ಹವಾಮಾನ ಮತ್ತು ಪರಿಸರದಲ್ಲಿ ಕಂಡುಬರುತ್ತಿರುವ ಬದಲಾವಣೆ ಬಹಳ ಋಣಾತ್ಮಕ ಪರಿಣಾಮ ಬೀರುತ್ತಿದೆ. ಕಳೆದ ಕೆಲವು ದಿನಗಳಿಂದ ಭಾರತದ ಕೆಲವು ಭಾಗಗಳಲ್ಲಿ ವಿಶೇಷವಾಗಿ ಅಸ್ಸಾಂ, ಈಶಾನ್ಯ ಗುಜರಾತ್, ರಾಜಸ್ಥಾನ್, ಪಶ್ಚಿಮ ಬಂಗಾಳದ ಕೆಲ ಭಾಗಗಳು, ಅತೀ ವೃಷ್ಟಿಯಿಂದಾಗಿ ಪ್ರಾಕೃತಿಕ ವಿಕೋಪವನ್ನು ಎದುರಿಸುತ್ತಿವೆ. ಪ್ರವಾಹ ಪೀಡಿತ ಪ್ರದೇಶದ ಸಂಪೂರ್ಣ ಅವಲೋಕನ ಕೈಗೊಳ್ಳಲಾಗುತ್ತಿದೆ.ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಂತ್ರಿಮಂಡಲದ ನನ್ನ ಸ್ನೇಹಿತರೂ ತಲುಪುತ್ತಿದ್ದಾರೆ. ರಾಜ್ಯ ಸರ್ಕಾರಗಳೂ ಕೂಡ ತಮ್ಮದೇ ರೀತಿಯಲ್ಲಿ ಪ್ರವಾಹ ಪೀಡಿತರಿಗೆ ಸಹಾಯ ಮಾಡಲು ಸಾಕಷ್ಟು ಪ್ರಯತ್ನ ಮಾಡುತ್ತಿವೆ. ಸಾಮಾಜಿಕ ಸಂಘ ಸಂಸ್ಥೆಗಳು, ಸಾಂಸ್ಕೃತಿಕ ಸಂಘಗಳು, ಸೇವಾ ಮನೋಭಾವನೆಯಿಂದ ಕೆಲಸ ಮಾಡುವ ನಾಗರಿಕರು, ಇಂಥ ಪರಿಸ್ಥಿತಿಯಲ್ಲಿ ಜನರಿಗೆ ಸಹಾಯ ಮಾಡುವಂಥ ಕಠಿಣ ಪರಿಶ್ರಮದಲ್ಲಿ ತೊಡಗಿದ್ದಾರೆ. ಭಾರತ ಸರ್ಕಾರದ ಪರವಾಗಿ, ಸೇನೆಯಾಗಿರಲಿ, ವಾಯು ಸೇನೆಯಾಗಿರಲಿ, ರಾಷ್ಟ್ರೀಯ ವಿಕೋಪ ಪ್ರತಿಕ್ರಿಯೆ ನೆರವು ಪಡೆಯವರಾಗಲಿ, ಪ್ಯಾರಾಮಿಲಿಟರಿ ಪಡೆಗಳಾಗಲಿ, ಇಂಥ ಸಮಯದಲ್ಲಿ ಎಲ್ಲರೂ ಪೀಡಿತರ ಸೇವೆಗಾಗಿ ತನುಮನದಿಂದ ಕಾರ್ಯನಿರ್ವಹಿಸುತ್ತಾರೆ. ಪ್ರವಾಹದಿಂದಾಗಿ ಜನಜೀವನ ಬಹಳ ಅಸ್ತವ್ಯಸ್ತಗೊಳ್ಳುತ್ತದೆ. ಫಸಲು, ಜಾನುವಾರುಗಳು, ರಸ್ತೆ, ವಿದ್ಯುತ್ ಎಲ್ಲದರ ಮೇಲೆ ಪ್ರಭಾವ ಬೀರುತ್ತವೆ. ವಿಶೇಷವಾಗಿ ನಮ್ಮ ರೈತಬಾಂಧವರಿಗೆ, ಫಸಲಿಗೆ, ಹೊಲಗದ್ದೆಗಳಿಗೆ ಬಹಳ ನಷ್ಟ ಉಂಟಾಗುತ್ತದೆ. ಹಾಗಾಗಿ ರೈತರ ಪರಿಹಾರ ಧನ ತ್ವರಿತಗತಿಯಲ್ಲಿ ದೊರೆಯಲಿ ಎಂಬುದಕ್ಕಾಗಿ ಪ್ರಸ್ತುತ ವಿಮಾ ಕಂಪನಿಗಳು ಅದರಲ್ಲೂ ವಿಶೇಷವಾಗಿ ಬೆಳೆ ವಿಮಾ ಕಂಪನಿಗಳು ಸಕ್ರಿಯವಾಗಿ ಕೆಲಸ ಮಾಡುವಂತೆ ಯೋಜನೆ ರೂಪಿಸಿದ್ದೇವೆ ಮತ್ತು ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು 24x7 ಕಂಟ್ರೋಲ್ ರೂಂ ಹೆಲ್ಪ್ ಲೈನ್ ನಂಬರ್ 1078 ಸತತವಾಗಿ ಕಾರ್ಯನಿರ್ವಹಿಸುತ್ತಿದೆ.ಜನರು ತಮ್ಮ ಸಂಕಷ್ಟಗಳನ್ನು ಹಂಚಿಕೊಳ್ಳುತ್ತಾರೆ. ಮಳೆಗಾಲಕ್ಕೆ ಮೊದಲೇ ಸಾಕಷ್ಟು ಸ್ಥಳಗಳಲ್ಲಿ ಮಾಕ್ ಡ್ರಿಲ್ ಮಾಡಿ ಸಂಪೂರ್ಣ ಸರ್ಕಾರದ ಕಾರ್ಯ ಯೋಜನೆಗಳನ್ನು ಸಿದ್ಧಗೊಳಿಸಲಾಗಿದೆ. ರಾಷ್ಟ್ರೀಯ ವಿಕೋಪ ಪ್ರತಿಕ್ರಿಯೆ ನೆರವು ಪಡೆ ಈ ತಂಡಗಳನ್ನು ನಿಯೋಜಿಸಲಾಗಿದೆ.

ಅಲ್ಲಲ್ಲಿ ವಿಪತ್ತು ನಿವಾರಣಾ ಸ್ನೇಹಿ ಕೇಂದ್ರ ನಿರ್ಮಾಣ ಮತ್ತು ವಿಪತ್ತು ನಿವಾರಣಾ ಸ್ನೇಹಿ – ಬೇಕು ಬೇಡಗಳ ಬಗ್ಗೆ ತರಬೇತಿ ನೀಡುವುದು, ಸ್ವಯಂ ಸೇವಕರನ್ನು ನಿಯೋಜಿಸುವುದು, ಜನರ ಸಮೂಹವನ್ನು ಸಂಘಟಿಸಿ ಇಂಥ ಪರಿಸ್ಥಿತಿಗಳಲ್ಲಿ ಕಾರ್ಯ ನಿರ್ವಹಿಸುವುದು ಮಾಡಲಾಗುತ್ತಿದೆ. ಇಂದಿನ ದಿನಗಳಲ್ಲಿ ಹವಾಮಾನ ವರದಿ ಮುಂಚಿತವಾಗೇ ಲಭಿಸುತ್ತದೆ, ತಂತ್ರಜ್ಞಾನ ಸಾಕಷ್ಟು ಮುಂದುವರಿದಿದೆ, ಅಂತರಿಕ್ಷ

* ಕೃಪೆ; ಆಕಾಶವಾಣಿ, ಬೆಂಗಳೂರು




ವಿಜ್ಞಾನದ ಕೊಡುಗೆಯೂ ತುಂಬಾ ಇದೆ. ಇವೆಲ್ಲವುಗಳಿಂದಾಗಿ ಸರಿಯಾದ ಅಂದಾಜು ದೊರೆಯುತ್ತದೆ. ಕ್ರಮೇಣ ಹವಾಮಾನ ಮುನ್ಸೂಚನೆಯನ್ನು ಆಧರಿಸಿ ನಮ್ಮ ಕಾರ್ಯ ಕಲಾಪಗಳನ್ನು ರೂಪಿಸಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು. ಇದರಿಂದ ಹಾನಿಯಾಗುವುದನ್ನು ತಪ್ಪಿಸಬಹುದು.

ನಾನು ಮನದ ಮಾತಿಗೆ ಸಿದ್ಧತೆಯಲ್ಲಿ ತೊಡಗಿದಾಗೆಲ್ಲ, ದೇಶದ ಜನತೆ ನನಗಿಂತಲೂ ಹೆಚ್ಚಿನ ತಯಾರಿಯಲ್ಲಿ ತೊಡಗುವುದನ್ನು ನಾನು ಗಮನಿಸುತ್ತಿದ್ದೇನೆ. **ಈ ಬಾರಿಯಂತೂ ಜಿಎಸ್‌ಟಿ ಕುರಿತು ಸಾಕಷ್ಟು ಪತ್ರಗಳು ಬಂದಿವೆ, ದೂರವಾಣಿ ಕರೆ ಬಂದಿವೆ ಮತ್ತು ಜನರು ಈಗಲೂ ಜಿಎಸ್‌ಟಿ ಕುರಿತು ಸಂತಸ ವ್ಯಕ್ತಪಡಿಸುತ್ತಾರೆ, ಕುತೂಹಲ ತೋರುತ್ತಾರೆ.ಒಂದು ಕರೆಯನ್ನು ನಿಮಗೂ ಕೇಳಿಸಬಯಸುತ್ತೇನೆ: –**

**"ನಮಸ್ಕಾರ ಪ್ರಧಾನಮಂತ್ರಿಗಳೇ, ನಾನು ಗುಡಗಾಂವ್‌ನಿಂದ ನೀತು ಗರ್ಗ ಮಾತಾಡುತ್ತಿದ್ದೇನೆ. ನಾನು ನಿಮ್ಮ ಚಾರ್ಟೆಡ್ ಅಕೌಂಟೆಟ್ಸ್ ದಿನದ ಭಾಷಣ ಕೇಳಿದ್ದೇನೆ ಮತ್ತು ಪ್ರಭಾವಿತಳಾಗಿದ್ದೇನೆ. ಇದೇ ರೀತಿ ನಮ್ಮ ದೇಶದಲ್ಲಿ ಕಳೆದ ತಿಂಗಳು ಇದೇ ದಿನಾಂಕದಂದು ಸರಕು ಮತ್ತು ಸೇವಾ ತೆರಿಗೆ – ಜಿಎಸ್‌ಟಿ ಆರಂಭವಾಯಿತು. ಸರ್ಕಾರ ನಿರೀಕ್ಷಿಸಿದಂತೆ ಒಂದು ತಿಂಗಳ ನಂತರ ಅದರ ಪರಿಣಾಮವಾಗುತ್ತಿದೆಯೋ ಇಲ್ಲವೋ ಎಂದು ತಾವು ತಿಳಿಸಬಹುದೇ? ಈ ಕುರಿತು ನಿಮ್ಮ ವಿಚಾರವನ್ನು ತಿಳಿಯಬಯಸುತ್ತೇನೆ. ಧನ್ಯವಾದಗಳು" ಜಿಎಸ್‌ಟಿ ಆರಂಭವಾಗಿ ಸುಮಾರು ಒಂದು ತಿಂಗಳಾಯಿತು ಮತ್ತು ಅದರ ಲಾಭ ಗೋಚರಿಸಲಾರಂಭಿಸಿದೆ. ಒಬ್ಬ ಬಡವ ನನಗೆ ಪತ್ರ ಬರೆದು ಜಿಎಸ್‌ಟಿಯಿಂದಾಗಿ ಹೇಗೆ ಅವನ ಅವಶ್ಯಕ ವಸ್ತುಗಳ ಬೆಲೆಯಲ್ಲಿ ಇಳಿಕೆಯಾಗಿದೆ ಎಂದು ಹೇಳುತ್ತಾನೊ ಅದರಿಂದ ನನಗೆ ಬಹಳ ಸಂತೋಷವಾಗುತ್ತದೆ.**

**ಈಶಾನ್ಯದ ದೂರದ ಬೆಟ್ಟದ ತಪ್ಪಲಲ್ಲಿ ಅರಣ್ಯದಲ್ಲಿರುವವ ಪತ್ರ ಬರೆದು 'ಆರಂಭದಲ್ಲಿ ಇದೇನಿರಬಹುದು ಎಂದು ಭಯವಾಗುತ್ತಿತ್ತು ಆದರೆ ಈಗ ನಾನು ಕಲಿಯಲು, ತಿಳಿದುಕೊಳ್ಳಲು ಆರಂಭಿಸಿದ ಮೇಲೆ ನನಗನ್ನಿಸುತ್ತದೆ ಮೊದಲಿಗಿಂತ ಇದು ತುಂಬಾ ಸರಳವಾಗಿದೆ, ವ್ಯಾಪಾರ ಇನ್ನಷ್ಟು ಸರಳವಾಗಿದೆ,' ಎಂದು ಹೇಳುತ್ತಾನೆ.ಎಲ್ಲಕ್ಕಿಂತ ಹೆಚ್ಚಾಗಿ ವ್ಯಾಪಾರಿಗಳ ಮೇಲೆ ಗ್ರಾಹಕರ ನಂಬಿಕೆ ಹೆಚ್ಚಿದೆ. ಸಾರಿಗೆ ಮತ್ತು ಸಾಗಾಟ ಕ್ಷೇತ್ರದ ಮೇಲೆ ಜಿಎಸ್‌ಟಿ ಪರಿಣಾಮ ಏನು ಎಂಬುದನ್ನು ನಾನು ಗಮನಿಸುತ್ತಿದ್ದೇನೆ. ಈಗ ಹೇಗೆ ಟ್ರಕ್‌ಗಳ ವೇಗ ಹೆಚ್ಚಿದೆ, ಅಂತರವನ್ನು ನಿರ್ಧರಿಸುವಲ್ಲಿ ಹೇಗೆ ಸಮಯದ ಉಳಿತಾಯವಾಗುತ್ತಿದೆ. ಹೈವೇಸ್ ಕ್ಲಟರ್ ಫ್ರಿ ಆಗಿವೆ. ಟ್ರಕ್‌ಗಳ ವೇಗ ಹೆಚ್ಚಿದ ಕಾರಣ ಮಾಲಿನ್ಯವೂ ತಗ್ಗಿದೆ. ವಸ್ತುಗಳು ತ್ವರಿತಗತಿಯಲ್ಲಿ ತಲುಪುತ್ತಿವೆ. ಸಾಮಾನುಗಳೂ ಬಹುಬೇಗ ತಲುಪುತ್ತಿವೆ. ಈ ಅನುಕೂಲ ಇದ್ದೇ ಇದೆ, ಆದರೆ ಅದರ ಜೊತೆಗೆ ಆರ್ಥಿಕ ಸಬಲತೆಯೂ ಲಭಿಸುತ್ತದೆ.ಈ ಹಿಂದೆ ಬೇರೆ ಬೇರೆ ತೆರಿಗೆ ವಿನ್ಯಾಸ ಇದ್ದುದರಿಂದ ಸಾರಿಗೆ ಮತ್ತು ಸಾಗಾಟ ಕ್ಷೇತ್ರದ ಅತಿ ಹೆಚ್ಚು ಸಂಪನ್ಮೂಲ, ಪೇಪರ್ ವರ್ಕ್ ನಿರ್ವಹಣೆ ಮಾಡುವುದರಲ್ಲೇ ವ್ಯಯವಾಗುತ್ತಿತ್ತು ಮತ್ತು ಪ್ರತಿ ರಾಜ್ಯದಲ್ಲೂ ಅದು ತನ್ನದೇ ಗೋದಾಮುಗಳನ್ನು ನಿರ್ಮಿಸಬೇಕಾಗುತ್ತಿತ್ತು.**

**ಜಿಎಸ್‌ಟಿ – ಯಾವುದನ್ನು ನಾನು ಗೂಡ್ಸ್ ಆ್ಯಂಡ್ ಸಿಂಪಲ್ ಟ್ಯಾಕ್ಸ್ ಎಂದು ಕರೆಯುತ್ತೇನೆಯೊ ಅದು ನಿಜವಾಗಿಯೂ ನಮ್ಮ ಅರ್ಥವ್ಯವಸ್ಥೆಯಲ್ಲಿ ಒಂದು ಸಕಾರಾತ್ಮಕ ಪ್ರಭಾವವನ್ನು ಬಹಳ ಕಡಿಮೆ ಸಮಯದಲ್ಲೇ ಬೀರಿದೆ. ಯಾವ ವೇಗದಲ್ಲಿ ಸ್ಮೂತ್ ಟ್ರಾನ್ಸಿಷನ್ ಆಗಿದೆ, ಯಾವ ವೇಗದಲ್ಲಿ ಮೈಗ್ರೇಷನ್ ಆಗಿದೆ, ಯಾವ ವೇಗದಲ್ಲಿ ರಿಜಿಸ್ಟ್ರೇಷನ್ ಆಗಿದೆ ಅಂದರೆ ಇದು ಸಂಪೂರ್ಣ ರಾಷ್ಟ್ರದಲ್ಲಿ ಒಂದು ಹೊಸ ವಿಶ್ವಾಸ ಮೂಡಿಸಿದೆ. ಮುಂದೊಂದು ದಿನ ಅರ್ಥವ್ಯವಸ್ಥೆಯ ಪ್ರಾಜ್ಞರು, ಮ್ಯಾನೇಜ್‌ಮೆಂಟ್ ಪಂಡಿತರು, ಟೆಕ್ನಾಲಜಿಯ ಜ್ಞಾನಿಗಳು ಭಾರತದ ಜಿಎಸ್‌ಟಿ ಪ್ರಯೋಗವನ್ನು ಸಂಶೋಧನೆ ಮಾಡಿ ವಿಶ್ವದೆದುರು ಒಂದು ಮಾದರಿಯ ರೂಪದಲ್ಲಿ ಖಂಡಿತ ದಾಖಲಿಸಲಿದ್ದಾರೆ. ವಿಶ್ವದ ಹಲವಾರು ವಿಶ್ವವಿದ್ಯಾಲಯಗಳಿಗೆ ಇದೊಂದು ಕೇಸ್ ಸ್ಟಡಿ ಆಗುತ್ತದೆ.. ಏಕೆಂದರೆ ಇಷ್ಟು ದೊಡ್ಡ ಮಟ್ಟದಲ್ಲಿ ಇಂಥ ಭಾರೀ ಬದಲಾವಣೆ ಮತ್ತು ಇಷ್ಟೊಂದು ಕೋಟಿಗಟ್ಟಲೆ ಜನರ ಸಹಭಾಗಿತ್ವದೊಂದಿಗೆ ಇಂಥ ದೊಡ್ಡ ದೇಶದಲ್ಲಿ ಅದನ್ನು ಜಾರಿಗೆ ತರುವುದು ಮತ್ತು ಸಫಲತೆಯೊಂದಿಗೆ ಮುನ್ನಡೆಸುವುದು, ಇದು ಸ್ವಯಂ ತಾನೇ ಸಫಲತೆಯ ಒಂದು ಉತ್ತುಂಗ ಶಿಖರ. ವಿಶ್ವ ಖಂಡಿತ ಇದರ ಅಧ್ಯಯನ ಮಾಡುತ್ತದೆ.ಜಿಎಸ್‌ಟಿ ಜಾರಿಗೆ ತರಲಾಗಿದೆ. ಎಲ್ಲ ರಾಜ್ಯಗಳ ಪಾಲುದಾರಿಕೆಯೂ ಇದರಲ್ಲಿದೆ ಎಲ್ಲ ರಾಜ್ಯಗಳ ಜವಾಬ್ದಾರಿಯೂ ಇದೆ.ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಜಂಟಿಯಾಗಿ ಸಂಪೂರ್ಣ ಸಹಮತದೊಂದಿಗೆ ಎಲ್ಲ ನಿರ್ಣಯಗಳನ್ನೂ ಕೈಗೊಂಡಿವೆ. ಅದರ ಪರಿಣಾಮವಾಗಿಯೇ ಬಡವರ ಮೇಲೆ ಯಾವುದೇ ಬಗೆಯ ಒತ್ತಡವಾಗದಂತೆ ನೋಡಿಕೊಳ್ಳುವುದಕ್ಕೆ ಎಲ್ಲ ಸರ್ಕಾರಗಳೂ ಆದ್ಯತೆ ನೀಡಿವೆ. ಜಿಎಸ್‌ಟಿ ಆ್ಯಪ್ ಮೂಲಕ ಜಿಎಸ್‌ಟಿ ಗೆ ಮೊದಲು ಯಾವ ವಸ್ತುವಿನ ಬೆಲೆ ಎಷ್ಟಿತ್ತು ಮತ್ತು ಹೊಸ ಪರಿಸ್ಥಿತಿಯಲ್ಲಿ ಅದರ ಬೆಲೆ ಎಷ್ಟಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದು. ಇದೆಲ್ಲ ನಿಮ್ಮ ಮೊಬೈಲ್ ಫೋನ್‌ನಲ್ಲೇ ಲಭ್ಯ. ಒಂದು ದೇಶ ಒಂದು ತೆರಿಗೆ ಎಂಥ ದೊಡ್ಡ ಕನಸು ನನಸಾಗಿದೆ. ಜಿಎಸ್‌ಟಿ ವಿಷಯದಿಂದಾಗಿ ನಾನು ನೋಡಿದ್ದೇನೆ. ತಾಲೂಕಿನಿಂದ ಹಿಡಿದು ಭಾರತ ಸರ್ಕಾರದವರೆಗಿನ ಸರ್ಕಾರೀ ಅಧಿಕಾರಿಗಳು ಎಷ್ಟೊಂದು ಪರಿಶ್ರಮವಹಿಸಿದ್ದಾರೆ, ಎಷ್ಟೊಂದು ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸಿದ್ದಾರೆ ಎನ್ನುವುದನ್ನು ಗಮನಿಸಿದ್ದೇನೆ. ಒಂದು ರೀತಿಯಲ್ಲಿ ಸರ್ಕಾರ ಮತ್ತು ವ್ಯಾಪಾರಿಗಳು ಮತ್ತು ಗ್ರಾಹಕರ ಮಧ್ಯೆ ಸ್ನೇಹಮಯ ವಾತಾವರಣ ಏರ್ಪಟ್ಟಿದೆ. ಅದು ವಿಶ್ವಾಸ ವೃದ್ಧಿಸುವಲ್ಲಿ ಬಹಳ ದೊಡ್ಡ ಪಾತ್ರವಹಿಸಿದೆ.ಈ ಕೆಲಸದಲ್ಲಿ ತೊಡಗಿಸಿಕೊಂಡಂತಹ ಎಲ್ಲ ಖಾತೆಗಳನ್ನು, ಎಲ್ಲ ವಿಭಾಗಗಳನ್ನು, ಕೇಂದ್ರ ಮತ್ತು ರಾಜ್ಯದ ಸರ್ಕಾರಗಳ ಎಲ್ಲ ನೌಕರರನ್ನೂ ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ.**



**ಜಿಎಸ್‌ಟಿ ಭಾರತದ ಸಾಮೂಹಿಕ ಶಕ್ತಿಯ ಸಫಲತೆಯ ಒಂದು ಉತ್ತಮ ಉದಾಹರಣೆಯಾಗಿದೆ.ಇದೊಂದು ಐತಿಹಾಸಿಕ ಸಾಧನೆಯಾಗಿದೆ. ಮತ್ತು ಇದು ಕೇವಲ ತೆರಿಗೆ ಸುಧಾರಣೆ ಆಗಿರದೇ ಒಂದು ಹೊಸ ಪ್ರಾಮಾಣಿಕತೆಯ ಸಂಸ್ಕೃತಿಗೆ ಶಕ್ತಿಯನ್ನು ನೀಡುವಂತಹ ಅರ್ಥವ್ಯವಸ್ಥೆಯಾಗಿದೆ. ಒಂದು ರೀತಿಯಲ್ಲಿ ಸಾಮಾಜಿಕ ಸುಧಾರಣೆಯ ಅಭಿಯಾನವೂ ಆಗಿದೆ. ನಾನು ಇನ್ನೊಮ್ಮೆ ಇಂಥ ದೊಡ್ಡ ಪ್ರಯತ್ನವನ್ನು ಸಫಲತೆಯೊಂದಿಗೆ ಸಾಕಾರಗೊಳಿಸಿದ್ದಕ್ಕೆ ದೇಶದ ಕೋಟಿ ಕೋಟಿ ಜನರಿಗೆ ಕೋಟಿ ಕೋಟಿ ವಂದನೆಗಳನ್ನು ಸಲ್ಲಿಸುತ್ತೇನೆ.** ನನ್ನ ಪ್ರಿಯ ದೇಶವಾಸಿಗಳೇ, ಆಗಸ್ಟ್ ತಿಂಗಳು ಕ್ರಾಂತಿಯ ತಿಂಗಳಾಗಿದೆ. ಇದನ್ನು ಸಹಜವಾಗಿಯೇ ನಾವೆಲ್ಲ ಬಾಲ್ಯದಿಂದಲೂ ಕೇಳುತ್ತಾ ಬಂದಿದ್ದೇವೆ. ಅದಕ್ಕೆ ಕಾರಣವೇನೆಂದರೆ 1920ರ ಆಗಸ್ಟ್ 1 ರಂದು ಅಸಹಕಾರ ಆಂದೋಳನ ಆರಂಭವಾಗಿತ್ತು. 1942ರ ಆಗಸ್ಟ್ 9 ರಂದು ಭಾರತ ಬಿಟ್ಟು ತೊಲಗಿ ಆಂದೋಳನ ಆರಂಭವಾಯಿತು. ಅದನ್ನು "ಆಗಸ್ಟ್ ಕ್ರಾಂತಿಯ" ಹೆಸರಿನಲ್ಲಿ ಗುರುತಿಸಲಾಗುತ್ತದೆ. ಆಗಸ್ಟ್ 15 1947 ರಲ್ಲಿ ದೇಶಕ್ಕೆ ಸ್ವಾತಂತ್ರ ದೊರಕಿತು. ಒಂದು ರೀತಿ ಆಗಸ್ಟ್ ತಿಂಗಳು ಅನೇಕ ಘಟನೆಗಳ ಕಾರಣ ಸ್ವಾತಂತ್ರ್ಯದೊಂದಿಗೆ ವಿಶೇಷವಾಗಿ ಸೇರಿಕೊಂಡಿದೆ. ಈ ವರ್ಷ "ಭಾರತ ಬಿಟ್ಟು ತೊಲಗಿ" ಆಂದೋಳನದ 75 ನೇ ವರ್ಷವನ್ನು ಆಚರಿಸಲಿದ್ದೇವೆ. ಆದರೆ "ಭಾರತ ಬಿಟ್ಟು ತೊಲಗಿ" ಎಂಬ ಘೋಷವನ್ನು ಡಾ.ಯುಸುಫ್ ಮೆಹರ್ ಅಲಿಯವರು ನೀಡಿದ್ದರು ಎಂಬ ವಿಷಯ ಕೆಲವೇ ಜನರಿಗೆ ಮಾತ್ರ ಗೊತ್ತು. ನಮ್ಮ ಹೊಸ ಪೀಳಿಗೆ ಆಗಸ್ಟ್ 9 1942 ರಂದು ಏನಾಗಿತ್ತು ಎಂಬುದನ್ನು ತಿಳಿದುಕೊಳ್ಳಬೇಕು. 1857 ರಿಂದ 1942 ರವರೆಗೆ ಸ್ವಾತಂತ್ರ್ಯದ ಹುರುಪಿನೊಂದಿಗೆ ಹೇಗೆ ಜನರು ಒಗ್ಗೂಡುತ್ತಿದ್ದರು, ಸಂಕಷ್ಟಗಳನ್ನು ಎದುರಿಸುತ್ತಿದ್ದರು ಎಂಬ ಇತಿಹಾಸದ ಪುಟಗಳು ಭವ್ಯ ಭಾರತದ ನಿರ್ಮಾಣಕ್ಕೆ ನಮಗೆ ಪ್ರೇರಣೆಯಾಗಿವೆ. ನಮ್ಮ ಸ್ವಾತಂತ್ರ್ಯ ಹೋರಾಟಗಾರರು ನೀಡಿದ ತ್ಯಾಗ, ಬಲಿದಾನಕ್ಕಿಂತ ದೊಡ್ಡ ಪ್ರೇರಣೆ ಬೇರೆ ಯಾವುದಿದೆ. ಭಾರತ ಬಿಟ್ಟು ತೊಲಗಿ ಆಂದೋಳನ ಸ್ವಾತಂತ್ರ್ಯದ ಆಂದೋಳನದ ಮಹತ್ವಪೂರ್ಣ ಸಂಘರ್ಷವಾಗಿತ್ತು. ಇದೇ ಆಂದೋಳನ ಬ್ರಿಟಿಷ್ ಆಳ್ವಿಕೆಯಿಂದ ಮುಕ್ತಿ ಹೊಂದಲು ಸಂಪೂರ್ಣ ದೇಶ ಸಂಕಲ್ಪ ಕೈಗೊಳ್ಳುವಂತೆ ಮಾಡಿತು. ಬ್ರಿಟಿಷ್ ಆಡಳಿತದ ವಿರುದ್ಧ ಭಾರತೀಯ ಜನಸಮೂಹ ಹಳ್ಳಿಯಾಗಲಿ, ಪಟ್ಟಣವಾಗಲಿ, ಅಕ್ಷರಸ್ಥರಾಗಿರಲಿ, ಅನಕ್ಷರಸ್ಥರಾಗಿರಲಿ, ಬಡವ ಬಲ್ಲಿದರಾಗಿರಲಿ ಎಲ್ಲರೂ ಹಿಂದೂಸ್ತಾನದ ಮೂಲೆ ಮೂಲೆಯಿಂದ ಹೆಗಲಿಗೆ ಹೆಗಲು ಸೇರಿಸಿ ಒಗ್ಗೂಡಿ ಭಾರತ ಬಿಟ್ಟು ತೊಲಗಿ ಆಂದೋಲನದ ಭಾಗವಾಗಿದ್ದರು.




ಜನರ ಆಕ್ರೋಶ ಮುಗಿಲು ಮುಟ್ಟಿತ್ತು. ಮಹಾತ್ಮಾ ಗಾಂಧೀಜಿಯವರ ಆಹ್ವಾನದ ಮೇರೆಗೆ ಲಕ್ಷಾಂತರ ಭಾರತೀಯರು ಮಾಡು ಇಲ್ಲವೆ ಮಡಿ ಮಂತ್ರದೊಂದಿಗೆ ತಮ್ಮ ಜೀವನವನ್ನು ಸಂಘರ್ಷಕ್ಕೆ ಒಡ್ಡುತ್ತಿದ್ದರು. ದೇಶದ ಲಕ್ಷಾಂತರ ಯುವಕರು ತಮ್ಮ ವಿದ್ಯಾಭ್ಯಾಸ ತೊರೆದಿದ್ದರು. ಪುಸ್ತಕಗಳನ್ನು ತೊರೆದಿದ್ದರು. ಸ್ವಾತಂತ್ರ್ಯದ ಕಹಳೆ ಮೊಳಗಿತ್ತು, ಅವರು ಹೊರಟು ನಿಂತಿದ್ದರು. ಆಗಸ್ಟ 9 ಭಾರತ ಬಿಟ್ಟು ತೊಲಗಿ ಆಂದೋಲನಕ್ಕೆ ಮಹಾತ್ಮಾ ಗಾಂಧೀ ಆಹ್ವಾನವನ್ನೇನೋ ನೀಡಿದರು, ಆದರೆ ಬ್ರಿಟಿಷ್ ಸರ್ಕಾರ ದೊಡ್ಡ ನೇತಾರರನ್ನೊಳಗೊಂಡಂತೆ ಎಲ್ಲರನ್ನೂ ಜೈಲಿಗೆ ಅಟ್ಟಿದರು. ಅದೇ ಕಾಲಘಟ್ಟದಲ್ಲಿ ಸೆಕೆಂಡ್ ಜನರೇಷನ್ ಲೀಡರ್‌ಶಿಪ್‌ನಲ್ಲಿ ಡಾ.ಲೋಹಿಯಾ, ಜಯಪ್ರಕಾಶ್ ನಾರಾಯಣ್‌ರಂತಹ ಮಹಾಪುರುಷರು ಮಹತ್ವಪೂರ್ಣ ಪಾತ್ರವಹಿಸಿದ್ದರು. ಅಸಹಕಾರ ಆಂದೋಲನ ಮತ್ತು ಭಾರತ ಬಿಟ್ಟು ತೊಲಗಿ ಆಂದೋಳನ ಮಹಾತ್ಮಾ ಗಾಂಧೀಯವರ 2 ವಿಭಿನ್ನ ರೂಪಗಳನ್ನು ದರ್ಶಿಸುತ್ತವೆ. ಅಸಹಕಾರ ಆಂದೋಳನದ ರೂಪವೇ ಬೇರೆಯಾಗಿತ್ತು ಮತ್ತು 1942 ರಲ್ಲಿ ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತೆಂದರೆ ಮಹಾತ್ಮಾ ಗಾಂಧೀಜಿಯಂಥ ಮಹಾಪುರುಷರು "ಮಾಡು ಇಲ್ಲವೆ ಮಡಿ" ಎಂಬ ಮಂತ್ರವನ್ನಿತ್ತರು. ಈ ಸಂಪೂರ್ಣ ಸಫಲತೆ ಹಿಂದೆ ಜನಸಮರ್ಥನೆಯಿತ್ತು, ಜನರ ಸಾಮರ್ಥ್ಯವಿತ್ತು, ಜನರ ಸಂಕಲ್ಪವಿತ್ತು, ಜನರ ಸಂಘರ್ಷವಿತ್ತು. ಸಂಪೂರ್ಣ ದೇಶವೇ ಒಗ್ಗಟ್ಟಿನಿಂದ ಹೋರಾಡುತ್ತಿತ್ತು. ನಾನು ಕೆಲವೊಮ್ಮೆ ಯೋಚಿಸುತ್ತೇನೆ. ಒಂದೊಮ್ಮೆ ಇತಿಹಾಸದ ಪುಟಗಳನ್ನು ಜೋಡಿಸಿ ನೋಡಿದರೆ ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮ 1857 ರಲ್ಲಿ ಆಯಿತು. 1857 ರಲ್ಲಿ ಆರಂಭವಾದ ಸ್ವತಂತ್ರ ಸಂಗ್ರಾಮ 1942 ರವರೆಗೆ ಪ್ರತಿ ಕ್ಷಣವೂ ದೇಶದ ಒಂದಲ್ಲಾ ಒಂದು ಮೂಲೆಯಲ್ಲಿ ಜಾಗೃತವಾಗಿತ್ತು. ಈ ಸುದೀರ್ಘ ಕಾಲಘಟ್ಟ ದೇಶದ ಜನರ ಮನದಲ್ಲಿ ಸ್ವತಂತ್ರದ ಕಿಚ್ಚನ್ನು ಹುಟ್ಟುಹಾಕಿತು. ಪ್ರತಿಯೊಬ್ಬರೂ ಏನಾದರೊಂದು ಮಾಡಲು ಬದ್ಧರಾಗಿ ನಿಂತರು.ಪೀಳಿಗೆ ಬದಲಾದರೂ ಸಂಕಲ್ಪ ಮಾತ್ರ ಅಚಲವಾಗಿತ್ತು.

ಜನರು ಬರುತ್ತಲೇ ಇದ್ದರು, ಒಗ್ಗೂಡುತ್ತಲೇ ಇದ್ದರು, ಹೋಗುತ್ತಿದ್ದರು, ಮತ್ತೆ ಹೊಸಬರು ಬರುತ್ತಿದ್ದರು, ಒಗ್ಗೂಡುತ್ತಿದ್ದರು. ಬ್ರಿಟಿಷ್ ಸರ್ಕಾರವನ್ನು ಕಿತ್ತೊಗೆಯಲು ಪ್ರತಿ ಕ್ಷಣವೂ ಪ್ರಯತ್ನಗಳು ನಡೆದೇ ಇದ್ದವು. 1857 ರಿಂದ 1942 ರವರೆಗೆ ನಡೆದ ಪ್ರಯತ್ನ, ಆಂದೋಲನ ಎಂಥ ಸ್ಥಿತಿ ನಿರ್ಮಾಣ ಮಾಡಿತೆಂದರೆ 1942 ರಲ್ಲಿ ಅದು ಪರಾಕಾಷ್ಟೆಯ ಹಂತ ತಲುಪಿತು ಮತ್ತು ಭಾರತ ಬಿಟ್ಟು ತೊಲಗಿ ಎಂಬ ಕಹಳೆ ಎಷ್ಟು ತೀವ್ರತರವಾಗಿ ಮೊಳಗಿತೆಂದರೆ ಮುಂದಿನ 5 ವರ್ಷಗಳಲ್ಲಿ ಅಂದರೆ 1947 ರಲ್ಲಿ ಬ್ರಿಟಿಷರು ಭಾರತ ಬಿಟ್ಟು ಹೋಗಬೇಕಾಯಿತು.1857 ರಿಂದ 1942 ರವರೆಗೆ ಸ್ವಾತಂತ್ರ್ಯದ ಬಿಸಿ ಪ್ರತಿಯೊಬ್ಬರನ್ನೂ ತಟ್ಟಿತು. 1942 ರಿಂದ 1947 ರವರೆಗಿನ 5 ವರ್ಷಗಳಲ್ಲಿ ಜನರ ಮನಸ್ಸು ಹೇಗೆ ಸಿದ್ಧಗೊಂಡಿತ್ತು ಎಂದರೆ ಸಂಕಲ್ಪ ಸಿದ್ಧಿಯ 5 ನಿರ್ಣಾಯಕ ವರ್ಷಗಳಂತೆ ಸಫಲತೆಯೊಂದಿಗೆ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಕಾರಣವಾಯಿತು.ಈ 5 ವರ್ಷಗಳು ನಿರ್ಣಾಯಕ ವರ್ಷಗಳಾಗಿದ್ದವು.

ಈಗ ನಿಮ್ಮನ್ನು ಈ ಗಣಿತದೊಂದಿಗೆ ಒಗ್ಗೂಡಿಸಬಯಸುತ್ತೇನೆ. 1947 ರಲ್ಲಿ ನಾವು ಸ್ವತಂತ್ರರಾದೆವು. ಇಂದು 2017. ಸುಮಾರು 70 ವರ್ಷಗಳಾಗಿವೆ. ಸರ್ಕಾರಗಳು ಬಂದವು, ಹೋದವು. ವ್ಯವಸ್ಥೆಗಳು ನಿರ್ಮಾಣಗೊಂಡವು, ಬದಲಾದವು, ಪೋಷಿತಗೊಂಡವು, ವೃದ್ಧಿಗೊಂಡವು. ದೇಶವನ್ನು ಸಮಸ್ಯೆಗಳಿಂದ ಮುಕ್ತಗೊಳಿಸಲು ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಪ್ರಯತ್ನಿಸಿದರು.



ದೇಶದಲ್ಲಿ ಉದ್ಯೋಗಾಭಿವೃದ್ಧಿಗೆ, ಬಡತನ ನಿರ್ಮೂಲನೆಗೆ, ವಿಕಾಸಕ್ಕಾಗಿ ಪ್ರಯತ್ನಗಳು ನಡೆದವು.ತಮ್ಮ ತಮ್ಮ ರೀತಿಯಲ್ಲಿ ಪ್ರಯತ್ನಗಳೂ ನಡೆದವು.ಸಫಲತೆಯೂ ದೊರೆಯಿತು. ಅಪೇಕ್ಷೆಯೂ ಹುಟ್ಟಿಕೊಂಡವು. 1942 ರಿಂದ 1947 ರವರೆಗೆ ಸಂಕಲ್ಪದಿಂದ ಸಿದ್ಧಿವರೆಗೆ ನಿರ್ಣಾಯಕವಾದ 5 ವರ್ಷಗಳಾಗಿದ್ದಂತೆ, 2017 ರಿಂದ 2022 ರವರೆಗೆ ಮತ್ತೊಮ್ಮೆ ಸಂಕಲ್ಪದಿಂದ ಸಿದ್ಧಿವರೆಗಿನ 5 ವರ್ಷಗಳ ಕಾಲಘಟ್ಟ ನಮ್ಮ ಮುಂದಿದೆ.ಈ 2017 ರ ಆಗಸ್ಟ್ 15 ನ್ನು 'ಸಂಕಲ್ಪ ಪರ್ವವಾಗಿ' ಆಚರಿಸೋಣ ಮತ್ತು 2022 ಕ್ಕೆ ಸ್ವಾತಂತ್ರ ಬಂದು 75 ವರ್ಷಗಳು ಪೂರ್ಣಗೊಳ್ಳುತ್ತವೆ, ಆಗ ಈ ಸಂಕಲ್ಪವನ್ನು ಸಾಧಿಸಿಯೇ ತೀರುತ್ತೇವೆ. ಆಗಸ್ಟ್ 9 ರ ಕ್ರಾಂತಿ ದಿವಸವನ್ನು ನೆನೆದು ದೇಶದ 125 ಕೋಟಿ ಜನತೆ ಆಗಸ್ಟ್ 15 ರಂದು ಸಂಕಲ್ಪ ಮಾಡಲಿ – ವ್ಯಕ್ತಿಗತವಾಗಿ, ನಾಗರಿಕನಾಗಿ – ನಾನು ದೇಶಕ್ಕಾಗಿ ಇಷ್ಟು ಕೆಲಸ ಮಾಡಿಯೇ ತೀರುವೆ, ಕುಟುಂಬದ ರೂಪದಲ್ಲಿ ಇದನ್ನು ಮಾಡುವೆ, ಸಮಾಜದ ರೂಪದಲ್ಲಿ ಮಾಡುವೆ, ಗ್ರಾಮ ಮತ್ತು ನಗರದ ರೂಪದಲ್ಲಿ ಮಾಡುವೆ, ಸರ್ಕಾರದ ಭಾಗವಾಗಿ ಇದನ್ನು ಮಾಡುವೆ, ಸರ್ಕಾರದ ಪರವಾಗಿ ಇದನ್ನು ಮಾಡುವೆ ಎಂದು ಹೀಗೆ ಕೋಟ್ಯಾಂತರ ಸಂಕಲ್ಪಗಳಾಗಲಿ.

ಕೋಟ್ಯಾಂತರ ಸಂಕಲ್ಪಗಳನ್ನು ಪರಿಪೂರ್ಣಗೊಳಿಸುವ ಪ್ರಯತ್ನಗಳಾಗಲಿ. ಅಂದರೆ 1942 ರಿಂದ 1947 ರವರೆಗಿನ ಕಾಲಘಟ್ಟ ದೇಶದ ಸ್ವಾತಂತ್ರ್ಯಕ್ಕೆ ಹೇಗೆ ನಿರ್ಣಾಯಕ ಪಾತ್ರವಹಿಸಿತ್ತೊ ಹಾಗೆ 2017 ರಿಂದ 2022 ರವರೆಗಿನ 5 ವರ್ಷಗಳು ಭಾರತದ ಭವಿಷ್ಯಕ್ಕೆ ನಿರ್ಣಾಯಕವಾಗಲಿವೆ ಮತ್ತು ಮಾಡಲೇಬೇಕಾಗಿದೆ.5 ವರ್ಷಗಳ ನಂತರ ದೇಶದ 75 ನೇ ಸ್ವಾತಂತ್ರ್ಯೋತ್ಸವ ಆಚರಿಸೋಣ. ಅದಕ್ಕಾಗಿ ನಾವೆಲ್ಲಾ ಇಂದು ದೃಢ ಸಂಕಲ್ಪ ಕೈಗೊಳ್ಳಬೇಕಾಗಿದೆ.2017 ನ್ನು ನಮ್ಮ ಸಂಕಲ್ಪದ ವರ್ಷವನ್ನಾಗಿಸಬೇಕಿದೆ. ಇದೇ ಆಗಸ್ಟ್ ತಿಂಗಳಲ್ಲಿ ನಾವು ಸಂಕಲ್ಪಬದ್ಧರಾಗಬೇಕಿದೆ ಮತ್ತು ಮಾಲಿನ್ಯ ದೇಶದಿಂದ ತೊಲಗು, ಬಡತನ ದೇಶ ಬಿಟ್ಟು ತೊಲಗು, ಭ್ರಷ್ಟಾಚಾರ ದೇಶ ಬಿಟ್ಟು ತೊಲಗು, ಭಯೋತ್ಪಾದನೆ ದೇಶ ಬಿಟ್ಟು ತೊಲಗು, ಜಾತೀಯತೆ ದೇಶ ಬಿಟ್ಟು ತೊಲಗು, ಸಾಂಪ್ರದಾಯಿಕತೆ ದೇಶ ಬಿಟ್ಟು ತೊಲಗು, ಎಂಬ ಸಂಕಲ್ಪ ಕೈಗೊಳ್ಳಬೇಕಿದೆ. ಇಂದು ಮಾಡುತ್ತೇವೆ ಇಲ್ಲವೆ ಮಡಿಯುತ್ತೇವೆ ಎಂಬುದರ ಅವಶ್ಯಕತೆಯಿಲ್ಲ ಬದಲಾಗಿ ನವ ಭಾರತದ ಸಂಕಲ್ಪದೊಂದಿಗೆ ಒಗ್ಗೂಡುವ, ಶ್ರಮಿಸುವ, ತನು ಮನದಿಂದ ಸಾಧಿಸುವ ಅವಶ್ಯಕತೆಯಿದೆ. ಸಂಕಲ್ಪದೊಂದಿಗೆ ಜೀವಿಸಬೇಕಿದೆ, ಶ್ರಮಿಸಬೇಕಿದೆ. ಬನ್ನಿ ಆಗಸ್ಟ್ 9 ರಿಂದ ಸಂಕಲ್ಪದಿಂದ ಸಿದ್ಧಿಯೆಡೆಗೆ ಸಾಗುವ ಮಹಾಅಭಿಯಾನವನ್ನು ಆರಂಭಿಸೋಣ. ಪ್ರತಿಯೊಬ್ಬ ಭಾರತೀಯ, ಸಾಮಾಜಿಕ ಸಂಸ್ಥೆಗಳು, ಸ್ಥಳೀಯ ಘಟಕಗಳ ಅಂಗ ಸಂಸ್ಥೆಗಳು, ಶಾಲೆ ಕಾಲೇಜುಗಳು, ವಿವಿಧ ಸಂಘಟನೆಗಳು ಎಲ್ಲರೂ ನವ ಭಾರತಕ್ಕಾಗಿ ಒಂದಲ್ಲ ಒಂದು ಸಂಕಲ್ಪ ಕೈಗೊಳ್ಳಬೇಕು. ಎಂಥ ಸಂಕಲ್ಪಗೈಯ್ಯಬೇಕೆಂದರೆ ಮುಂದಿನ 5 ವರ್ಷಗಳಲ್ಲಿ ಅದನ್ನು ನಾವು ಸಾಧಿಸಿ ತೋರಿಸಬೇಕು. ಯುವ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳು ಮುಂತಾದವು ಸಾಮೂಹಿಕ ಚರ್ಚೆಗೆ ವೇದಿಕೆ ಸಿದ್ಧಗೊಳಿಸಬಹುದು. ಹೊಸ ಹೊಸ ಉಪಾಯಗಳನ್ನು ಹುಟ್ಟು ಹಾಕಬಹುದು.

ಒಂದು ರಾಷ್ಟ್ರದಂತೆ ನಾವು ಏನು ಸಾಧಿಸಬೇಕಿದೆ. ಒಬ್ಬ ವ್ಯಕ್ತಿಯಾಗಿ ಅದರಲ್ಲಿ ನನ್ನ ಕೊಡುಗೆ ಏನು? ಬನ್ನಿ ಈ ಕುರಿತ ಸಂಕಲ್ಪ ಪರ್ವದೊಂದಿಗೆ ಕೈ ಜೋಡಿಸೋಣ. ನಾನು ಇಂದು ವಿಶೇಷವಾಗಿ ಆನ್‌ಲೈನ್ ವರ್ಲ್ಡ್ ಬಗ್ಗೆ ಹೇಳಲು ಇಷ್ಟಪಡುತ್ತೇನೆ, ಏಕೆಂದರೆ, ನಾವೆಲ್ಲೇ ಇದ್ದರೂ ಅಥವಾ ಇಲ್ಲದಿದ್ದರೂ, ಆನ್‌ಲೈನ್ ಖಂಡಿತಾ ಇರುತ್ತೆ. ಈ ಆನ್‌ಲೈನ್ ಪ್ರಪಂಚದಲ್ಲಿ, ಅದರಲ್ಲೂ ವಿಶೇಷವಾಗಿ ನನ್ನ ಯುವ ಸ್ನೇಹಿತರಿಗೆ, ತಮ್ಮ ಇನ್ನೊವೇಟಿವ್ ವಿಧಾನಗಳಿಂದ ನವ ಭಾರತವನ್ನು ನಿರ್ಮಿಸಲು ಮುಂದೆ ಬರಲು ನಾನು ಆಹ್ವಾನಿಸುತ್ತೇನೆ. ಟೆಕ್ನಾಲಜಿಯನ್ನು ಉಪಯೋಗಿಸಿ ವಿಡಿಯೊ, ಪೋಸ್ಟ್, ಬ್ಲಾಗ್ ಲೇಖನ ಮತ್ತು ಹೊಸ–ಹೊಸ ಕಲ್ಪನೆಗಳನ್ನು ಹೊತ್ತು ತರಲಿ. ಈ ಅಭಿಯಾನವನ್ನು ಒಂದು ಜನಾಂದೋಳನವನ್ನಾಗಿ ಪರಿವರ್ತಿಸೋಣ. ನರೇಂದ್ರಮೋದಿ ಆ್ಯಪ್‌ನಲ್ಲೂ ನನ್ನ ಯುವ ಸ್ನೇಹಿತರಿಗಾಗಿ ಕ್ವಿಟ್ ಇಂಡಿಯಾ ಕ್ವಿಜ್ ಲಾಂಚ್ ಮಾಡಲಾಗುವುದು. ಈ ಕ್ವಿಜ್ ಯುವಕರಿಗೆ ನಮ್ಮ ದೇಶದ ಗೌರವಪೂರ್ಣ ಇತಿಹಾಸದೊಂದಿಗೆ ಬೆಸೆಯುವ ಮತ್ತು ಸ್ವಾತಂತ್ರ್ಯ ಸಂಗ್ರಾಮದ ನಾಯಕರನ್ನು ಪರಿಚಯಿಸುವ ಒಂದು ಪ್ರಯತ್ನವಾಗಿದೆ. ನೀವು ಖಂಡಿತಾ ಇದರ ವ್ಯಾಪಕ ಪ್ರಚಾರ ಮತ್ತು ಪ್ರಸಾರ ಮಾಡುತ್ತೀರಿ ಎಂದು ನಾನು ನಂಬಿದ್ದೇನೆ.

ನನ್ನ ಪ್ರಿಯ ದೇಶ ಬಾಂಧವರೇ, ಆಗಸ್ಟ್ 15 ರಂದು, ನನಗೆ ದೇಶದ ಪ್ರಧಾನ ಸೇವಕನ ರೂಪದಲ್ಲಿ ಕೆಂಪು ಕೋಟೆಯಿಂದ ರಾಷ್ಟ್ರದ ಜನತೆಯನ್ನು ಉದ್ದೇಶಿಸಿ ಮಾತನಾಡಲು ಅವಕಾಶ ದೊರೆಯುತ್ತದೆ.ನಾನೊಬ್ಬ ನಿಮಿತ್ತ ಮಾತ್ರ.ಅಲ್ಲಿ ಒಬ್ಬ ವ್ಯಕ್ತಿಯಾಗಿ ಮಾತನಾಡುವುದಿಲ್ಲ. ಕೆಂಪು ಕೋಟೆಯಿಂದ 125 ಕೋಟಿ ಜನರ ಕೂಗು ಪ್ರತಿಧ್ವನಿಸುತ್ತದೆ. ಜನರ ಕನಸುಗಳನ್ನು ಶಬ್ದದ ರೂಪದಲ್ಲಿ ಹೊರಹಾಕುವ ಒಂದು ಪ್ರಯತ್ನವಾಗುತ್ತದೆ ಮತ್ತು ಕಳೆದ 3 ವರ್ಷಗಳಿಂದ ಸತತವಾಗಿ ಆಗಸ್ಟ್ 15ರ ಪ್ರಯುಕ್ತ ನಾನು ಏನು ಮಾತನಾಡಬೇಕು? ಯಾವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು?ಎಂಬುದರ ಬಗ್ಗೆ ದೇಶದ ಮೂಲೆ ಮೂಲೆಗಳಿಂದಲೂ ನನಗೆ ಸಲಹೆಗಳು ಲಭಿಸುತ್ತಿವೆ ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ಮೈಗವ್ ನಲ್ಲಿ ಅಥವಾ ನರೇಂದ್ರಮೋದಿ ಆ್ಯಪ್‌ನಲ್ಲಿ ನೀವು ನಿಮ್ಮ ಸಲಹೆಗಳನ್ನು ನನಗೆ ಖಂಡಿತಾ ಕಳುಹಿಸಲು ಈ ಬಾರಿಯೂ ನಾನು ನಿಮ್ಮನ್ನು ಆಹ್ವಾನಿಸುತ್ತೇನೆ. ನಾನು ಸ್ವತಃ ಅದನ್ನು ಓದುತ್ತೇನೆ ಮತ್ತು ಆಗಸ್ಟ್ 15 ರಂದು ನನ್ನ ಬಳಿ ಇರುವಂಥ ಸಮಯದಲ್ಲಿ, ನಾನು ಅದನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತೇನೆ.

ನನ್ನ ಕಳೆದ 3 ವರ್ಷದ ಆಗಸ್ಟ್ 15ರ ಭಾಷಣಗಳು ಸ್ವಲ್ಪ ದೀರ್ಘವಾಗಿರುವುದರ ಆಕ್ಷೇಪಣೆ ಕೇಳಿ ಬಂದಿದೆ. ನಾನು ಈ ಬಾರಿ ಅದನ್ನು ಚಿಕ್ಕದಾಗಿಸಬೇಕೆಂದು ನನ್ನ ಮನಸ್ಸಿನಲ್ಲಿ ಅಂದುಕೊಂಡಿದ್ದೇನೆ. ಹೆಚ್ಚೆಂದರೆ 40–45–50 ನಿಮಿಷಗಳಲ್ಲಿ ಪೂರ್ಣಗೊಳಿಸಬೇಕೆಂದು. ನನಗೇ ನಾನು ನಿಯಮಗಳನ್ನು ಹಾಕಿಕೊಳ್ಳುವ ಪ್ರಯತ್ನ ಮಾಡಿದ್ದೇನೆ; ನಾನು ಮಾಡಲಾಗುತ್ತದೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆದರೆ, ಈ ಬಾರಿ ನಾನು ನನ್ನ ಭಾಷಣವನ್ನು ಹೇಗೆ ಚಿಕ್ಕದಾಗಿಸಬೇಕು ಎಂಬ

ಪ್ರಯತ್ನದ ಉದ್ದೇಶ ಹೊಂದಿದ್ದೇನೆ. ಯಶಸ್ಸು ಸಿಗುತ್ತದೆಯೋ ಇಲ್ಲವೋ ಎಂಬುದನ್ನು ನೋಡೋಣ.ನನ್ನ ದೇಶಬಾಂಧವರೇ, ಇಂದು ಮತ್ತೊಂದು ಮಾತನ್ನೂ ಹೇಳಲು ಇಚ್ಛಿಸುತ್ತೇನೆ. ಭಾರತದ ಆರ್ಥಿಕತೆಯಲ್ಲಿ ಒಂದು ಸಾಮಾಜಿಕ ಅರ್ಥಶಾಸ್ತ್ರವೂ ಇದೆ.ನಾವು ಅದನ್ನು ಎಂದಿಗೂ ಗೌಣ ಎಂದು ಅಂದಾಜಿಸಬಾರದು. ನಮ್ಮ ಹಬ್ಬಗಳು, ನಮ್ಮ ಉತ್ಸವಗಳು, ಇವು ಕೇವಲ ಆನಂದ ಮತ್ತು ಮೋಜಿನ ಸಂದರ್ಭಗಳಾಗಿವೆ ಎಂದಲ್ಲ. ನಮ್ಮ ಹಬ್ಬಗಳು, ನಮ್ಮ ಉತ್ಸವಗಳು ಸಾಮಾಜಿಕ ಸುಧಾರಣೆಯ ಒಂದು ಅಭಿಯಾನವೂ ಆಗಿವೆ. ಆದರೆ ಅದರ ಜೊತೆ ಜೊತೆಗೆ ನಮ್ಮ ಪ್ರತಿಯೊಂದು ಉತ್ಸವ, ಬಡವರ ಆರ್ಥಿಕ ಜೀವನದ ಜೊತೆ ನೇರ ಸಂಬಂಧ ಹೊಂದಿದೆ. ಕೆಲವೇ ದಿನಗಳ ನಂತರ ರಕ್ಷಾಬಂಧನ, ಜನ್ಮಾಷ್ಟಮಿ, ಅದರ ನಂತರ ಗಣೇಶ ಹಬ್ಬ ಆಮೇಲೆ ಅನಂತ ಚತುರ್ದಶಿ, ದುರ್ಗಾ ಪೂಜೆ, ದೀಪಾವಳಿ – ಒಂದರ ನಂತರ ಒಂದು ಬರುತ್ತವೆ. ಹಾಗೂ ಈ ಸಮಯವೇ ಒಬ್ಬ ಬಡವನಿಗೆ ಆದಾಯವನ್ನು ಗಳಿಸಲು ಅವಕಾಶ ನೀಡುತ್ತದೆ. ಈ ಹಬ್ಬಗಳಲ್ಲಿ ಒಂದು ಸಹಜ ಮತ್ತು ಸ್ವಾಭಾವಿಕವಾದ ಆನಂದವೂ ಬೆರೆತುಹೋಗುತ್ತದೆ. ಹಬ್ಬಗಳು ಸಂಬಂಧಗಳಲ್ಲಿ ಮಾಧುರ್ಯವನ್ನು, ಕುಟುಂಬದಲ್ಲಿ ಸ್ನೇಹವನ್ನು, ಸಮಾಜದಲ್ಲಿ ಭ್ರಾತೃತ್ವವನ್ನು ತರುತ್ತವೆ. ಒಬ್ಬ ವ್ಯಕ್ತಿ ಮತ್ತು ಸಮಾಜವನ್ನು ಸೇರಿಸುತ್ತದೆ. ಒಬ್ಬ ವ್ಯಕ್ತಿಯಿಂದ ಸಮಾಜದವರೆಗೆ ಒಂದು ಸಹಜ ಯಾತ್ರೆಯಂತೆ ನಡೆಯುತ್ತದೆ.

'ನಾನು ಇಂದ ನಾವು' ಎನ್ನುವುದರೆಡೆಗೆ ಹೋಗಲು ಒಂದು ಅವಕಾಶ ಕಲ್ಪಿಸುತ್ತದೆ. ಆರ್ಥಿಕತೆಗೆ ಸಂಬಂಧಪಟ್ಟಂತೆ, ರಾಖಿ ಹಬ್ಬದ ಹಲವು ತಿಂಗಳುಗಳ ಮೊದಲೇ ನೂರಾರು ಚಿಕ್ಕ–ಚಿಕ್ಕ ಕುಟುಂಬಗಳಲ್ಲಿ ರಾಖಿಯನ್ನು ತಯಾರಿಸುವ ಗುಡಿಕೈಗಾರಿಕಾ ಪ್ರಕ್ರಿಯೆ ಆರಂಭವಾಗುತ್ತದೆ. ಖಾದಿಯಿಂದ ರೇಷ್ಮೆಯ ನೂಲಿನವರೆಗೆ, ಎಷ್ಟೊಂದು ಬಗೆಯ ರಾಖಿಗಳು ಮತ್ತು ಈ ನಡುವೆ ಜನರು ಹೋಮ್‌ಮೇಡ್ ರಾಖಿಗಳನ್ನು ಹೆಚ್ಚು ಇಷ್ಟಪಡುತ್ತಾರೆ. ರಾಖಿ ತಯಾರಿಸುವವರು, ರಾಖಿ ಮಾರುವವರು, ಮಿಠಾಯಿ ಅಂಗಡಿಯವರು – ನೂರಾರು – ಸಾವಿರಾರು ಜನರ ವ್ಯಾಪಾರ ಒಂದು ಉತ್ಸವದ ಜೊತೆ ಸೇರುತ್ತದೆ. ನಮ್ಮ ಬಡ ಸೋದರ–ಸೋದರಿಯರ ಸಂಸಾರ ಇದರಿಂದಲೇ ನಡೆಯುತ್ತದೆ ಅಲ್ಲವೇ?ನಾವು ದೀಪಾವಳಿಗೆ ದೀಪ ಬೆಳಗುತ್ತೇವೆ, ಅದು ಕೇವಲ ಒಂದು ಬೆಳಕಿನ ಹಬ್ಬ ಎಂದಲ್ಲ, ಅದು ಒಂದು ಉತ್ಸವ, ಮನೆಗೆ ಶೋಭೆ ನೀಡುತ್ತದೆ ಎಂದಲ್ಲ. ಅದರ ನೇರ ಸಂಬಂಧ ಮಣ್ಣಿನಿಂದ ಪುಟ್ಟ–ಪುಟ್ಟ ಹಣತೆಗಳನ್ನು ತಯಾರಿಸುವ ಆ ಬಡ ಕುಟುಂಬಗಳೊಂದಿಗೆ ಹೊಂದಿದೆ.ಆದರೆ, ನಾನು ಇಂದು ಹಬ್ಬಗಳು ಮತ್ತು ಅದರೊಂದಿಗೆ ಸೇರಿರುವ ಬಡ ಜನರ ಆರ್ಥಿಕತೆಯ ಬಗ್ಗೆ ಮಾತಾಡುವಾಗ ಅದರ ಜೊತೆಗೆ ನಾನು ಪರಿಸರದ ಬಗ್ಗೆಯೂ ಮಾತನಾಡಲು ಇಷ್ಟ ಪಡುತ್ತೇನೆ.

ನನಗಿಂತಾ ದೇಶವಾಸಿಗಳು ಹೆಚ್ಚು ಜಾಗರೂಕರಾಗಿದ್ದಾರೆ ಮತ್ತು ಸಕ್ರಿಯವಾಗಿದ್ದಾರೆಂಬುದನ್ನು ನಾನು ನೋಡಿದ್ದೇನೆ ಮತ್ತು ಕೆಲವೊಮ್ಮೆ ಯೋಚಿಸಿದ್ದೇನೆ. ಕಳೆದ ಒಂದು ತಿಂಗಳಿನಿಂದ ಜಾಗೃತ ನಾಗರಿಕರು ಪರಿಸರದ ಕುರಿತು ನನಗೆ ಪತ್ರಗಳನ್ನು ಬರೆದಿದ್ದಾರೆ.ನೀವು ಗಣೇಶ ಚತುರ್ಥಿಗೆ, ಪರಿಸರ ಸ್ನೇಹಿ ಗಣೇಶನ ಕುರಿತು ಜನರಿಗೆ ಮೊದಲೇ ತಿಳಿಸಿ, ಅದರಿಂದ ಜನರು ಮಣ್ಣಿನ ಗಣೇಶನನ್ನು ಇಷ್ಟಪಡುವ ಕುರಿತು ಈಗಿಂದಲೇ ಯೋಜನೆ ರೂಪಿಸಲಿ ಎಂದು ಆಗ್ರಹಿಸಿದ್ದಾರೆ.ನಾನು ಮೊದಲು ಇಂತಹ ಜಾಗರೂಕ ನಾಗರಿಕರಿಗೆ ಕೃತಜ್ಞನಾಗಿದ್ದೇನೆ. ನಾನು ಸಮಯಕ್ಕಿಂತಾ ಮೊದಲೇ ಆ ವಿಷಯದ ಕುರಿತು ಮಾತನಾಡಬೇಕೆಂದು ಇವರು ಆಗ್ರಹಿಸಿದ್ದಾರೆ. ಈ ಬಾರಿಯ ಸಾರ್ವಜನಿಕ ಗಣೇಶೋತ್ಸವ ಒಂದು ವಿಶೇಷವಾದ ಮಹತ್ವವನ್ನು ಪಡೆದಿದೆ. ಲೋಕಮಾನ್ಯ ತಿಲಕ್ ರವರು ಈ ಮಹಾನ್ ಪರಂಪರೆಯನ್ನು ಪ್ರಾರಂಭಿಸಿದ್ದರು. ಈ ಬಾರಿಯ ಸಾರ್ವಜನಿಕ ಗಣೇಶೋತ್ಸವ 125ನೇ ವರ್ಷದ್ದಾಗಿದೆ. 125 ವರ್ಷ ಮತ್ತು 125 ಕೋಟಿ ದೇಶದ ಜನತೆ – ಲೋಕಮಾನ್ಯ ತಿಲಕ್ ರವರು ಯಾವ ಮೂಲ ಉದ್ದೇಶದಿಂದ ಸಾಮಾಜಿಕ ಏಕತೆ ಮತ್ತು ಸಾಮಾಜಿಕ ಜಾಗರೂಕತೆಗಾಗಿ, ಸಾಮೂಹಿಕತೆಯ ಸಂಸ್ಕೃತಿಗಾಗಿ, ಸಾರ್ವಜನಿಕ ಗಣೇಶೋತ್ಸವವನ್ನು ಪ್ರಾರಂಭಿಸಿದ್ದರೋ; ಅದಕ್ಕಾಗಿ ನಾವು ಮತ್ತೊಮ್ಮೆ ಈ ವರ್ಷದ ಗಣೇಶ ಹಬ್ಬಕ್ಕೆ ಪ್ರಬಂಧ ಸ್ಪರ್ಧೆಗಳನ್ನು ನಡೆಸೋಣ, ಚರ್ಚೆಯ ಸಭೆಗಳನ್ನು ಆಯೋಜಿಸೋಣ, ಲೋಕಮಾನ್ಯ ತಿಲಕ್ ರವರ ಕೊಡುಗೆಯನ್ನು ನೆನೆಯೋಣ ಮತ್ತು ತಿಲಕ್ ರವರ ಕಲ್ಪನೆಯ ದಿಕ್ಕಿನಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಹೇಗೆ ಮುಂದುವರೆಸಬೇಕು, ಅವರ ಯೋಚನೆಗಳಿಗೆ ಹೇಗೆ ಪುಷ್ಟಿ ನೀಡಬೇಕು ಹಾಗೂ ಪರಿಸರದ ರಕ್ಷಣೆಗಾಗಿ ಪರಿಸರ ಸ್ನೇಹಿ ಗಣೇಶ, ಮಣ್ಣಿನಿಂದ ಮಾಡಿದಂತಹ ಗಣೇಶ ಮೂರ್ತಿಗಳನ್ನೇ ಬಳಸೋಣ ಎಂಬುದು ನಮ್ಮ ಸಂಕಲ್ಪವಾಗಿರಲಿ. ಹಾಗೂ ಈ ಬಾರಿ ನಾನು ಬಹಳ ಬೇಗ ತಿಳಿಸಿದ್ದೇನೆ; ಇದರಿಂದ ಮೂರ್ತಿಯನ್ನು ತಯಾರಿಸುವ ನಮ್ಮ ಬಡ ಕುಶಲಕರ್ಮಿಗಳು, ಬಡ ಕಲಾವಿದರು, ಅವರಿಗೆ ಉದ್ಯೋಗ ದೊರೆಯುತ್ತದೆ, ಅವರ ಹೊಟ್ಟೆ ತುಂಬುತ್ತದೆ. ಇದರಲ್ಲಿ ನೀವೆಲ್ಲರೂ ನನ್ನ ಜೊತೆ ಸೇರುತ್ತೀರಿ ಎಂಬ ನಂಬಿಕೆ ನನಗಿದೆ. ಬನ್ನಿ ನಾವು ನಮ್ಮ ಹಬ್ಬಗಳನ್ನು ಬಡವರ ಜೊತೆ ಹಂಚಿಕೊಳ್ಳೋಣ, ಬಡವರ ಆರ್ಥಿಕತೆಯ ಜೊತೆ ಹೊಂದಿಸೋಣ, ಹಬ್ಬದ ನಮ್ಮ ಸಂತೋಷ, ಬಡವನ ಮನೆಯ ಸಮೃದ್ಧಿಯ ಹಬ್ಬವಾಗಲಿ ಎಂಬುದು ನಮ್ಮೆಲ್ಲರ ಪ್ರಯತ್ನವಾಗಬೇಕು. ನಾನು ಎಲ್ಲಾ ದೇಶ ಬಾಂಧವರಿಗೆ ಮುಂಬರುವ ಎಲ್ಲಾ ಹಬ್ಬಗಳಿಗೆ, ಉತ್ಸವಗಳಿಗೆ ಶುಭಹಾರೈಸುತ್ತೇನೆ



ನನ್ನ ಪ್ರಿಯ ದೇಶವಾಸಿಗಳೇ, ಶೈಕ್ಷಣಿಕ ರಂಗದಲ್ಲಾಗಲಿ, ಆರ್ಥಿಕ, ಸಾಮಾಜಿಕ ಇಲ್ಲವೇ ಕ್ರೀಡಾ ರಂಗದಲ್ಲೇ ಆಗಲಿ ನಮ್ಮ ಹೆಣ್ಣು ಮಕ್ಕಳು ನಿರಂತರವಾಗಿ ದೇಶದ ಕೀರ್ತಿಯನ್ನು ಬೆಳಗುತ್ತಿದ್ದಾರೆಂಬುದನ್ನು ನಾವು ನೋಡುತ್ತಿದ್ದೇವೆ. ಹೊಸ ಹೊಸ ಸಾಧನೆಗಳನ್ನು ಮಾಡುತ್ತಿದ್ದಾರೆ. ನಮ್ಮ ಹೆಣ್ಣು ಮಕ್ಕಳ ಮೇಲೆ ದೇಶ ಬಾಂಧವರಿಗೆಲ್ಲ ಹೆಮ್ಮೆ ಎನಿಸುತ್ತಿದೆ. ಇತ್ತೀಚೆಗೆ ನಮ್ಮ ಹೆಣ್ಣು ಮಕ್ಕಳು ಮಹಿಳಾ ಕ್ರಿಕೆಟ್ ವಿಶ್ವ ಕಪ್‌ನಲ್ಲಿ ಅದ್ಭುತ

ಪ್ರದರ್ಶನ ತೋರಿದ್ದಾರೆ. ನನಗೆ ಇದೇ ವಾರ ಆ ಎಲ್ಲ ಕ್ರೀಡಾಪಟುಗಳೊಂದಿಗೆ ಭೇಟಿಯಾಗುವ ಅವಕಾಶ ಲಭಿಸಿತು. ಅವರೊಂದಿಗೆ ಮಾತಾಡಿ ನನಗೆ ಬಹಳ ಆನಂದವಾಯಿತು. ಆದರೆ ವಿಶ್ವಕಪ್ ಗೆಲ್ಲಲಿಲ್ಲ ಎನ್ನುವ ವಿಷಾದ ಅವರಲ್ಲಿ ಬೇರೂರಿತ್ತು ಎಂಬುದು ನನ್ನ ಅನುಭವಕ್ಕೆ ಬಂತು. ಅವರ ಮುಖದ ಮೇಲೆ ಆ ಒತ್ತಡ ಇತ್ತು. ಆತಂಕವಿತ್ತು. ಆ ಹೆಣ್ಣುಮಕ್ಕಳಿಗೆ ನಾನು ಬೇರೆಯೇ ಲೆಕ್ಕಾಚಾರ ಹೇಳಿದೆ. ಅವರಿಗೆ ಹೀಗೆ ಹೇಳಿದೆ. ನೋಡಿ, ಇದು ಮೀಡಿಯಾ ಯುಗ, ಇದು ಅಪೇಕ್ಷೆಗಳನ್ನು ಎಷ್ಟು ಹೆಚ್ಚಿಸಿದೆ ಎಂದರೆ ಸಫಲತೆ ಸಿಗದೇ ಹೋದಾಗ ಅದು ಆಕ್ರೋಶವಾಗಿಯೂ ಪರಿವರ್ತನೆಗೊಳ್ಳುತ್ತದೆ. ಭಾರತದ ಕ್ರೀಡಾಳುಗಳು ವಿಫಲವಾದಾಗ ದೇಶದ ಜನತೆಯ ಕೋಪ ಅವರ ಮೇಲೆ ವ್ಯಕ್ತವಾದಂತಹ ಎಷ್ಟೋ ಕ್ರೀಡೆಗಳನ್ನು ನಾವು ನೋಡಿದ್ದೇವೆ. ಕೆಲವರಂತೂ ಗೌರವದ ಎಲ್ಲೆ ಮೀರಿ ಮನಸ್ಸಿಗೆ ನೋವಾಗುವಂತಹ ಮಾತುಗಳನ್ನಾಡಿ ಬಿಟ್ಟಾಗ, ಬರೆದು ಬಿಟ್ಟಾಗ ಬಹಳ ನೋವಾಗುತ್ತದೆ. ಆದರೆ ನಮ್ಮ ಹೆಣ್ಣು ಮಕ್ಕಳು ವಿಶ್ವ ಕಪ್ ಗೆಲ್ಲುವಲ್ಲಿ ವಿಫಲರಾದಾಗ ಆ ಸೋಲನ್ನು 125 ಕೋಟಿ ದೇಶವಾಸಿಗಳು ತಮ್ಮ ಹೆಗಲ ಮೇಲೆ ಹೊತ್ತುಕೊಂಡದ್ದು ಮಾತ್ರ ಇದೇ ಮೊದಲ ಬಾರಿ. ಆ ಭಾರವನ್ನು ನಮ್ಮ ಹೆಣ್ಣು ಮಕ್ಕಳ ಹೆಗಲಿಗೇರಿಸಲಿಲ್ಲ. ಅಷ್ಟೇ ಅಲ್ಲ, ನಮ್ಮ ಹೆಣ್ಣು ಮಕ್ಕಳ ಪ್ರದರ್ಶನವನ್ನು ಕೊಂಡಾಡಿದರು, ಅವರನ್ನು ಗೌರವಿಸಿದರು.

ನಾನು ಇದನ್ನೊಂದು ಧನಾತ್ಮಕ ಬದಲಾವಣೆ ರೂಪದಲ್ಲಿ ನೋಡುತ್ತೇನೆ. 'ಇಂಥ ಸೌಭಾಗ್ಯ ಕೇವಲ ನಿಮಗೆ ಮಾತ್ರ ದೊರೆತಿದೆ, ನೀವು ಸಫಲರಾಗಿಲ್ಲ ಎಂಬುದನ್ನು ಮನಸ್ಸಿನಿಂದ ತೆಗೆದು ಹಾಕಿ, ಪಂದ್ಯ ಗೆಲ್ಲಲಿ ಗೆಲ್ಲದೇ ಇರಲಿ ನೀವು 125 ಕೋಟಿ ಜನರ ಮನ ಗೆದ್ದಿದ್ದೀರಿ' ಎಂದು ಅವರಿಗೆ ನಾನು ಹೇಳಿದೆ.ನಮ್ಮ ದೇಶ ಬೆಳಗುವಲ್ಲಿ ದೇಶದ ಯುವ ಪೀಳಿಗೆ, ವಿಶೇಷವಾಗಿ ನಮ್ಮ ಹೆಣ್ಣು ಮಕ್ಕಳು ಸಾಕಷ್ಟು ಶ್ರಮಿಸುತ್ತಿದ್ದಾರೆ. ನಾನು ಮತ್ತೊಮ್ಮೆ ಯುವ ಪೀಳಿಗೆಯನ್ನು, ವಿಶೇಷವಾಗಿ ಹೆಣ್ಣು ಮಕ್ಕಳನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಶುಭ ಹಾರೈಸುತ್ತೇನೆ.ನನ್ನ ಪ್ರಿಯ ದೇಶ ಬಾಂಧವರೇ, ಆಗಸ್ಟ್ ಕ್ರಾಂತಿಯನ್ನು ಮತ್ತೊಮ್ಮೆ ಸ್ಮರಿಸುತ್ತಿದ್ದೇನೆ, ಮತ್ತೊಮ್ಮೆ ಆಗಸ್ಟ್ 9ರ ಬಗ್ಗೆ ನೆನಪಿಸುತ್ತಿದ್ದೇನೆ, ಆಗಸ್ಟ್ 15ರ ಬಗ್ಗೆ ನೆನಪಿಸುತ್ತಿದ್ದೇನೆ, 2022 ಸ್ವಾತಂತ್ರ್ಯದ 75ನೇ ವರ್ಷಾಚರಣೆ ಎಂದು ಮತ್ತೆ ನೆನಪಿಸುತ್ತಿದ್ದೇನೆ. ಪ್ರತಿಯೊಬ್ಬ ದೇಶವಾಸಿಯೂ ಸಂಕಲ್ಪ ಕೈಗೊಳ್ಳಲಿ, 5 ವರ್ಷಗಳಲ್ಲಿ ಆ ಸಂಕಲ್ಪ ಸಾಧಿಸುವ ಮಾರ್ಗಸೂಚಿಯನ್ನು ಸಿದ್ಧಪಡಿಸಲಿ. ನಾವೆಲ್ಲರೂ ದೇಶವನ್ನು ಇನ್ನಷ್ಟು ಉತ್ತುಂಗಕ್ಕೇರಿಸಬೇಕಿದೆ. ಬನ್ನಿ ನಾವೆಲ್ಲ ಒಂದಾಗಿ ಸಾಗೋಣ. ಏನಾದರೂ ಕೆಲಸ ಮಾಡುತ್ತಲೇ ಸಾಗೋಣ. ದೇಶದ ಭಾಗ್ಯ, ಭವಿಷ್ಯ ಉಜ್ವಲಗೊಳ್ಳುತ್ತದೆ ಎಂಬ ದೃಢ ವಿಶ್ವಾಸದೊಂದಿಗೆ ಮುನ್ನಡೆಯೋಣ. ಶುಭ ಹಾರೈಕೆಗಳು, ಅನಂತ ಧನ್ಯವಾದಗಳು. ❑




### ರಾಷ್ಟ್ರೀಯ ಲಾಭಕೋರತನ ತಡೆ ಪ್ರಾಧಿಕಾರ

ಅತೀವ ಲಾಭಕ್ಕಾಗಿ ಬೆಲೆಗಳ ಏರಿಕೆಯಾಗುವುದನ್ನು ತಡೆಗಟ್ಟಲು ಇತ್ತೀಚೆಗೆ ಜಾರಿಯಾದ ಸರಕು ಮತ್ತು ಸೇವಾ ತೆರಿಗೆ ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಜಿಎಸ್‌ಟಿ ಲಾಭವನ್ನು ಗ್ರಾಹಕರಿಗೆ ಒದಗಿಸುವುದು ಇದರ ಉದ್ದೇಶ. ಈ ಬಗ್ಗೆ ನಿಗಾ ವಹಿಸಲು ರಾಷ್ಟ್ರೀಯ ಲಾಭಕೋರತನ ತಡೆ ಪ್ರಾಧಿಕಾರ ರಚಿಸಲು ಸರ್ಕಾರ ಪ್ರಕ್ರಿಯೆ ಪ್ರಾರಂಭಿಸಿದೆ.

ನಿಯಮಾವಳಿ ಪ್ರಕಾರ ಈ ಪ್ರಾಧಿಕಾರ ಮೂರು ಹಂತಗಳದ್ದಾಗಿದೆ. ಲಾಭಕೋರತನ ತಡೆಗಾಗಿ ಸ್ಥಾಯಿ ಸಮಿತಿ, ರಾಜ್ಯಮಟ್ಟದ ಪರಿಶೀಲನಾ ಸಮಿತಿ ಮತ್ತು ರಾಷ್ಟ್ರೀಯ ಲಾಭಕೋರತನ-ತಡೆ ಪ್ರಾಧಿಕಾರ ಇವುಗಳಲ್ಲಿ ಸೇರಿವೆ.

### ನಿಮಗಿದು ತಿಳಿದಿದೆಯೇ?


ನಿಯಮಾವಳಿಗಳ ಪ್ರಕಾರ ಜಿಎಸ್‌ಟಿ ಜಾರಿ ಪೂರ್ವ ಹಾಗೂ ನಂತರ ಅವಧಿಯ ನಿವ್ವಳ ಲಾಭ ಪ್ರಮಾಣವನ್ನು ಹೋಲಿಕೆ ಮಾಡಿ, ತುಲನೆ ಮಾಡಲಾಗುತ್ತದೆ. ನಿಯಮ ಉಲ್ಲಂಘನೆ ಮಾಡದ ಪ್ರಕರಣಗಳಲ್ಲಿ ವ್ಯಾಪಾರಿಗೆ / ಸಂಸ್ಥೆ ವಿರುದ್ಧ ಪ್ರಾಧಿಕಾರ ತಕ್ಷಣ ಕ್ರಮ ಕೈಗೊಳ್ಳುತ್ತದೆ. ಬೆಲೆ ಇಳಿಸುವಂತೆ ಹಾಗೂ ತೆರಿಗೆ ಇಳಿಕೆಯ ಪ್ರಯೋಜನವನ್ನು ಶೇ. 18ರ ಬಡ್ಡಿಯೊಂದಿಗೆ ಖರೀದಿದಾರರಿಗೆ ತಲುಪಿಸುವಂತೆ ಅದು ಆದೇಶಿಸಲಿದೆ.

ಇದಲ್ಲದೆ ಪ್ರಾಧಿಕಾರ ದಂಡ ವಿಧಿಸಬಹುದಾಗಿದೆ. ನೊಂದಣಿಯನ್ನು ರದ್ದುಪಡಿಸಬಹುದಾಗಿದೆ. ಯಾವುದೇ ಸೂಪರ್ ಮಾರ್ಕೆಟ್‌ಗಳಲ್ಲಿ ಜಿಎಸ್‌ಟಿ ಕಾರಣದಿಂದ ಬೆಲೆ ಹೆಚ್ಚಳವಾಗಿದ್ದು ಗಮನಕ್ಕೆ ಬಂದರೆ ಅದನ್ನು ರಾಷ್ಟ್ರೀಯ ಪ್ರಾಧಿಕಾರಕ್ಕೆ ದೂರ ನೀಡಬಹುದಾಗಿದೆ.

ಪ್ರಾಧಿಕಾರಗಳು ನೀಡುವ ಆದೇಶ ಕುರಿತಂತೆ ಹೈ ಕೋರ್ಟ್‌ಗಳಲ್ಲಿ ಮಾತ್ರ ಮನವಿ ಸಲ್ಲಿಸಬಹುದಾಗಿದೆ.

ಜಿಎಸ್‌ಟಿಯನ್ನು ಈಗಾಗಲೇ ಜಾರಿಗೊಳಿಸಿದ ಸಿಂಗಾಪುರ ಮತ್ತು ಆಸ್ಟ್ರೇಲಿಯಾ ದೇಶಗಳ ಅನುಭವ ವಿಶ್ಲೇಷಿಸಿದಾಗ ಜಿಎಸ್‌ಟಿ ಜಾರಿ ನಂತರ ಅಲ್ಲಿ ಹಣದುಬ್ಬರ ಹೆಚ್ಚಾಗಿರುವುದು ಕಂಡು ಬಂದಿದೆ.

ಮಲೇಶಿಯಾ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಮಲೇಶಿಯಾ ಕಟ್ಟು ನಿಟ್ಟಾಗಿ ಲಾಭಕೋರತನ ತಡೆ ಕ್ರಮಗಳನ್ನು ಕೈಗೊಂಡು ಪರಿಸ್ಥಿತಿ ನಿಭಾಯಿಸಿತು. ❑



ಬೆಳೆ ವಿಮಾ ಯೋಜನೆಗಳ ಪರಿಣಾಮಕಾರಿ ಜಾರಿಗೆ ರಾಜ್ಯಗಳು ತನ್ನದೇ ಆದ ವಿಮಾ ಕಂಪನಿಗಳನ್ನು ಆರಂಭಿಸುವಂತೆ ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೂ ಸೂಚನೆ ನೀಡಿದೆ. ಅಲ್ಲದೆ, ಹಾಲಿ ಇರುವ ಕಂಪನಿಗಳು ಅವ್ಯವಹಾರದಲ್ಲಿ ತೊಡಗಿದರೆ ಅಂತಹ ಕಂಪನಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದೆ. ಲೋಕ ಸಭೆಯಲ್ಲಿ ಇತ್ತೀಚೆಗೆ ಕೃಷಿ ಸಮಸ್ಯೆ ಕುರಿತ ಚರ್ಚೆಗೆ ಉತ್ತರ ನೀಡಿದ ಕೃಷಿ ಸಚಿವ ಶ್ರೀ ರಾಧಾ ಮೋಹನ್ ಸಿಂಗ್, ಮಹತ್ವಾಕಾಂಕ್ಷಿಯ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಅನುಷ್ಠಾನದಲ್ಲಿ ಕೆಲವು ಸಮಸ್ಯೆಗಳಿವೆ ಮತ್ತು ರಾಜ್ಯಗಳಿಗೆ ತಮ್ಮದೇ ಆದ ವಿಮಾ ಕಂಪನಿಗಳನ್ನು ಆರಂಭಿಸುವಂತೆ ಸೂಚಿಸಲಾಗಿದೆ ಎಂದರು.

* * *

ಲೋಕಸಭೆ ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ವಿಧೇಯಕ 2017ಕ್ಕೆ ಧ್ವನಿಮತದ ಮೂಲಕ ತನ್ನ ಅನುಮೋದನೆ ನೀಡಿದೆ.

# ವಾರ್ತಾ ವಿಶೇಷ

ಈ ಮಸೂದೆಯು ಬ್ಯಾಂಕ್‌ಗಳ ಒತ್ತಡದ ಆಸ್ತಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿಭಾಯಿಸಲು ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949ಕ್ಕೆ ತಿದ್ದುಪಡಿ ಮಾಡುವ ಗುರಿ ಹೊಂದಿತ್ತು. ಒತ್ತಡದ ಆಸ್ತಿಗಳು ಅಂದರೆ ಸಾಲಗಾರರು ಮರುಪಾವತಿ ಮಾಡದೆ ಬಾಕಿ ಉಳಿಸಿಕೊಂಡ ಸಾಲವಾಗಿರುತ್ತದೆ ಅಥವಾ ಅಲ್ಲಿ ಸಾಲವನ್ನು ಪುನರ್ ವಿನ್ಯಾಸಗೊಳಿಸಲಾಗಿರುತ್ತದೆ. ಈ ವರ್ಷ ಮೇ 4ರಂದು ಹೊರಡಿಸಲಾಗಿದ್ದ ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ಸುಗ್ರೀವಾಜ್ಞೆ 2017ಕ್ಕೆ ಬದಲಾಗಿ ಈ ವಿಧೇಯಕವು ಜಾರಿಗೆ ಬರಲಿದೆ. ನಿರ್ದಿಷ್ಟ ಒತ್ತಡದ ಆಸ್ತಿಗಳನ್ನು ಬಗೆಹರಿಸಲು ದಿವಾಳಿ ಪರಿಹಾರ ಪ್ರಕ್ರಿಯೆಯನ್ನು ಕೈಗೊಳ್ಳುವಂತೆ ಬ್ಯಾಂಕಿಂಗ್ ಕಂಪನಿಗಳಿಗೆ ಭಾರತೀಯ ರಿಜರ್ವ್ ಬ್ಯಾಂಕ್ ನಿರ್ದೇಶನ ನೀಡುವ ಅಧಿಕಾರವನ್ನು ನೀಡಲು ಕೇಂದ್ರ ಸರ್ಕಾರಕ್ಕೆ ಈ ಶಾಸನವು ಅವಕಾಶ ನೀಡುತ್ತದೆ. ವಿಧೇಯಕದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡಿದ ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ, ದೇಶದ ಆರ್ಥಿಕ ಪ್ರಗತಿಗೆ ಬೆಂಬಲ ನೀಡಲು ಬಲವಾದ ಬ್ಯಾಂಕಿಂಗ್ ವ್ಯವಸ್ಥೆಯ ಅಗತ್ಯವಿದೆ ಎಂದು ಹೇಳಿದರು. ಬ್ಯಾಂಕಿಂಗ್ ವ್ಯವಸ್ಥೆ ಚಲನಶೀಲವಾಗಿದ್ದರೆ ಆಗ ಅದಕ್ಕೆ ವಾಣಿಜ್ಯ ಮತ್ತು ಕೈಗಾರಿಕಾ ಅಗತ್ಯಗಳಿಗೆ ಸಾಲ ನೀಡುವ ಸಾಮರ್ಥ್ಯ ಇರುತ್ತದೆ ಎಂದು ತಿಳಿಸಿದರು.

* * *

ಕೇಂದ್ರೀಯ ನೇರ ತೆರಿಗೆಗಳ ಮಂಡಳಿ – ಸಿಬಿಡಿಟಿ, ತೆರಿಗೆ ಪಾವತಿದಾರರೊಂದಿಗೆ ಏಕಪಕ್ಷೀಯ ಮುಂಗಡ ದರ ನಿಗದಿ– ಯುಎಪಿಎ ಕುರಿತ ಒಂಭತ್ತು ಒಪ್ಪಂದಗಳನ್ನು ಮಾಡಿಕೊಂಡಿದೆ. ಸಹಿ ಮಾಡಲ್ಪಟ್ಟಿರುವ ಕೆಲ ಯುಎಪಿಎಗಳು, ಹಿಂಪಡೆಯುವ ಅವಕಾಶಗಳನ್ನು ಸಹ ಹೊಂದಿರುತ್ತವೆ ಎಂದು ಹಣಕಾಸು ಸಚಿವಾಲಯದ ಹೇಳಿಕೆಗಳು ತಿಳಿಸಿವೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.

P.S. : For Renewal / change in address, please quote your subscription number

**To Subscribe Online**

Log on to

**http://publicationsdivision.nic.in/**, *in collaboration with* **bharatkosh.gov.in**